ಸಂಪುಟ ೪ ಸಂಚಿಕೆ ೪

ಕಲ್ಯಾಣ ಕಿರಣ



ಜುಲೈ ಆಗಸ್ಟ ೧೯೭೪

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಆಗಸ್ಟ್ ೧೯೭೮ — ಸಂಪುಟ : ೧

ಬಸವಶಕೆ ೮೭೨ — ಸಂಚಿಕೆ : ೧

ಬಿಡಿ ಪ್ರತಿ ಒಂದು ರೂಪಾಯಿ — ವಾರ್ಷಿಕ ಚಂದಾ ಹನ್ನೆರಡು ರೂಪಾಯಿ

ಈ ಬೆಳಕಿನಲ್ಲಿ ಸುಳಿದಾಡಿದಾಗ ?


ಮುಖಪುಟ : ಆದರ್ಶ ಭಾರತ

ಕಲ್ಯಾಣ ಕಿರಣ

ತುಂಗಾ ತರಂಗಿಣಿಗೆ — **ನುಡಿ-ನೈವೇದ್ಯ**

ಜುಳು ಜುಳು ಮಂಜುಳ ನಾದದ ತುಂಗೆ
ಬಳುಕು ನಡಿಗೆಯ ಸೌಂದರ್ಯದ ಶೃಂಗೆ
ಬೆಟ್ಟದ ಒಡಲೊಳು ಒಯ್ಯಾರದಿ ಸಾಗುವ ತರುಣಿ
ಬಯಲಿನ ಮಡಿಲೊಳು ಗಂಭೀರದಿ ನಡೆಯುವ ಗೃಹಿಣಿ,
ಕಲ್ಗಳ ತಾಡಿಸಿ ಹಾಲಾಗುವ ಪರಿ,
ಸೂರ್ಯನ ಕಿರಣದ ಆಲಿಂಗನದೊಳು
ಮಿಂಚಿನ ಬಳ್ಳಿಯ ಸಂಚಲು ಬೆಳೆಸುತ
ವ್ಯೋಮನ ಪುಳಕಿಸಿ ಹರಿಯುವ ವೈಖರಿ !
ಸಪ್ತಸ್ವರದೊಳು ವಾದ್ಯವ ನುಡಿಸುತ
ಶಿವನನು ಕರೆಯುವ ಹೃದಯದ ಮೊರೆಯೋ ?
ಬೇಸರವಿಲ್ಲದೆ ಗುರಿ ಎಡೆ ಹರಿಯುವ
ಕಾತುರ-ನಿಷ್ಠೆಯ ಪ್ರೈಜೆಯ ಕರೆಯೋ ?
ಹೋದೆಡೆಯಲ್ಲಿ ಕ್ಷೇತ್ರವ ನಿರ್ಮಿಸಿ
ಉಸುಕಿನ ನಡೆಮಡಿ ದೇವಗೆ ಹಾಸುತ
ಗಿರಿಯನು ಕೊರೆಯುತ, ಬಂಡೆಯ ತೆವಳುತ
ಧಬೆಧಬೆಯಾಗಿ ಧುಮುಕುತ, ಓಡುತ !
ಹೊನ್ನಿನ ಬಣ್ಣದ ಸೀರೆಯನುಟ್ಟು
ಚಂದದ ಅಲೆಗಳ ನಿರಿಗೆಯ ಕಟ್ಟಿ
ಚೆಲುವಿನ ಖಣಿಯೋ ರನ್ನದ ಚೆನ್ನೆಯೆ
ಸಹಜಲ ಕನ್ನೆ, ಸಚ್ಚಿದಾನಂದನ ಮನೆ.

— ಮಾತಾಜಿ



ಬಸವ ಧರ್ಮವು ಒಂದು ವಿಶ್ವಧರ್ಮವು ಎಂದು
ಅರಿಯದಿದ್ದರೆ ನೀನು ಅಲ್ಲ ನಿಜ ಮನುಜ
ಬಸವ ಧರ್ಮದ ರತುನ ಬೆಲೆಯನರಿಯಲು ನೀನು
ನಿತ್ಯ ನಿತ್ಯವೂ ಓದು ಕಲ್ಯಾಣ ಕಿರಣ.

—ಕೆ. ಜಿ. ಮಾಸೆಟ್ಟಿ ಬೀದರ

* * * *

ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆಯವರ ಚರಣ ಸನ್ನಿಧಾನಗಳಿಗೆ (ಡಿ. ಗುರುಮಲ್ಲಪ್ಪನ) ಹೃತ್ಪೂರ್ವಕ ಪ್ರಣಾಮಗಳು.


'ಕಲ್ಯಾಣ ಕಿರಣ' ನಮ್ಮ ನಾಡಿನ ಆಧ್ಯಾತ್ಮ ಮತ್ತು ಭಕ್ತಿಯ ಹಿರಿಮೆಯನ್ನು ಬೆಳಗುವ ಅತಿ ಶ್ರೇಷ್ಠ ಪತ್ರಿಕೆ ಎಂದು ನನ್ನ ಅಭಿಪ್ರಾಯ. ದೇಶದಲ್ಲಿ ನೈತಿಕ ಬೆಳವಣಿಗೆಯಾಗಬೇಕಾದರೆ ಈ ಬಗೆಯ ಪತ್ರಿಕೆಗಳ ಅವಶ್ಯಕತೆ ಬಹಳವಾಗಿದೆ. ಇಂತಹ ಒಳ್ಳೆಯ ಧ್ಯೇಯವನ್ನೊಳಗೊಂಡ ಈ ಪತ್ರಿಕೆಯ ಪ್ರತಿ ಪುಟವೂ ಆಧ್ಯಾತ್ಮ ವಿಚಾರಕ್ಕೆ ಮೀಸಲಾಗಿರಬೇಕೆನ್ನುವುದು ನನ್ನ ಆಸೆ. ಪತ್ರಿಕೆಗಳ ಪ್ರಮುಖ ಆಕರ್ಷಣೆಯಾದ ಜಾಹಿರಾತಿಗೆ ಕಲ್ಯಾಣ ಕಿರಣದಲ್ಲಿ ಜಾಗವಿಲ್ಲದ್ದು ಅದರ ಶ್ರೇಷ್ಠತೆಯನ್ನು ಮತ್ತೂ ಹೆಚ್ಚಿಸಿದೆ.

ಕಲ್ಯಾಣ ಕಿರಣದಲ್ಲಿ ಹೊಳೆಯುವ "ನುಡಿ-ನೈವೇದ್ಯ" "ಮಾತೃ ಹರಕೆ" "ವಚನ ನವನೀತ" "ಗೀತಾಮೃತ" "ಸ್ಮರಣ-ಕಿರಣ" "ಬಸವ ಬೀಡಿನಿಂದ ಆಂಗ್ಲ ನಾಡಿಗೆ"—ಈ ಶೀರ್ಷಿಕೆಗಳಲ್ಲಿ ಹೊರಹೊಮ್ಮಿ ಬರುವ ವಿಚಾರಗಳಂತೂ ತುಂಬಾ ಸುಂದರವೂ, ಸಮಯೋಚಿತವೂ, ಪಾಂಡಿತ್ಯ ಪೂರ್ಣವೂ, ವಿಚಾರಪೂರಿತವೂ ಆದವುಗಳಾಗಿವೆ.

"ಮಾತೃಹರಕೆ"ಗೆ ಸಮನಾದ ಲೇಖನ ಬೇರೊಂದಿಲ್ಲ. "ವಿಕೃತ ಭಾರತ", "ಕ್ರೈಸ್ತ ಶಾಲಾ ಶಿಕ್ಷಣ ಮತ್ತು ಸಂಸ್ಕೃತಿ ಪತನ" ಇವು ಇಂದಿನ ವಿಚಾರವಂತರು, ನಾಡಿನ ನೇತಾರರು, ಸಂಸ್ಕೃತಿಯ ಉದ್ಧಾರಕರು ಬಹು ಮುಖ್ಯವಾಗಿ ಗಮನಿಸಬೇಕಾದ ವಿಚಾರಗಳು. ಇವರುಗಳು ಮಾತೃ ಹರಕೆಯಲ್ಲಿ ಮೂಡಿಬಂದಿರುವ ಗಹನವಾದ ವಿಚಾರಗಳತ್ತ ಗಮನಹರಿಸಬೇಕಾದುದು ಅತ್ಯಂತ ಅವಶ್ಯವಾಗಿದೆ.

ದೊಡ್ಡಾಪುರಂ.

ಡಿ. ಗುರುಮಲ್ಲಪ್ಪ



ನಾವು ಸಾಧಿಸಿದ್ದೇನು ?

ಕಾಲ ಚಕ್ರ ಉರುಳುತ್ತಾ ತನ್ನ ಕೊರೆತವನ್ನು ರಾಷ್ಟ್ರ ಜೀವನದ ಪಥದ ಮೇಲೆ ಉಂಟು ಮಾಡಿ ಸಾಗಿದೆ. ನಾವು ಸ್ವತಂತ್ರರಾಗಿ ಇಲ್ಲಿಗೆ ೩೧ ವರುಷಗಳು ಸಂದವು. ಈ ಅವಧಿಯಲ್ಲಿ ಸಾಧಿಸಬೇಕಾದುದನ್ನು ಸಾಧಿಸಿದ್ದೇವೆಯೇ ಎಂಬುದರ ಅಂತರಾವಲೋಕನ ಮಾಡಿಕೊಳ್ಳುವದವಶ್ಯಕ. ವ್ಯಕ್ತಿಗೇ ಆಗಲಿ, ರಾಷ್ಟ್ರಕ್ಕೇ ಆಗಲಿ ಇರುವಂಥವು ಮೂರು ಮುಖ-ಭೌತಿಕ, ನೈತಿಕ ಮತ್ತು ಅಧ್ಯಾತ್ಮಿಕ. ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಅನ್ನ, ಅರಿವೆ, ಆಶ್ರಯ, ಔಷಧ, ಅರಿವು ಇವು ನಿರಾಯಾಸವಾಗಿ, ಕೊರತೆ ಇಲ್ಲದೆ ಸಿಗಲ್ಪಡಬೇಕು. ಆವಶ್ಯಕವಿದ್ದ ಎಲ್ಲರಿಗೂ (ಆಸೆಯಿದ್ದ ಕೆಲವರಿಗೇ ಅಲ್ಲ) ಎನ್ನುವುದೇ ಸಮಾಜವಾದ. ಇದು ಉಪಜೀವನದ ವ್ಯಾಪ್ತಿಗೆ ಸಂಬಂಧಿಸಿದ ಭೌತಿಕ ಮುಖ (Material aspect). ಇಹಬಾಳ್ವೆಯ ಬುನಾದಿ ಇದು. ಈ ಅಂಗ ತೃಪ್ತಿಯಾಗದೆ ಬದುಕಿನ ಸಾಮಾನ್ಯ ತೃಪ್ತಿಯೂ ಸಿಗದು. ಅದಕ್ಕೆಂದೇ ದೇವರ ದಾಸಿಮಯ್ಯನವರು ಹೇಳುತ್ತಾರೆ :

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೊಡೆ
ವಿಷವೇರಿತ್ತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕೆ ವಿಷವನಿಳುಹ ಬಲ್ಲಡೆ
ವಸುಧೆಗೆ ಆತನೇ ಗಾರುಡಿಗ ಕಾಣಾ ರಾಮನಾಥ.

ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ, ಕಣ್ಣು ತುಂಬ ನೋಟ, ಭವ್ಯ ಭವನಗಳು, ಪಂಚತಾರ ಹೋಟೆಲು, ಗಗನಚುಂಬಿ ಕಟ್ಟಡ, ಇಂಥವನ್ನು ಸಾಧಿಸಿದರೆ ದೇಶ ಸುಭದ್ರವಾದೀತೆ? ಇಲ್ಲ. ಅಂತೆಯೇ ಹೇಳುತ್ತಾನೆ ಎಮರ್‌ಸನ್ :

"The truest test of civilization is not the census nor the size of cities, nor the crops, no, but the kind of men the country turns out."

ನಿಜ. ಒಂದು ಪರಂಪರೆ, ನಾಗರಿಕತೆಯನ್ನು ಅಳೆಯುವ ಮಾಪನ ಜನಸಂಖ್ಯೆಯಲ್ಲ, ನಗರಗಳ ಗಾತ್ರವಲ್ಲ, ಬೆಳೆಗಳ ಸಂಮೃದ್ಧಿಯಲ್ಲ. ಯಾವ ಬಗೆಯ ಜನಾಂಗವನ್ನು ನಿರ್ಮಾಣ ಮಾಡುತ್ತೇವೆ ಎಂಬುದು. ದಯೆ, ಔದಾರ್ಯ, ಮಾನವೀಯತೆ, ಭ್ರಾತೃತ್ವ ಇಂಥ ನೈತಿಕ ಮೌಲ್ಯಗಳಿಲ್ಲದಂಥ ಸಮಾಜ ಕಟ್ಟಿದರೇನಂತೆ. ಅದು ಭೌತಿಕ ವ್ಯಾಪ್ತಿಗೆ ಸಂಬಂಧಿಸಿದ ಪುರುಷಾರ್ಥಗಳಾದ ಸುಖ-ಭೋಗಗಳನ್ನು ಕೊಟ್ಟೀತೇ ವಿನಾ ಮನೋವ್ಯಾಪ್ತಿಗೆ ಸೇರಿದ ಶಾಂತಿ, ಸಮಾಧಾನಗಳನ್ನಲ್ಲ. ಅಂತಃಕರಣಗಳು ವಿಕಾಸವಾಗಿ, ಸದ್ಗುಣಗಳು ಮೂಡಿ, ನಿತ್ಯಾನಿತ್ಯ ವಿವೇಕ ಪ್ರಜ್ಞೆ ಕೂಡಿದ ನೀತಿವಂತಿಕೆಯ ಸಮಾಜ ರಚನೆ ಬೇಕು.

ಈ ಎರಡು ಮೌಲ್ಯಗಳಿಂದ ಕೂಡಿದುದಷ್ಟೇ ಅಲ್ಲ ಅಧ್ಯಾತ್ಮಜ್ಞಾನದಿಂದ ಪರಿಪ್ಲುತವಾದ ಸಮಾಜ ರಚನೆ ಆವಶ್ಯಕ. ಏಕೆಂದರೆ ಅಧ್ಯಾತ್ಮ ಪ್ರಜ್ಞೆ ಸ್ವಯಂ-ಸ್ವೀಕೃತ ಶಿಸ್ತನ್ನು, ಸರಳತೆ-ಧರ್ಮಭೀರುತ್ವಗಳನ್ನು ಕಲಿಸುತ್ತದೆ. ಮನುಷ್ಯನ ಸ್ವಾರ್ಥ-ದುರಾಕಾಂಕ್ಷೆಗಳಿಗೆ ತಡೆಯನ್ನು ಹಾಕಿ, ಬದುಕಿನ ದೋಣಿಯು ದಡವನ್ನು ಮುಟ್ಟಬೇಕಾಗಿರುವದೆಂಬ ಅರಿವಿನ ಪ್ರಜ್ಞೆಯನ್ನು ಸದಾ ಜಾಗೃತವಾಗಿರಿಸುತ್ತದೆ. ತತ್ತ್ವಜ್ಞಾನಿ ನಿಶೆ ಹೇಳುವಂತೆ, He who knows a "why" of living surmounts almost every' 'how". ಬಾಳಿನ ಉದ್ದೇಶವನ್ನರಿತು ಸಾಗುವವನಿಗೆ ಹೇಗೆ ಸಾಗಬೇಕೆಂಬರಿವು ಮೂಡುವದು ಕಷ್ಟಸಾಧ್ಯವೇನಲ್ಲ. ಹೀಗೆ ಭೌತಿಕ, ನೈತಿಕ ಮತ್ತು ಅಧ್ಯಾತ್ಮಿಕ-ಮೂರೂ ಮೌಲ್ಯಗಳನ್ನು ಬಿತ್ತಿದಾಗ ಸಂಪೂರ್ಣಕ್ರಾಂತಿ ವ್ಯಕ್ತಿ, ಸಮಾಜ, ರಾಷ್ಟ್ರ ಮೂರರಲ್ಲೂ ಸಾಧ್ಯ.

ಹಾಗಾದರೆ ನಾವು ಎಷ್ಟರಮಟ್ಟಿಗೆ ಸಾಧಿಸಿದ್ದೇವೆ ಈ ಮೂರನ್ನು. ಎಲ್ಲರಿಗೂ ಮೂಲಭೂತ ಆವಶ್ಯಕತೆಗಳಾದ-ಬಸವಣ್ಣನವರು ಹೇಳುವ ಶಿವ ಪಂಚಾಯತಗಳು ಅನ್ನ, ಅರಿವೆ, ಆಶ್ರಯ, ಅವುಷಧ, ಅರಿವು ಸಮಾನವಾಗಿ ಸಿಗುತ್ತಿವೆಯೆ? ನಿಜವೆಂದು ಹೇಳುವುದಕ್ಕೆ ಎಂಟೆದೆ ಬೇಕು. ಒಂದೆಡೆ ಶ್ರೀಮಂತರ ಬಂಗಲೆಗಳು ಮುಗಿಲಿನೆಡೆಗೆ ಏರುತ್ತಿದ್ದರೆ, ಬಡವರ ಗುಡಿಸಲುಗಳು ನೆಲಕ್ಕಿಳಿಯುತ್ತಿವೆ. ಭೂಮಿಯನ್ನೇ ಹಾಸುಗೆಯಾಗಿ, ಆಕಾಶವನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡು ಮಲಗುವವರ ಸಂಖ್ಯೆ ಬೆಳೆಯುತ್ತಿದೆ. ಒಬ್ಬನ ಹೊಟ್ಟೆ ಮುಂಡೆ ಸರಿದು ದಾರಿಯನ್ನು ಮರೆ ಮಾಡುತ್ತಿದ್ದರೆ, ಇನ್ನೊಬ್ಬನದು ಬೆನ್ನಿಗಂಟುತ್ತಿದೆ. ತನ್ನದೇ ಆದ ಕಾರ್ಮಿಕ

ಸಂಘ, ಒಕ್ಕೂಟ ಇದ್ದವರು ಸಾಮೂಹಿಕ ದನಿಯಲ್ಲಿ ಕೂಗಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳುತ್ತಿದ್ದರೆ, ಒಂಟಿ ಬಡಕನಾದ, ಭಾರತದ ಬೆನ್ನೆಲುಬೆಂದು ಕವನಗಳನ್ನು ಬರೆಸಿಕೊಂಡು ಹೊಗಳಿಸಿಕೊಳ್ಳುವ ರೈತನ ಕೊರಲದನಿ ಗಂಟಲಲ್ಲೇ ಕೊರಕೊರ ಎನ್ನುತ್ತಿದೆ. ಆಸೆ-ಆಕಾಂಕ್ಷೆಗಳ ವ್ಯಾಪ್ತಿ ವಿಸ್ತಾರಗೊಂಡಂತೆ, ಜೀವನದ ಮಟ್ಟವನ್ನು ವೈಭವಿಸಿಕೊಳ್ಳಲು ಸಾಕ್ಷರ ರಾಕ್ಷಸನಾಗಿ ಅನಕ್ಷರಸ್ಥರನ್ನು ಶೋಷಿಸುತ್ತಿರುವನು. ತರುಣ ಶಕ್ತಿ, ರಾಷ್ಟ್ರದ ಉತ್ಪಾದನೆಯಲ್ಲಿ ನಿರತವಾಗಬೇಕಾದ ತೋಳ್ಬಲ, ಬೀದಿಯ ದೀಪಗಳನ್ನೊಡೆಯುವಲ್ಲಿ, ದಾರಿಯಲ್ಲಿ ಓಡಾಡುವ ತರುಣಿಯರನ್ನು ಕೆಣಕುವಲ್ಲಿ, ಬೀದಿ ನಾಯಿಗಳಂತೆ ರಸ್ತೆಗಳಲ್ಲಿ ಅಂಡಲೆಯುವದರಲ್ಲಿ ಉಪಯುಕ್ತವಾಗುತ್ತಿವೆ.

ಯಾವ ಒಂದು ರಾಷ್ಟ್ರದಲ್ಲಿ ಸಹೋದರಿಯ ರಕ್ಷಣೆ ಆದ್ಯ ಕರ್ತವ್ಯವಾಗಿತ್ತೋ, ಕಾಶ್ಮೀರದಿಂದ ರಾಮೇಶ್ವರದವರೆಗೆ ಓರ್ವಳೇ ಸ್ತ್ರೀ ನಿರಾತಂಕವಾಗಿ ಆಭರಣ ಧರಿಸಿ, ತನ್ನ ಶೀಲವನ್ನುಳಿಸಿಕೊಂಡು ನಿರ್ಭಯವಾಗಿ ಓಡಾಡಬಲ್ಲವಳಾಗಿದ್ದಳೋ ಅಂತಹ ದೇಶದಲ್ಲಿಂದು ಗಂಡನೊಡನೆ ಹೋಗುವಾಗಲೂ ಭಯಪಡುವ ದುಃಸ್ಥಿತಿಯೊದಗಿದೆ. ಜನಾಂಗದ ನೈತಿಕ ಮಟ್ಟವನ್ನು ಏರಿಸುವಲ್ಲಿ ಯಾರಾರು ಎಷ್ಟೆಷ್ಟು ಪ್ರಯತ್ನಿಸುತ್ತಿದ್ದಾರೆ? ಎಂದರೆ, ಉತ್ತರ ಶೂನ್ಯ. ಹೊಡೆದಾಟ, ದರೋಡೆ, ಅತ್ಯಾಚಾರ, ಮುಂತಾದ ಭೀಭತ್ಸ ಮಸಾಲೆಯನ್ನು ಚಲನಚಿತ್ರಗಳಲ್ಲಿ ತುಂಬಿ ಜನತೆಯನ್ನು ವಿಕೃತ ಪಥಕ್ಕೆ ಎಳೆಯುತ್ತಿರುವ ವಿಷಯ ಸುಸ್ಪಷ್ಟ. ಅತ್ಯಂತ ಮರ್ಯಾದೆಯಿಂದ ಗಂಭೀರವಾಗಿ ಸಾಂಸಾರಿಕ ಜೀವನದಲ್ಲಿ ಅನುಭವಿಸಬೇಕಾದ ದೃಶ್ಯಗಳು ಸಾರ್ವಜನಿಕ ರಸ್ತೆಗಳ ಬದಿಯ ಗೋಡೆಗಳ ಮೇಲಿನ ಭಿತ್ತಿಪತ್ರಗಳಲ್ಲಿ. ದಿನದ 24 ಗಂಟೆ ಅಸಹ್ಯ ವಿಕಾರಗಳ ಪರಿಚಯಮಾಡಿಕೊಟ್ಟು, ವಾರಕ್ಕೆರಡು ಪೀರಿಯಡ್ ನೀತಿಪಾಠ ಹೇಳಿದರೆ ಮಕ್ಕಳು ಸಜ್ಜನರಾದಾರೆ? ಸ್ತ್ರೀಯ ಅಂಗಾಂಗ ಪ್ರದರ್ಶನ ಮಾಡುವ ಭಿತ್ತಿಪತ್ರ, ಜಾಹಿರಾತುಗಳಂತೂ ಕಣ್ಣನ್ನು ಕುರುಡುಮಾಡುವಷ್ಟು. ಸ್ತ್ರೀಯು ಜಾಹಿರಾತಿಗೆ, ಅಗ್ಗದ ಪ್ರದರ್ಶನಕ್ಕೆ ಬಲಿಯಾಗಿರುವ ಪ್ರಾಣಿ! ಪುರುಷರ ಬನಿಯನ್ ಜಾಹಿರಾತು ಮಾಡಲು ಸ್ತ್ರೀ ಚಿತ್ರ ಬೇಕು; ಪುರುಷರೇ ಉಪಯೋಗಿಸುವ ಬೀಡಿ-ಸಿಗರೇಟ್ ಜಾಹಿರಾತಿಗೆ ಸ್ತ್ರೀ ಬೇಕು. ಅವರಾದರೂ ಹಣಕ್ಕಾಗಿ ಯಾವುದನ್ನಾದರೂ ಮಾರಿಕೊಳ್ಳಲು ಸಿದ್ಧರು. ಹೀಗೆ ಗುಣಪ್ರಧಾನ, ನೀತಿ ಪ್ರಧಾನ ವ್ಯವಸ್ಥೆ ಸರಿದು ಹಣ ಪ್ರಧಾನ ವ್ಯವಸ್ಥೆಗೆ ಆದ್ಯತೆ ಸಿಕ್ಕರೆ ಇದಕ್ಕಿಂತಲೂ ಅವನತಿ ಮತ್ತೊಂದಿದ್ದೀತೆ? ಗುಣವಂತರಿಗೆ ಸ್ಥಾನಮಾನವಿಲ್ಲದ, ತತ್ತ್ವನಿಷ್ಠರಿಗೆ ಗೌರವವಿಲ್ಲದ, ಹಣವಿದ್ದವನನ್ನೇ ದೇವರೆನ್ನುವ, ವಿಚಾರಕ್ಕಿಂತ ವೈಭವಕ್ಕೆ ಬೆಲೆ ನೀಡುವ ಸಮಾಜ ಮಾನವ ಜನಾಂಗದ "ಪಾಪದ ಕೂಸು."

ಆದ್ದರಿಂದ ನೈತಿಕ ನೆಲೆಗಟ್ಟು ಭದ್ರವಾಗಿರುವಂಥ ರಾಷ್ಟ್ರ ರಚನೆಯಲ್ಲಿ ಇಂದು ರಾಜಕೀಯ ಮುಖಂಡರು, ಸಮಾಜ ನೇತಾರರು, ಬುದ್ಧಿ ಜೀವಿಗಳೆನಿಸಿಕೊಳ್ಳುವ

ಸಾಹಿತಿಗಳು, ಧಾರ್ಮಿಕ ಮಠಾಧಿಪತಿಗಳು ನಿರತರಾಗಬೇಕು. ಇವರುಗಳಲ್ಲಿ ಕೆಲವು ಆದರ್ಶಗಳು ಅಳವಡಬೇಕು.

ಒಂದು ಊರಿನಲ್ಲಿ ಓರ್ವ ವಿದ್ಯಾವಂತ, ಸಜ್ಜನ, ಬಡ ತಂದೆ. ಅವನಿಗೆ ಒಬ್ಬಳೇ ಮಗಳು ಗುಣವತಿ. ಅವಳಿಗೆ ಮದುವೆ ಮಾಡಲು ಕಷ್ಟಸಾಧ್ಯವಾಗಿ ತಂದೆ ಪರಿತಪಿಸುತ್ತ ಕೊರಗುತ್ತಿದ್ದ: ಆಗೊಂದು ದಿನ ಪಡಸಾಲೆಯಲ್ಲಿ ಮಗಳು ಕಾಳು ಹಸನಿಸುತ್ತಿರುವಾಗ ಡಂಗುರ ಸಾರುವದು ಕೇಳಿಸಿತು. ಸಾರುವವನು ಹೇಳುತ್ತಿದ್ದ: "ಒಂದು ಕನ್ಯೆಬೇಕಾಗಿದೆ ರಾಜಯ್ಯನೆಂಬುವವರ ಮಗನಿಗೆ. ಆದರೆ ವರನು ಆಧಾರವಿಲ್ಲದೆ ನಡೆಯುವವನಲ್ಲ; ಸದಾ ಪರಚಿಂತೆಯಲ್ಲಿ ತಲ್ಲೀನ; ಮೂವರೊಡನೆ ಸಮಾಲೋಚಿಸದೆ ಕಾರ್ಯಮಾಡುವವನಲ್ಲ. ಮೇಘದಂತಹ ಗುಣವುಳ್ಳವನು. ಯಾವಾಗಲೂ ತಲೆಯ ಮೇಲೆ ಭಾರಹೊತ್ತು ಕೆಲಸ ಮಾಡುವವನು. ಮದುವೆಯಾಗಲಿಷ್ಟವಿರುವವರು ನಾಳೆ ಧರ್ಮಶಾಲೆಯಲ್ಲಿ ಕಾಣಿರಿ."

ಈ ಮಾತು ಕೇಳಿದ ಬಡವನು ನಗುತ್ತ ಮಗಳಿಗೆ ನುಡಿದ "ಎಂಥಾ ಅಯೋಗ್ಯ ವರನಿರಬೇಕು! ಕಾಲು ಕುಂಟಾಗಿ ಊರುಗೋಲಿನ ಆಧಾರದ ಮೇಲೆ ನಡೆಯುವ ನಿಸ್ಸಹಾಯಕ. ಸದಾ ಹೆರವರ ಚಿಂತೆ ಮಾಡುವ ತಲೆ ಹರಟೆ. ಸ್ವಂತ ಬುದ್ಧಿಯಿಲ್ಲದೆ ಇನ್ನೊಬ್ಬರೊಡನೆ ಚರ್ಚಿಸಿಯೇ ಮಾತನಾಡುವ ಪರತಂತ್ರ ಮತಿಯವನು. ತನ್ನಲ್ಲಿರುವ ಸಂಪತ್ತನ್ನು ಸರಸರ ಧಾರೆ ಎರೆದು ಬರಿದಾದ ಕೈಮಾಡಿಕೊಳ್ಳುವ ಬುದ್ಧಿಹೀನ. ಸದಾ ಕಲ್ಲೋ, ಮಣ್ಣೋ, ಸೌದೆಯೋ ಮುಂತಾವ ಭಾರಹೊತ್ತು ಕೆಲಸಮಾಡುವ ಕೂಲಿಕಾರ; ಇಂಥವನಿಗೆ ಹೆಣ್ಣು ಬೇರೆ ಬೇಕಂತೆ. ಮದುವೆಯಾಗಿ ಆಕೆಯ ಕೊರಳಿಗೆ ಗುಂಡಾಗುವ ಬದಲು ಸುಮ್ಮಗಿದ್ದರಾಗದೆ? ಅವನಿಗೆ ಹೆಣ್ಣು ಕೊಡಲು ಇನ್ನಾವ ಮೂರ್ಖ ಸಿದ್ಧನಾದಾನೋ? ಅವನ ಕೈಹಿಡಿಯಲು ಯಾವ ಬುದ್ಧಿಹೀನಳು ಸಿದ್ಧಳಾಗುವಳು?" ಡಂಗೂರದ ಸದ್ದನ್ನು, ಶಬ್ದಗಳನ್ನು ಸೂಕ್ಷ್ಮವಾಗಿ ಆಲಿಸಿದ ಗುಣವತಿ ನುಡಿದಳು: "ಅಪ್ಪಾ ನಾನವನನ್ನು ಮದುವೆಯಾಗುವೆ. ನಾಳೆ ಕರೆದೊಯ್ಯಿ...."

ತಂದೆ ಹೌಹಾರಿದ. "ಬೇಡ ಮಗಳೇ ನಾನು ಬಡವನಾದ ಮಾತ್ರಕ್ಕೆ ಅಂಥ ಮೂರ್ಖ, ಕುಂಟ, ಮತಿ ಹೀನ, ಕೂಲಿಕಾರನಿಗೆ ನಿನ್ನನ್ನು ಮದುವೆ ಮಾಡಿಕೊಡುವೆನೇ? ಸಾಧ್ಯವಿಲ್ಲ." ಗುಣವತಿ ಹಟ ಹಿಡಿದಳು, ಅನಿವಾರ್ಯವಾಗಿ ತಂದೆ ಸೋಲೊಪ್ಪಿ ಮಗಳನ್ನು ಛತ್ರಕ್ಕೆ ಕರೆದೊಯ್ದ. ಅಲ್ಲಿ ಶ್ರೀಮಂತ ಅಧಿಕಾರಿಯೊಬ್ಬ ಉನ್ನತ ಪೀಠದಲ್ಲಿ ಮಂಡಿಸಿದ್ದ. ಕಂಡು ಗುಣವತಿಯ ಕಣ್ಣುಗಳು ಅರಳಿದವು. ನಮಸ್ಕರಿಸಿದಳು. ಆಗವನು ಕೇಳಿದ "ಇಂಥ ಅಯೋಗ್ಯವರನನ್ನು ವರಿಸಲು ನಿನಗೆ ಇಚ್ಛೆಯುಂಟೆ?"

"ಅಹುದು ಸ್ವಾಮಿ. ನಿಮ್ಮ ವರನಿಗೆ ಈಗಾಗಲೇ ಮದುವೆಯೂ ಆಗಿದೆಯಲ್ಲವೆ?"

"ನಿಜ ತಾಯಿ" ಅವನ ಧ್ವನಿಯಲ್ಲಿ ಸೋಜಿಗ ತುಂಬಿತ್ತು.

ಇದೆಲ್ಲ ಕೇಳಿ ತಂದೆ ಎದೆಯೊಡೆದು "ಬೇಡ ಮಗಳೇ ಈ ಸಂಬಂಧ...." ಎಂದ.

"ಅಪ್ಪಾ ... ಆ ವರನಿಗೆ ವಿಶೇಷ ಲಕ್ಷಣಗಳಿವೆ. ಕೈಹಿಡಿವರೆ ನಾನೇ ಧನ್ಯಳು.."

"ಮಗಳೇ, ಆಧಾರವಿಲ್ಲದೆ ನಡೆಯುವವನಲ್ಲವಂತೆ."

"ಅಹುದು, ಧರ್ಮದ ಆಧಾರವಿಲ್ಲದೆ ನಡೆಯುವವರಲ್ಲ...."

"ಸದಾ ಅನ್ಯರ ಚಿಂತೆ ಮಾಡುವ ಅವಿವೇಕಿಯಂತೆ."

"ನಿಜವಪ್ಪ, ಪರರ ಸುಖದುಃಖಗಳ ಚಿಂತನೆಯಲ್ಲಿ ಸದಾ ತೊಡಗಿಹ ಪರೋಪಕಾರ ಮನೋವೃತ್ತಿಯವರು...."

"ಸ್ವತಂತ್ರ ಬುದ್ಧಿಯಿಲ್ಲದೆ, ಸದಾ ಮೂವರೊಡನೆ ಅಂದರೆ ತಂದೆ, ತಾಯಿ, ಸ್ನೇಹಿತರೊಡನೆ ಸಮಾಲೋಚಿಸಿ ನಡೆವವ ಪರತಂತ್ರ ಮತಿಯವನು."

"ಇಲ್ಲವಪ್ಪ. ಗುರುಹಿರಿಯರು, ಮಂತ್ರಿಗಳು ಮತ್ತು ಪ್ರಜಾಪ್ರತಿನಿಧಿಗಳೊಡನೆ ಸಮಾಲೋಚಿಸುವ ಧೀಮಂತರು."

"ಮೇಘದಂತಹ ಗುಣವುಳ್ಳ ವಿವೇಕ ಪ್ರಜ್ಞಾರಹಿತ ಉದಾರಿಯಂತೆ. ತನ್ನಲ್ಲಿರುವದನ್ನೆಲ್ಲ ದಾನಮಾಡುವ ಬೆಪ್ಪ...."

"ಹಾಗಲ್ಲ; ಮೋಡ ಸಮುದ್ರದಿಂದ ಉಪ್ಪುನೀರನ್ನು ಕುಡಿದರೂ ತಾನು ಲೋಕಕ್ಕೆ ಸಿಹಿ ನೀರನ್ನು ನೀಡುವಂತೆ, ಜಗದ ಜಂಜಡವನ್ನೆಲ್ಲ ತಾನು ಉಂಡು, ಹಿತವನ್ನೇ ನೀಡುವ ತ್ಯಾಗಿ...."

"ಮಗಳೇ, ತಲೆಯ ಮೇಲೆ ಭಾರಹೊತ್ತೇ ಕೆಲಸ ಮಾಡುವ ಕೂಲಿಕಾರನನ್ನು.."

"ಇಲ್ಲವಪ್ಪ, ತಾನು ಹಿಡಿದಿರುವ ಜವಾಬ್ದಾರಿಯ ಅರಿವಿರುವ, ಹೊತ್ತ ಕಿರೀಟದ ಭಾರವನ್ನು ತಿಳಿದಿರುವ ಕರ್ತವ್ಯ ಪ್ರಜ್ಞೆಯುಳ್ಳ ರಾಜಕುಮಾರ...."

ಬಡ ತಂದೆ ಸಂಭ್ರಾಂತನಾಗಿ "ಎಲ್ಲ ಸರಿ, ಅವನಿಗೆ ಈಗಾಗಲೇ ಮದುವೆಯಾಗಿದೆಯಂತೆ," ಎಂದು ನುಡಿದ.

"ರಾಜಲಕ್ಷ್ಮಿಯೊಡನೆ ಮದುವೆ...." ಸಂದರ್ಶಿಸುತ್ತಿದ್ದ ಅಧಿಕಾರಿ ಮೂಕ ವಿಸ್ಮಿತನಾಗಿ "ನಿನಗೆ ಸಂಪೂರ್ಣ ಒಪ್ಪಿಗೆಯೇ ತಾಯಿ....?" ಎಂದ. ಗುಣವತಿ ತಲೆ

ಯಾಡಿಸಿದಾಗ ಮಗ್ಗಲು ಕೋಣೆಯಿಂದ ಪ್ರತ್ಯಕ್ಷನಾದ ರಾಜಕುಮಾರ ಮಾಲೆಯನ್ನು ಹಾಕಿದ.

ಈ ರಾಜಕುಮಾರನ ಲಕ್ಷಣಗಳು ಆದರ್ಶರಾಷ್ಟ್ರದ ಪ್ರಜೆಗೆ ಚಾಚೂ ತಪ್ಪದೆ ಅನ್ವಯಿಸುವವು. 1. ಧರ್ಮ-ನೀತಿಗಳ ಅವಲಂಬನೆ ಹಿಡಿದು ನಡೆಯಬೇಕು. 2. ತನಗೇನು ಲಾಭ ಎಂಬುದನ್ನು ಚಿಂತಿಸುವುದಕ್ಕಿಂತ ತನ್ನ ಸಮಾಜ-ರಾಷ್ಟ್ರಕ್ಕೇನು ಲಾಭ ಎಂದು ಚಿಂತನೆಗೈಯಬೇಕು. 3. ಗುರುಹಿರಿಯರು ಅನುಭವಿಗಳು-ಎಲ್ಲರೊಡನೆ ಸಮಾಲೋಚಿಸಿ ಬದುಕಿನಲ್ಲಿ ನಡೆಯಬೇಕು. 4. ತನ್ನ ಬದುಕು ಶ್ರೀಗಂಧದಂತೆ ಪರೋಪಕಾರಕ್ಕಾಗಿ ಸವೆಯಬೇಕೆಂಬ ತ್ಯಾಗ ಬುದ್ಧಿ ಇರಬೇಕು. 5. 'ರಾಷ್ಟ್ರವು ನನ್ನ ಆ ಬೇಡಿಕೆ, ಈ ಬೇಡಿಕೆ ಈಡೇರಿಸಬೇಕು' ಎಂಬುದಕ್ಕಿಂತ, 'ನಾನು ನನ್ನ ಕರ್ತವ್ಯ ಮಾಡುತ್ತಿದ್ದೇನೆಯೇ?' ಎಂಬ ಕರ್ತವ್ಯ ಪ್ರಜ್ಞೆಯಿಂದ ಕೂಡಿರಬೇಕು. ಇಂಥವರ ಕೈಯಲ್ಲಿ ಮಾತ್ರ ಪ್ರಜಾಪ್ರಭುತ್ವದ ರಾಜ್ಯಲಕ್ಷ್ಮಿ ಶೋಭಿಸಬಲ್ಲಳು. ಈ ಲಕ್ಷಣಗಳಿಲ್ಲದ ಅವಿವೇಕಿಗಳನ್ನು ನಮ್ಮನ್ನು ಮುನ್ನಡೆಸುವ ನೇತಾರರನ್ನಾಗಿ ಮಾಡಿಕೊಂಡರೆ "ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತೆ...." "ಮುಳುಗುವವನಿಗೆ ಈಜಲು ಬಾರದವ ಎತ್ತಲು ಹೋದಂತೆ ಆಗುತ್ತದೆ.'' ಈಗ ಆಗಿರುವುದಾದರೂ ಅಷ್ಟೆಯೇ.

ಹಿಂದು, ಇಂದು ಹೇಗಾದರಿರಲಿ ಮುಂದಾದರೂ ಅಂದವಾದ ನಾಡನ್ನು ಕಟ್ಟಬೇಕು. ಎಂತಹುದನ್ನು? ಎಂಬುದಕ್ಕೆ ಉತ್ತರ ಕೊಡುತ್ತದೆ ಕಲ್ಯಾಣ ಕಿರಣದ ಅರ್ಥಗರ್ಭಿತ, ಆದರ್ಶಸಹಿತ ಆಗಸ್ಟ್ ಸಂಚಿಕೆಯ ಮುಖಪುಟ. ನಾವು ಕಟ್ಟಬೇಕಾದ ಭರತ ಭೂಮಿ "ಕಲ್ಯಾಣ ರಾಜ್ಯ"ವಾಗಬೇಕು. ಅಲ್ಲಿ ಸ್ವಾತಂತ್ರ್ಯದ ಸಂಕೇತವಾದ ಧ್ವಜ ತಲೆಯೆತ್ತಿ, ಗರಿಬಿಚ್ಚಿ ಹಾರಾಡಬೇಕು. ವಿಚಾರ, ವಾಕ್ ಮತ್ತು ಆಚಾರ ಸ್ವಾತಂತ್ರ್ಯಗಳು ಪ್ರತಿಯೊಬ್ಬ ಮಾನವನ ಜನ್ಮಸಿದ್ಧ ಹಕ್ಕು ಪ್ರಜಾಪ್ರಭುತ್ವದ ನಾಡಿನಲ್ಲಿ. ವಿಚಾರವಂತಿಕೆಯ ಕಣ್ಣುಗಳನ್ನು ಕಟ್ಟಿ, ವಾಕ್ ಸ್ವಾತಂತ್ರ್ಯದ ಕೊರಳನ್ನು ಹಿಸುಕಿ, ನಿರ್ಭಯ ನಡೆಯ ಕಾಲನ್ನು ಕಡಿವ ಸರ್ವಾಧಿಕಾರತ್ವ ಬೇಡ. ಇಲ್ಲಿ ನೀತಿ-ನ್ಯಾಯಗಳ ಚಕ್ರ ಸದಾ ಉರುಳಬೇಕು. ರಾಷ್ಟ್ರಾಭಿಮಾನದ ಪರಂಜ್ಯೋತಿ ಪ್ರತಿಯೊಬ್ಬ ಪ್ರಜೆಯ ಹೃದಯದಲ್ಲಿ ಬೆಳಗಬೇಕು. ಈ ನಾಡಿನ ನಾಲ್ಕು ಮೂಲೆಗಳಲ್ಲಿ ನೆಲೆಗೊಂಡಿರುವ ಕುದುರೆ, ಆನೆ, ಸಿಂಹ ಮತ್ತು ಬಸವಗಳು ಪ್ರತಿನಿಧಿಸುವ ತತ್ತ್ವಗಳ ನೆಲೆವೀಡಾಗಬೇಕು ಭಾರತ.

ನಾಗಾಲೋಟದಿಂದ ಓಡುವ ಕುದುರೆಯಂತೆ ದೇಶವು ಪ್ರಗತಿಯನ್ನು ಸಾಧಿಸಬೇಕು. ಕೇವಲ ಔದ್ಯೋಗಿಕ ಪ್ರಗತಿ ಸಾಧಿಸಿದರಲ್ಲ ಸಂಪತ್ತಿನಿಂದ ತುಂಬಿ ತುಳುಕ

ಬೇಕು. ಆನೆಯು ಸಿರಿವಂತಿಕೆಯ ದ್ಯೋತಕ. ಪ್ರಾಕೃತಿಕ ಸಂಪತ್ತು, ಬೌದ್ಧಿಕ ಸಂಪತ್ತು, ಕೃಷಿಕ ಸಂಪತ್ತು ಅಧಿಕಗೊಳ್ಳಬೇಕು. ಸ್ಥೂಲ ಪ್ರಗತಿ, ಸಂಪತ್ತುಗಳ ಗಳಿಕೆಗಳಷ್ಟೇ ಸಾಲವು; ಪುರುಷ ಸಿಂಹರನ್ನು ತಯಾರಿಸಬೇಕು. ಸಮಾಜ-ರಾಷ್ಟ್ರಗಳಿಗಾಗಿ ಧೈರ್ಯ-ಸ್ಥೈರ್ಯದಿಂದ ಪ್ರಾಣಾರ್ಪಣೆ ಮಾಡಬಲ್ಲ ಧೈರ್ಯಶಾಲಿಗಳಾದ ಸಿಂಹದಂತಹ ಯುವಕರನ್ನು ನಿರ್ಮಾಣಮಾಡಬೇಕು. ಐಹಿಕವಾದ ಮೌಲ್ಯಗಳನ್ನು ಹೊಂದಲು 'ಎತ್ತು' ಹೇಗೆ ಅವಶ್ಯವೋ, ಪಾರಲೌಕಿಕ ಮೌಲ್ಯ ಹೊಂದಲು ಧರ್ಮ 'ವೃಷಭ' ಅವಶ್ಯ. ಅಂತೆಯೇ ಪಶ್ಚಿಮದಲ್ಲಿ ನಿಂತಿದೆ ಅಧ್ಯಾತ್ಮಿಕ ಮೌಲ್ಯಗಳ ಸಂಕೇತವಾದ "ಬಸವ". ಹೀಗೆ ವೈಜ್ಞಾನಿಕ ಬೆಳವಣಿಗೆ, ಭೌತಿಕ ಪ್ರಗತಿ, ನೈತಿಕ ಉದ್ಧಾರ, ಆತ್ಮಿಕ ಉತ್ಥಾನ-ಈ ನಾಲ್ಕು ಸಿದ್ಧಿಸಿದಾಗ ಭಾರತ ನಾಡು ಇಡೀ ಜಗತ್ತಿಗೇ "ಗುರು" ಸ್ಥಾನದಲ್ಲಿ ನಿಲ್ಲಬಲ್ಲುದು. ಅದನ್ನು ಸಾಧಿಸಲು ಪ್ರತಿಯೊರ್ವ ಪ್ರಜೆ ಸ್ವಾತಂತ್ರ್ಯೋತ್ಸವದಂದು ಪ್ರತಿಜ್ಞೆ ಕೈಗೊಳ್ಳಬೇಕು.

ಮಾತೆ ಮಹಾದೇವಿ

ನ ಗೆ ಹ ನಿ

ಹೆಂಡತಿ : ಸಮ್ಮೋಹನ ವಿದ್ಯೆ ಎಂದರೇನು ?

ಗಂಡ : ಓರ್ವ ವ್ಯಕ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡು, ತಾನು ಹೇಳಿದ್ದನ್ನು ಮಾಡಿಸುವಂಥ ವಿದ್ಯೆ.

ಹೆಂಡತಿ : ಅಲ್ಲಾರೀ, ನೀವು ಹೇಳಿದ್ದಕ್ಕೆ ಮದುವೆ ಅಂತಾರೆ !

* * * *


ಕನ್ಯಾ ಅಭ್ಯರ್ಥಿಯನ್ನು ಕುರಿತು ಹೆಣ್ಣು ಮಕ್ಕಳ ಶ್ರೀಮಂತ ತಂದೆ ಹೇಳಿದ : "ನೋಡಪ್ಪ, ಈಕೆ ನನ್ನ ಕಡೆಯ ಮಗಳು ವಯಸ್ಸು ಇಪ್ಪತ್ಮೂರು ; ವರದಕ್ಷಿಣೆಯಾಗಿ ಇಪ್ಪತ್ಮೂರುಸಾವಿರ ಕೊಡಬಲ್ಲೆ; ಇವಳು ಅವಳಿಗಿಂತ ಹಿರಿಯಳು ಇಪ್ಪತ್ತೆಂಟು ವಯಸ್ಸು; ಇವಳನ್ನು ಮದುವೆಯಾದರೆ ಇಪ್ಪತ್ತೆಂಟು ಸಾವಿರ ವರದಕ್ಷಿಣೆ. ಈ ಹುಡುಗಿಗೆ ಮೂವತ್ತೆರಡು ವರ್ಷ ಅವಳಿಗಾದರೆ ಮೂವತ್ತೆರಡು ಸಾವಿರ. ಯಾರು ಬೇಕು ಆಲೋಚಿಸು...."

ವಧು ವೀಕ್ಷಕ ಎಲ್ಲವನ್ನೂ ನೋಡಿ, ಕೇಳಿದ :

"ಸ್ವಾಮಿ, ಆ ಅವರು ಸುಮಾರು ಐವತ್ತನ್ನು ದಾಟಿರಬಹುದು; ಅವರಿಗಾದರೆ.... ಐವತ್ತು ಸಾವಿರ ವರದಕ್ಷಿಣೆಯೆ ?...."

ಕನಲಿ ಕೆಂಡವಾದ ಶ್ರೀಮಂತ ನುಡಿದ : "ಲೇ ಅಯೋಗ್ಯ, ಆಕೆ ನನ್ನ ಹೆಂಡತಿ ಕಣೊ....'

(ಸಂಗ್ರಹ)



—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಎತ್ತೆತ್ತ ನೋಡಿದೊಡತ್ತತ್ತ ನೀನೆ ದೇವಾ !
ಸಕಲ ವಿಸ್ತಾರದ ರೂಪವು ನೀನೆ ದೇವಾ !
ವಿಶ್ವತಸ್ ಚಕ್ಷು ನೀನೆ ದೇವಾ,
ವಿಶ್ವತೋ ಮುಖ ನೀನೆ ದೇವಾ,
ವಿಶ್ವತೋ ಬಾಹು ನೀನೆ ದೇವಾ,
ವಿಶ್ವತಃ ಪಾದ ನೀನೆ ದೇವಾ, ಕೂಡಲ ಸಂಗಮದೇವ. (ಬ.ಷ.ವ. ೫೩೨)

ಇದು ವಿಶ್ವಗುರು ಬಸವಣ್ಣನವರು ದೇವರ ಸ್ವರೂಪ ಕುರಿತು ಹೇಳುವ ಸೂತ್ರ ರೂಪದ ತಾತ್ತ್ವಿಕವಚನ. ಸಚರಾಚರಗಳು ಸೃಷ್ಟಿಯಾಗುವ ಮುನ್ನ ತನ್ನಲ್ಲಿ ತಾನೇ ಅನಂತ ಕಾಲವಿದ್ದದ್ದು 'ಶತ್'. 'ಅದ'ನ್ನು ನಿಷ್ಕಲಲಿಂಗವೆಂದು, ಸ್ವಯಂಭುವೆಂದು ಕರೆದರು. ಈ ಏಕಾಂಗಿತನ ತೊರೆದು, ಲೀಲೆಗಾಗಿ ಜಗವನ್ನು ಸೃಷ್ಟಿಸಲು ಸಂಕಲ್ಪಗೈದು ಸೃಷ್ಟಿಯನ್ನು ರಚಿಸಿದ 'ಆ' ತತ್ತ್ವವನ್ನು ಪರಮಾತ್ಮನೆಂದು, ಮಹಾಲಿಂಗವೆಂದು, ವಿಶ್ವಾತ್ಮನೆಂದು ಹೇಳಿದರು. ದೇಹಗತವಾಗಿ, ಜೀವಾತ್ಮವಾಗಿ ಕಾರ್ಯೋನ್ಮುಖವಾದ ಚೇತನವನ್ನು ಆತ್ಮವೆಂದು, ಚಿಲ್ಲಿಂಗವೆಂದು ಹೆಸರಿಸಿದರು.

ಈ ಮೇಲಿನ ವಚನ ಪ್ರಸ್ತಾಪಿಸುವುದು ವಿಶ್ವಾತ್ಮನಾದ ಕರ್ತನ ಸ್ವರೂಪವನ್ನು. ಅವನು ವಿಶ್ವದಲ್ಲೆಲ್ಲ ಹಾಸುಹೊಕ್ಕಾಗಿ, ಸರ್ವವ್ಯಾಪಿಯಾಗಿ, ಸರ್ವಗತನಾಗಿ ತುಂಬಿದ್ದಾನೆ. ಕೆಲವರು ಶರಣ ಧರ್ಮವು ದೇವರು ಸರ್ವವ್ಯಾಪಿಯಲ್ಲವೆಂದು ಹೇಳುವದೆಂದು ನಂಬುವರು, ಬರೆಯುವರು. ಇದು ಶರಣಧರ್ಮವನ್ನು ಸಂಪೂರ್ಣವಾಗಿ ಅಧ್ಯಯನ ಮಾಡದ್ದರ ಪ್ರತಿಫಲ. ಸಕಲ ವಿಸ್ತಾರದ ಈ ರೂಹಿನಲ್ಲಿ (ವಿಶ್ವದಲ್ಲಿ) ದೇವನು ತುಂಬಿ ತುಳುಕುತ್ತಿದ್ದಾನೆ. ದೇವನು ಸತ್-ಚಿತ್-ಆನಂದ ಎಂದು ಭಾರತೀಯ ಜನ್ಯ, ಎಲ್ಲ ಸೇಶ್ವರ (Theistic) ವಾದಿ ಧರ್ಮಗಳು ಒಪ್ಪುತ್ತವೆ.

ಸತ್ ಎಂದರೆ "ಇರುವದು". ಇದು Self-Existent ಸ್ವತಂತ್ರವಾಗಿ, ನಿರಾಲಂಬವಾಗಿ ಇರುವದು ಮಾತ್ರವಲ್ಲ, ಎಲ್ಲೆಡೆಯಲ್ಲೂ ಇರುವದು (all pervading) "ವಿಶ್ವತಃ ಪಾದ ನೀನೇ ದೇವಾ" ಎಂಬ ವಾಕ್ಯದಲ್ಲಿ ಸುಸ್ಪಷ್ಟವಾಗಿದೆ. ಕಾಲುಗಳು ಎಲ್ಲಿರುವವೋ ಅಲ್ಲಿ ನಾವಿರುವೆವು. ದೇವನ ಕಾಲು ಎಲ್ಲೆಡೆಯಲ್ಲಿ ಅಂದಾಗ, ಅವನು ಎಲ್ಲೆಡೆಯಲ್ಲಿರುವನು ಎಂದರ್ಥ. "ದೇವನು ಸರ್ವವ್ಯಾಪಿ" ಎನ್ನುವುದಕೆ ಇನ್ನಷ್ಟು ಆಧಾರಗಳನ್ನು ವಚನಗಳಿಂದ ಆರಿಸೋಣ.

1. ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ—ಬಸವಣ್ಣ.
2. ಪ್ರಣವಾರೂಢ, ಪ್ರಣವ ಸ್ವರೂಪ, ಪ್ರಣವ ಪ್ರಕೃತಿ ಸೌ[illegible]ಷ್ಣ,
   ಪ್ರಣವ ಷಡಂಗ ಸವ[illegible]ಸ—ಬಸವಣ್ಣ.
3. ಚನ್ನಮಲ್ಲಿಕಾರ್ಜುನನು ಹಲವು ಜಗಂಗಳ ಕೂಡಿಕೊಂ[illegible]ದ್ದರೇನು ತನ್ನ ಪರಿಬೇರೆ—[illegible]ಕ್ಕಮಹಾದೇ[illegible]
4. ಎಲ್ಲಿ ನೋಡಿದಡಲ್ಲಿ ನೀನೇ ದೇವಾ, ಎಲ್ಲಿ ಮುಟ್ಟಿದಲ್ಲಿ ನೀನೇ ದೇವಾ
   —ಷಣ್ಮುಖ ಸ್ವಾಮಿಗಳು-
5. ಕುಲ ಸೀಮೆ ಇಲ್ಲದ....ತೆರಹಿಲ್ಲದ ಚೆಲುವಂಗಾನೊಲಿದೆ—ಅಕ್ಕಮಹಾದೇವಿ

"ಸತ್" ಎಂದರೆ ಶುದ್ಧವಾದ ಇರುವಿಕೆ. ಎಲ್ಲೆಡೆಯಲ್ಲೂ ಇರುವುದು "ಸತ್". ಸೀಮೆಗಾಗಲಿ, ಕಾಲಕ್ಕಾಗಲಿ ಒಳಪಟ್ಟುದು ದೇವರೇ ಅಲ್ಲ.

ದೇವನು ಸರ್ವಗತ ಮತ್ತು ಸರ್ವವ್ಯಾಪಕ. ಎಲ್ಲೆಡೆಯಲ್ಲಿ ಸಾಮಾನ್ಯ ಚೈತನ್ಯವಾಗಿ ಅವನಿದ್ದರೂ ಪ್ರಕಟವಾಗುವುಧು ಮಾತ್ರ ಅರಿವು-ಆನಂದಗಳಿದ್ದೆಡೆಯಲ್ಲಿ. ವಿದ್ಯುತ್ತು ತಂತಿಯಲ್ಲಿ ಎಲ್ಲೆಡೆ ಇದ್ದರೂ ಅಭಿವ್ಯಕ್ತವಾಗುವುದು ಹೋಲ್ಡರ್ ಅಥವಾ ಪವರ್ ಪಾಯಿಂಟ್ ಇದ್ದಲ್ಲಿ ಮಾತ್ರವಷ್ಟೆ! ಆದ್ದರಿಂದ ಜಡ-ಚೈತನ್ಯಗಳ ವ್ಯತ್ಯಾಸವಿಷ್ಟೇ: "ಸತ್" ಎಲ್ಲೆಡೆ ಇದೆ; ಅದು ಇಲ್ಲದ್ದು ಜಡವಲ್ಲ ; ಚಿತ್ (ಅರಿವು) ಇಲ್ಲದ್ದು ಜಡ. ಆತ್ಮವಿದ್ದಲ್ಲಿ ಅರಿವು (Consciousness) ಆನಂದ (Bliss) ಇರುವದು. ಅಲ್ಲಿ ದೇವನು ಅಭಿವ್ಯಕ್ತವಾಗುವನು. ಆದ್ದರಿಂದಲೇ ಅವನಿಗೆ "ಭಕ್ತದೇಹಿಕ ದೇವ" ನೆಂದರು. ಇಡೀ ಸಮುದ್ರದ ನೀರನ್ನು ವಿಭಜಿಸುವದು ಸಾಧ್ಯವಿಲ್ಲ. ಒಂದು ಪ್ರಯೋಗ ನಳಿಕೆ (Test tube)ಯಲ್ಲಿ ಹಾಕಿಕೊಂಡು ವಿಭಜಿಸಿದರೆ ಭೂಮ ಸಿಂಧುವಿನ ರಹಸ್ಯದ ಅರಿವು ಸಾಧ್ಯ. ಹಾಗೆಯೇ ಬ್ರಹ್ಮಾಂಡಗತನಾದ ದೇವನನ್ನು ಅರಿವುದು ಮತಿಗತೀತ ಸಾಹಸ. ದೇಹವೆಂಬ ನಳಿಕೆಯೊಳಗೆ ಸಿಲುಕಿರುವ ಆತ್ಮನನ್ನರಿತರೆ ಮೂಲಚೇತನದ ಸ್ವರೂಪವನ್ನರಿವುದು ಸಾಧ್ಯ. ಇದನ್ನು ಬಿಟ್ಟು ತೀರ್ಥ-ಕ್ಷೇತ್ರ, ಗುಡಿಗುಂಡಾರಗಳಲ್ಲಿ ಅರಸುವ ಬುದ್ಧಿಹೀನರಿಗೆ ಗಡುಸಾಗಿ ಹೇಳಿದರು ಶರಣರು "ಮಣ್ಣಬಿಟ್ಟು ಮಡಿಕೆ ಇಲ್ಲ; ತನ್ನಬಿಟ್ಟು ದೇವರಿಲ್ಲ." "ದೇವರು ಭಕ್ತದೇಹಿಕ ದೇವ". "ಅಷ್ಟತನುವಿನ ಮಧ್ಯದಲ್ಲಿ ಹುದುಗಿರುವವ". ಸಾಧನೆಯ ಕೇಂದ್ರ ತಾನೇ ವಿನಾ ತಿರುಪತಿ, ಗೋಕರ್ಣಗಳಲ್ಲ ಎಂದು ಮನದಟ್ಟು ಮಾಡಿಕೊಡುವುದೇ ಇದರ ಉದ್ದೇಶ.

"ಸರ್ವಗತ ನಿರಸನ ಸ್ಥಲ"ವನ್ನು ಹೇಳಿರುವ ಇನ್ನೊಂದು ಉದ್ದೇಶ ಹೀಗಿದೆ "ದೇವರು ಜಗತ್ತನ್ನು ನಿರ್ಮಿಸಿದ" ಎಂದು ಎಲ್ಲ ಸೇಶ್ವರ ವಾದಿಗಳೂ ಒಪ್ಪುತ್ತಾರೆ. ಮುಂದಿನ ಪ್ರಶ್ನೆ. ಹೀಗೆ ಸೃಷ್ಟಿಸಿದ ಬಳಿಕ ತಾನು ಅದರ ಹೊರಗೆ ಉಳಿದನೇ ? ಅಥವಾ ಒಳಗೆ ಸಮರಸನಾದನೆ ? ಆಗ ಬಂದವು ಎರಡು ವಾದ. ಈ ಜಗತ್ತು ಹುಟ್ಟು-ಪ್ರಳಯ ಇತ್ಯಾದಿ ವಿಕಾರಗಳಿಗೆ ಒಳಗಾಗುವುದರಿಂದ ದೇವರು ಒಳಗಿಲ್ಲ; ಹೊರಗೆ ನಿಂತು ಇದನ್ನು ಆಡಿಸುವನು. ಇದು ಅವ್ಯಕ್ತತತ್ವ (Deism), ಇಸ್ಲಾಂ ಧರ್ಮ, ಬ್ರಹ್ಮಕುಮಾರಿ ಪಂಥ ಒಪ್ಪುವುದು ಈ ವಿಚಾರವನ್ನು. ಆಗ ಇವನಿಗಾಗಿ ಒಂದು ಸ್ವರ್ಗ ಬೇಕಾಯಿತು. ಇನ್ನು ಕೆಲವರು, "ಸೃಷ್ಟಿಮಾಡಿದ ನಂತರ ಒಳಗೆ ಸಮರಸನಾಗುವನು" ಎಂದು ವ್ಯಕ್ತವಾದ (Pantheism)ಕ್ಕೆ ನಿಂತರು. ಉದಾಹರಣೆಗೆ ಸ್ಪಿನೋಜ. ಮತ್ತು ಶಂಕರಾಚಾರ್ಯರ ಪ್ರಕಾರ "ಇದೆಲ್ಲವೂ ಬ್ರಹ್ಮ". ಶರಣರದು ಯಾವ ವಿಚಾರಧಾರೆ? ಮೇಲ್ಕಂಡ ಈ ಎರಡೂ ಅಲ್ಲ. ಅವರ ಪ್ರಕಾರ ದೇವನು ವ್ಯಕ್ತ ಮತ್ತು ಅವ್ಯಕ್ತ ಎರಡೂ ಅಹುದು. "ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲ ಸಂಗಮದೇವ...." ಬಸವ ಧರ್ಮದ ಈ ದೇವರು ಲೋಕದಲ್ಲಿ ಇದ್ದಾನೆ. ಹಾಲಲ್ಲಿ ತುಪ್ಪವಿರುವಂತೆ ಒಳಗೆ ಹೊರಗೆ, ಓತಪ್ರೋತವಾಗಿ, ತೆರಹಿಲ್ಲದೆ ಅಖಂಡನಾಗಿದ್ದಾನೆ.ಆದರೆ ಇದರೊಳಗೆ ಸೀಮಿತನಾಗದೆ ಅತೀತನಾಗಿದ್ದಾನೆ. ಆದ್ದರಿಂದ ಅವನು ವಿಶ್ವಾಂತರ್ಯಾಮಿಯೂ (immanent) ಅಹುದು, ವಿಶ್ವೋತ್ತೀರ್ಣನೂ (transcendental) ಅಹುದು. ಬಲೂನಿಗೆ ಗಾಳಿ ತುಂಬಿದಾಗ ಅಲ್ಲಿ ಗಾಳಿ ಅಂತರ್ಯಾಮಿಯೂ ಹೌದು, ಅತೀತವೂ ಹೌದು. ತಾಯಿಯ ಗರ್ಭದಲ್ಲಿ ಮಗುವಿದ್ದಾಗ, ತಾಯಿ ಮಗುವಿನಲ್ಲಿ ಅಂತರ್ಯಾಮಿ ನಿಜ; ಅತೀತಳೂ ಸರಿ. ಆ ಮಗುವಿನ ಮೂಳೆ, ಮಾಂಸ, ಮೇದಸ್ಸುವಾಗಿ ಒಳಗಿದ್ದಾಳೆ. ಆದರೆ ಆ ಮಗುವಿನ ಅಸ್ತಿತ್ವದಿಂದ ಭಿನ್ನವಾಗಿ ಸರ್ವ ಸ್ವತಂತ್ರಳೂ ಆಗಿದ್ದಾಳೆ.

ಬಸವಣ್ಣನವರು ಹೇಳುವಂತೆ ದೇವರು "ಪ್ರಣವ ಷಡಂಗ ಸಮರಸ"ನಾಗಿ ಅಂತರ್ಯಾಮಿಯಾಗಿದ್ದಾನೆ. "ಪ್ರಣವ ಪ್ರಕೃತಿ ಸೌಂಜ್ಞನಾಗಿ" ಅತೀತನಾಗಿದ್ದಾನೆ. ಅಕ್ಕಮಹಾದೇವಿಯ ಅನುಭವದಂತೆ ಕೋಲು ತುದಿಯ ಕೋಡಗದಂತಿರುವ, ನೇಣತುದಿಯ ಗೊಂಬೆಯಂತಿರುವ ಲೋಕವನ್ನಾಡಿಸುವ ಸರ್ವಾತೀತ ಸೂತ್ರಧಾರಿಯಾಗಿದ್ದಾನೆ. 'ವನವೆಲ್ಲ ನೀವೆ, ವನದೊಳಗಣ ದೇವ ತರುವೆಲ್ಲ ನೀವೆ' ಎಂಬಲ್ಲಿ ಸರ್ವಾಂತರ್ಯಾಮಿಯಾಗಿದ್ದಾನೆ. "ಕೇವಲ ಲೋಕದಲ್ಲಿ ಸೆರೆಯಾಗಿಲ್ಲ" ಎಂದ ಹೇಳುವ ಉದ್ದೇಶದಿಂದ ಶರಣರು ಸರ್ವಗತ ನಿರಸನ ಹೇಳಿದ್ದಾರೇ ವಿನಾ, ದೇವನು ಇಲ್ಲಿ ವ್ಯಾಪಕನಾಗಿಲ್ಲ ಎಂಬರ್ಥದಲ್ಲಲ್ಲ. ಇದನ್ನು ಸರಿಯಾಗಿ ತಿಳಿಯಬೇಕಾದುದು ಅವಶ್ಯಕ. ಏಕೆಂದರೆ ದೇವನು ಸರ್ವಾಂತರ್ಯಾಮಿ ಎಂದೊಪ್ಪದಿದ್ದಾಗ, ವ್ಯಕ್ತ ದೇವರ ಕಲ್ಪನೆ ತಪ್ಪಿ ಅನುಭಾವ (Mysticism)ಕ್ಕೆ ಸ್ಥಾನವಿಲ್ಲದಾಗುತ್ತದೆ-ಇಸ್ಲಾಂ ಧರ್ಮದಂತೆ. ಆಗ ಶರಣ ಧರ್ಮ ಮೂಲತಃ ಅನುಭಾವ ಪ್ರಧಾನ ಧರ್ಮ ಎಂಬ ವಿಚಾರಕ್ಕೇ ಕೊಡಲಿ ಪೆಟ್ಟುಹಾಕಿದಂತಾದೀತು. ★

ಸಮಸ್ಯೆ! ಸಮಾಧಾನ!

—ಪುರುಷೋತ್ತಮ, ಶಿವಮೊಗ್ಗ.

** ಕೆಲವರು ಸುವಾಸನೆಗೆಂದು ಅರ್ಧ ಊದಿನ ಕಡ್ಡಿ ಹಚ್ಚುವರು, ಇದು ಸರಿಯೇ ?

* ಕಬ್ಬು ಡೊಂಕಾದರೇನು ಸಿಹಿಯು ಡೊಂಕೆ ? ಊದಿನ ಕಡ್ಡಿ ಅರ್ಧವಾದರೇನು ಸುವಾಸನೆ ಅರ್ಧವೆ ? ವ್ಯರ್ಥವಾಗುವುದನ್ನು ತಪ್ಪಿಸಿದಂತೆ ಇದು. ಆದರೆ ಲೋಭಿತನಕ್ಕಾಗಿ, ಪೂಜೆಯ ಸಮಯದಲ್ಲಿ ಹಚ್ಚಿದ ಊದಿನ ಕಡ್ಡಿಯನ್ನು ಆರಿಸಿ, ಮತ್ತೆ ಅರ್ಧ ಹಚ್ಚಿದುದನ್ನು ಹಚ್ಚುವುದು ತಪ್ಪು.

—ಶಿವರಾಜ ಸಿದಬಟ್ಟೆ, ಔರಾದ.

** ಹೀನರಲ್ಲಿ ಹೀನನಾವನು ?

* ತನ್ನ ಲೋಪದೋಷಗಳನ್ನು ಎಂದೂ ಗಮನಿಸದೆ, ಸದಾ ಹೆರವರನ್ನು ಆಡಿಕೊಳ್ಳುವ ನಿಂದಕನು! 'ದುರಿತದೊಳಾವುದು ಪರನಿಂದೆ' ಎಂದು ಹೇಳಿಲ್ಲವೇ ನಿಜಗುಣ ಶಿವಯೋಗಿಗಳು.

** ಅತಿ ಕೀಳ್ತರದ ಉದ್ಯೋಗವಾವುದು ?

* ತಾನು ಹಿಡಿದ ಉದ್ಯೋಗ, ಅಧಿಕಾರ, ಉದ್ಯಮ ಯಾವುದರ ಮೂಲಕವೇ ಇರಲಿ ಅನ್ಯರನ್ನು ಬೆದರಿಸಿ, ಶೋಷಿಸಿ ಬದುಕುವುದು.

—ಡಾ|| ಹೆಚ್. ಬಸವರಾಜಪ್ಪ, ಬೆಂಗಳೂರು.

** ಸುಖವೆಂದರೇನು ?-

* ಮನಸ್ಸನ್ನು ಮುದಗೊಳಿಸಿ, ಒತ್ತಡವನ್ನು ಕಳೆದು ಹಗುರಮಾಡುವ ಒಂದು ಅನುಭವ. ಆದರೆ ಇದರಲ್ಲಿ ವಿವಿಧ ಸ್ತರಗಳಿವೆ, ಸುಖ, ಸಂತೋಷ ಮತು ಆನಂದವೆಂದು. ಸುಖ ದೈಹಿಕ, ಸಂತೋಷ ಮಾನಸಿಕ, ಆನಂದವು ಆತ್ಮಿಕ. ಒಂದಕ್ಕಿಂತೆ ಒಂದು ಸ್ಥಿರ ಮತ್ತು ದೀರ್ಘವಾದವು.

—ಚಂದ್ರಕಾಂತ ಕಂದಗುಳ, ಹುಬ್ಬಳ್ಳಿ.

** ಇಲ್ಲೊಬ್ಬ ಬಾಯಿಗೆ ಬಂದಂತೆ ಎಲ್ಲರನ್ನು ನಿಂದಿಸುವನು. ಅವನ ಕೈಲಿ ಬೈಸಿಕೊಂಡವರು ಇದ್ದಕ್ಕಿದ್ದಂತೆಯೇ ಹೊಗಳಿಸಿಕೊಳ್ಳಲ್ಪಡುವರು. ಹೊಗಳಿಸಿ ಕೊಳ್ಳುವ ಕೆಲವರು ನಿಂದೆಗೂ ಒಳಗಾಗಬಹುದು. ಅವನ ಮಾತನ್ನು ನಂಬುವುದ್ಹೇಗೆ ?

* ಹುಚ್ಚುನಾಯಿ ಬೊಗಳಿದ್ದನ್ನೆಲ್ಲ ನಂಬಿ ರಾತ್ರಿಯಿಡೀ ಎದ್ದು ಕೂತರೆ ನೀವು ಹುಚ್ಚರಾಗುವಿರಿ ಅಷ್ಟೆ ! ಅದೇನು ವಾಸ್ತವತೆ ಗ್ರಹಿಸಿ ಬೊಗಳುತ್ತದೆಯೇ ? ಇಲ್ಲ ; ತನಗೆ ಉದ್ರೇಕವಾದಾಗ ಚೀರಾಡುತ್ತೆ ಅಷ್ಟೆ !

—ಸ್ವಾಮಿ ಶ್ರದ್ಧಾನಂದ, ಊರು ಬೇಡ.

** ನಾನೋರ್ವ ಧರ್ಮಬೋಧಕ. ಜನರಲ್ಲಿ ವೈಚಾರಿಕ ಬಗೆಯಿಂದ ಧರ್ಮವನ್ನು ಹೇಳುತ್ತಾ ಹೋಗುತ್ತಿರುವೆ. ಆದರೆ ಜನತೆ ವಿಚಾರ ಪ್ರಧಾನ ಬೋಧೆಗಿಂತ ಜಾದೂ, ಕೈ ಚಳಕಗಳಿಗೆ ಆಕರ್ಷಿತರಾಗುವುದು ಬಹಳ. ನಾನು ಅದೇ ದಾರಿ ಹಿಡಿದು ದಿಢೀರ್ ಮಹಾತ್ಮನಾಗುವ ಉದ್ದೇಶ ಹೊಂದಿರುವೆ. ನಿಮ್ಮ ಸಲಹೆ !

* ನೇರದಾರಿಯ ಸಂಚಾರ ನಿರಪಾಯಕಾರಿ; ಅಡ್ಡದಾರಿಗಳು ಅಪಾಯಕಾರಿ. ಬಿರುಗಾಳಿಯಂತಹ ಕೀರ್ತಿ, ಮೂಢಜನತೆಯನ್ನು ಮರುಳುಗೊಳಿಸಬಹುದೇ ವಿನಾ ವಿಚಾರವಂತರನ್ನಲ್ಲ. ಈ ದಿಢೀರ್ ಬಿರುಗಾಳಿಯಂತಹ ಕೀರ್ತಿ ಅನ್ಯರಿಗೂ ಅಪಾಯಕಾರಿ, ಮತ್ತು ಕ್ಷಣಿಕ. ಮಂದಮಾರುತ ನಿಧಾನವಾಗಿ ಸಾಗುತ್ತ ಹರ್ಷವನ್ನು ನೀಡುವಂತೆ ಧಾರ್ಮಿಕ ಪ್ರಸಾರಕರೂ ಜ್ಞಾನವಾಹಕರಾಗುವುದೇ ಹೆದ್ದಾರಿ. ಇದರಲ್ಲೇ ಸಾಗಿರಿ.

—ಶಿವಪುತ್ರ ನಾಗೋರೆ, ಧಾರವಾಡ.

** ತಾನೊಬ್ಬ ಸತ್ಯನಿಷ್ಠನೆಂದು ತಿಳಿದು, ಸದಾ ಅನ್ಯರ ನಿಂದೆಯ ಬರವಣಿಗೆಯಲ್ಲೇ ಕಾಲಕಳೆಯುವ ಓರ್ವನು ತುಂಬಾ ಅಶ್ಲೀಲ ಭಾಷೆ ಬಳಸುತ್ತಾನೆ ? ನಿಮ್ಮ ಅಭಿಪ್ರಾಯ.

* ಬುದ್ಧಿ ಸೋತಾಗ ನಾಲಿಗೆ ಸಡಿಲಾಗುತ್ತದೆ.

—ಎನ್. ಎಸ್. ಉಮದಿ, ಹೂಬಳ್ಳಿ

* ತಮ್ಮ ಸಂಸ್ಥೆ ಮಾಡುತ್ತಿರುವ ವೈಶಿಷ್ಟ್ಯ ಪೂರ್ಣವಾದ ಸಮಾಜಸೇವೆ, ಸಾಹಿತ್ಯ

ಪ್ರಸಾರ ,ಧರ್ಮಜಾಗೃತಿ ಎಲ್ಲವನ್ನು ಮನದಟ್ಟು ಮಾಡಿಕೊಟ್ಟರೂ ಇಲ್ಲೋರ್ವನು ಅರಿತುಕೊಳ್ಳಲು ತಯಾರಿಲ್ಲ. ಏನು ಮಾಡಬೇಕು ?

ಅವರು ಅರಿತಿಲ್ಲ ಎಂಬಲ್ಲಿ ನಿಮ್ಮ ತಿಳುವಳಿಕೆ ತಪ್ಪಿದೆ. ನಿದ್ದೆ ಮಾಡುವವರನ್ನು ಎಬ್ಬಿಸಬಹುದು, ನಿದ್ದೆಯ ಸೋಗು ಹಾಕಿದವರನ್ನು ಎಬ್ಬಿಸಲು ಅಸಾಧ್ಯ ! ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿರಿ.

—ಭರತೇಶ ಪಾಟೀಲ.

** ಜೀವನ ವಾಸಸ್ಥಾನ ಯಾವುದು?

* ಆತ್ಮನಿಗೆ ತ್ರೈಮಲಗಳ ಆವರಣವಾದಾಗ ಅದು ಜೀವ ಎನಿಸಿಕೊಳ್ಳುತ್ತದೆ. ಆತ್ಮ ಒಂದೇ ಜಾಗದಲ್ಲಿ ಸೀಮಿತವಾಗಿಲ್ಲ, ದೇಹದಲ್ಲೆಲ್ಲ ಸರ್ವವ್ಯಾಪಿ. ವಿದ್ಯುತ್ ತಂತಿಯಲ್ಲೆಲ್ಲ ಇದ್ದರೂ ಹೋಲ್ಡರ್ ಅಥವಾ ಪವರ್ ಪಾಯಿಂಟನಲ್ಲಿ ಅಭಿವ್ಯಕ್ತವಾಗುವಂತೆ, ಆತ್ಮನು ಹೃದಯ ಕಮಲ, ಭ್ರೂಮಧ್ಯಗಳಲ್ಲಿ ಪ್ರಕಟವಾಗುತ್ತದೆ.

—ಜಿ. ಬಿ. ನಾಗರಾಜಯ್ಯ, ಚನ್ನಪಟ್ಟಣ.

** ಜುಲೈ ತಿಂಗಳ ಕಲ್ಯಾಣ ಕಿರಣದಲ್ಲಿ ಲಿಂಗಾಯತ ಧರ್ಮಕ್ಕೆ ಬಸವಣ್ಣನವರೇ ಆದಿ ಗುರು ಎಂದು ಉತ್ತರಿಸಿರುವಿರಲ್ಲ. ಅದಕ್ಕೆ ಮುಂಚೆ ಲಿಂಗಾಯತ ಧರ್ಮವು ಇರಲಿಲ್ಲವೆಂದು ಅರ್ಥಮಾಡಿಕೊಳ್ಳೋಣವೆ?

* ಅಹುದು. ಅಂಗದ ಮೇಲೆ ಇಷ್ಟಲಿಂಗವನ್ನು ಧರಿಸಿಕೊಂಡು, ಕಡ್ಡಾಯವಾದ ಧರ್ಮ ಸಂಸ್ಕಾರ ಪಡೆದು, ಜಾತಿವರ್ಣವರ್ಗಗಳನ್ನೊಪ್ಪದ ವಿಚಾರ-ಆಚಾರ ಸಂಹಿತೆ ಪ್ರಾರಂಭವಾದುದು ಬಸವಣ್ಣನವರಿಂದಲೇ ! ಅವರಿಗಿಂತ ಮೊದಲಿಗೆ ಇದ್ದುದು ಶೈವಧರ್ಮ. ಇದು ವೇದಪೂರ್ವ ಕಾಲದ, ಹರಪ್ಪಾಮೊಹೆಂಜೊದಾರೊ ಸಂಸ್ಕೃತಿಯ ಕಾಲದಿಂದ ಪ್ರಚಲಿತವಿದೆ. ದೇಹದ ಮೇಲೆ ಸ್ಥಾವರ ಲಿಂಗ ಧರಿಸುವ ಶೈವ ಪದ್ಧತಿ ಮೊದಲಿಗೆ ಇದ್ದರೂ, ಸಂಪೂರ್ಣ ಹೊಸ ಅರ್ಥ, ತತ್ತ್ವ-ಜ್ಞಾನ, ಘೋಷಣೆ ಒಳಗೊಂಡ ಇಷ್ಟಲಿಂಗಧಾರಣೆಯ ಸಂವಿಧಾನ ಆರಂಭವಾದುದು ಬಸವಣ್ಣನವರಿಂದ ! ಅವರು ಆದ್ಯರಾದುದರಿಂದಲೇ ಅವರ ಹೆಸರು ಮಂತ್ರವಾಯಿತು.

—ಕೆ. ಜಿ. ಮಾಶೆಟ್ಟಿ, ಬೀದರ.

** ಮಾನವ ಧರ್ಮ, ಶರಣಧರ್ಮ ಇವೆರಡರಲ್ಲಿ ಯಾವುದರ ಅರ್ಥವ್ಯಾಪ್ತಿ ಹಿರಿದು ?

ಪಶು ಪ್ರವೃತ್ತಿಯಿಂದ ಮಾನವನ ಉತ್ಪತ್ತಿ, ತರುವ ನೈತಿಕತೆಯಿಂದ ಕೂಡಿರುವುದು ಮಾನವ ಧರ್ಮ. ಮರೆತ ಮಾನವನನ್ನು ಅಜ್ಞಾನ ಪಂಕದಿಂದ ಮೇಲೆತ್ತಿ (Enlightened) ಆನಂದಾನುಭೂತಿಯ ಶರಣನನ್ನಾಗಿ ಮಾಡುವುದು ಶರಣಧರ್ಮ. ಮೊದಲನೆಯದು ಬಿ.ಎ, ಎರಡನೆಯದು ಎಂ.ಎ. ಬಿ.ಎ. ಯ ಮುಂದಿನ ಹಂತ ಎಂ.ಎ. ಎರಡನೆಯದರಲ್ಲಿ ಮೊದಲಿನದು ಅಡಕವಾಗಿದೆಯಷ್ಟೇ !

—ಉಷಾ, ಚಿಕ್ಕಮಗಳೂರು.

** ಪಾರ್ವತಿ ಗಣಪತಿಯನ್ನು ಬಾಗಿಲು ಕಾಯಲು ಕುಳಿರಿಸಿ ಸ್ನಾನಕ್ಕಿಳಿದಾಗ ಶಿವನು ಬರಲು, ಅವನನ್ನು ತಡೆದ ಗಣಪತಿಯ ತಲೆ ಚೆಂಡಾಡಿದ. ಪಾರ್ವತಿ ಅಳಲು ಮರಿಯಾನೆಯ ತಲೆಯನ್ನು ಹೊಂದಿಸಿ ಜೀವಕೊಟ್ಟನಲ್ಲ. ಆ ಮಗುವಿನ ತಲೆಯನ್ನೇ ಅಂಟಿಸ ಬಹುದಿತ್ತು. ಇದು ಅವನ ಮೂರ್ಖತ್ವ ತೋರಿಸುವುದೋ, ಬುದ್ಧಿವಂತಿಕೆಯನ್ನೋ !

* ಐತಿಹಾಸಿಕ ಯುಗಪುರುಷನಾಗಿ ಬಾಳಿದ ಯೋಗಿ ಶಿವನ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವನ್ನರಿಯದೆ ದೇವರೆಂದು, ಪೌರಾಣಿಕ ದೇವತೆಯೆಂದು ಪುರಾಣಿಕ ಮಾಡಿಬಿಟ್ಟರು. ದೇವರೇ ಆಗಿದ್ದಿದ್ದರೆ ಅವನು ಸರ್ವಶಕ್ತನಿರಬೇಕಾಗಿತ್ತು. ಮಣ್ಣಿನ ಗೊಂಬೆಗೆ ಜೀವಕೊಟ್ಟ ಶಿವ ಪಾರ್ವತಿಯರಿಗೆ ಆಗಲೇ ಜೀವಂತವಿದ್ದು ಸತ್ತ ಮಗುವಿಗೆ ಜೀವ ಕೊಡಲು ಬರುತ್ತಿರಲಿಲ್ಲವೇ? ಈ ದೃಷ್ಟಿಕೋನವೇ ತಪ್ಪು. ಶಿವನು ಒಬ್ಬ ಐತಿಹಾಸಿಕ ಮಹಾಪುರುಷನೆಂದು ಅರ್ಥವಿಸಿದಾಗ ಈ ಪ್ರಸಂಗದಲ್ಲಿ ಅವನ ಬುದ್ಧಿವಂತಿಕೆ ವ್ಯಕ್ತವಾಗುತ್ತದೆ. ಹೇಗೆಂದರೆ, ಉದ್ವಿಗ್ನತೆಯಲ್ಲಿ ತಲೆ ಕತ್ತರಿಸಿದಾಗ ಅದು ಹಲವಾರು ಹೋಳಾಗಿರಬೇಕು. ಅದಕ್ಕೇ ಸತ್ತಿದ್ದ ಆನೆ ಮರಿಯ ತಲೆಯನ್ನು transplant (ಕಸಿ) ಮಾಡಿರಬೇಕು. ಹೀಗೆ ಮಾನವನ ಅಂಗಾಂಗದೊಡನೆ ಬೇರೊಂದು ಪ್ರಾಣಿಯ ರುಂಡ ಸೇರಿಸಿ transplantation ಮಾಡಿ ಯಶಸ್ವಿಯಾಗಿರುವ ಶಸ್ತ್ರವೈದ್ಯ ಶಿವ ಎಂದಾಗ ಅವನ ಪ್ರಚಂಡ ಬುದ್ಧಿವಂತಿಕೆ ಮತ್ತು ಅವನು ವೈದ್ಯರಾಜ ಎಂಬ ವೈಶಿಷ್ಟ್ಯ ಗೊತ್ತಾಗುತ್ತದೆ.

—ಅಂತರ್ಮುಖಿ, ಬೆಂಗಳೂರು.

** ದುಷ್ಟರು, ಅಪ್ರಮಾಣಿಕರು, ನಿಂದಕರೂ ಕುಹಕಿಗಳು ತುಂಬಿರುವ ಜಗತ್ತಿನಲ್ಲಿ ನಿಜವಾದ ದೈವೀಶ್ರದ್ಧೆ, ಶರಣಾಗತಿ, ಸಜ್ಜನತ್ವ ತುಂಬಿರುವವರು ಮೌನವಾಗಿರುವುದೇ ಲೇಸೆಂದು ನನ್ನ ಅಭಿಪ್ರಾಯ. ತನ್ಮಮ್ಮದು

* ಕಾಗೆಗಳ ಸಂಖ್ಯೆ ಅಪಾರವೆಂದು ಕೋಗಿಲೆಯು ಹಾಡದೇ ಇದ್ದು, ಮೌನ ತಾಳಿದರೆ ದೇವರ ಸೃಷ್ಟಿಯಲ್ಲಿ ಕೋಗಿಲೆಗಳಂತಹ ಪಂಚಮದಿಂಚರದ ಪಕ್ಷಿಗಳೇ ಇಲ್ಲವೆಂದು ಲೋಕ ತಿಳಿದೀತು ! ದೈವೀಸೃಷ್ಟಿಯ ಹಿರಿಮೆ ಸಾರಲೋಸುಗವಾದರೂ ಸಜ್ಜನರು ಕಾರ್ಯಪ್ರವೃತ್ತರಾಗಬೇಕು. ★

ವಿಚಿತ್ರ, ಆದರೂ ಸತ್ಯ

ಹಾಲೂಡಿಸುವಿಕೆ ಉತ್ತಮ ಗರ್ಭನಿರೋಧಕ

"ತಾಯಿ ಮತ್ತು ತಾಯಿ ಹಾಲಿಗೆ ಬದಲಾದ ಬೇರೊಂದು ವಸ್ತುವಿಲ್ಲ" ಎಂಬ ಮಾತು ಸರ್ವವಿದಿತ. ಆದರೆ ತಾಯಿಯು ಹಾಲೂಡಿಸುವ ಕ್ರಿಯೆ ಉತ್ತಮ ಗರ್ಭನಿರೋಧಕ ಎಂದು ಎಷ್ಟು ಜನಕ್ಕೆ ಗೊತ್ತು ! ನ್ಯೂಯಾರ್ಕಿನ ಸುಪ್ರಸಿದ್ಧ ಸ್ತ್ರೀರೋಗ ತಜ್ಞನ ಪ್ರಕಾರ ಇದು ಸತ್ಯ. ಕೃತಕ ಗರ್ಭಧಾರಣ ನಿರೋಧಕಗಳಾದ ಗುಳಿಗೆ, ವಂಕಿ, ಗರ್ಭಪಾತ ಇತ್ಯಾದಿಗಿಂತಲೂ ಮಕ್ಕಳಿಗೆ ಹಾಲುಣಿಸುವುದು ತೀವ್ರ ಪ್ರಜೋತ್ಪತ್ತಿಗೆ ನೈಸರ್ಗಿಕ ತಡೆ. ಮಕ್ಕಳು ಚೀಪುವ ಕ್ರಿಯೆಯು ಸ್ತ್ರೀಯಲ್ಲಿ ಪ್ರೊಲಾಕ್ಟಿನ್ ಎಂಬ ಹಾರ್ಮೋನನ್ನು ಉತ್ಪಾದಿಸುವದು. ಅದು ರಕ್ತದಲ್ಲಿ ಪ್ರವಹಿಸಿ, ಅಂಡಾಶಯವನ್ನು ತಲುಪುವದು ಮತ್ತು ಅಂಡಾಣುಗಳು ಬಿಡುಗಡೆಯಾಗದಂತೆ ತಡೆಯುವದು ಪ್ರಜೋತ್ಪತ್ತಿ ತಡೆಗೆ ನಿಸರ್ಗಕೊಟ್ಟಿರುವ ನೈಸರ್ಗಿಕ ಗರ್ಭನಿರೋಧಕ ಪ್ರೊಲಾಕ್ಟಿನ್.

ಕಣ್ಣಿನಲ್ಲಿ ಹತ್ತು ಸೆಂಟಿಮೀಟರ್ ಉದ್ದದ ಹುಳು

ಕೇರಳ ರಾಜ್ಯದ ಕೊಚ್ಚಿನ್ ನಗರದ ಸರ್ಕಾರಿ ಆಸ್ಪತ್ರೆಯ ವೈದ್ಯರು 65 ವರ್ಷಗಳ ವೃದ್ಧೆಯೊಬ್ಬಳ ಕಣ್ಣಿನಿಂದ ಶಸ್ತ್ರ ಚಿಕಿತ್ಸೆ ಮಾಡಿ ಹತ್ತು ಸೆಂಟಿಮೀಟರ್ ಉದ್ದದ ಹುಳುವೊಂದನ್ನು ಹೊರತೆಗೆದರು.

ತೀಕ್ಷ್ಣ ದೂರದರ್ಶಕ

ರಷ್ಯದ ವಿಜ್ಞಾನಿಗಳು ಅತ್ಯಂತ ತೀಕ್ಷ್ಣ ಶಕ್ತಿಯ ದೂರದರ್ಶಕವೊಂದನ್ನು ತಯಾರಿಸಿದ್ದಾರೆ. ಇದರ ಮೂಲಕ 25,000 ಕಿಲೋಮೀಟರ್ ದೂರದಲ್ಲಿರುವ ಒಂದು ಉರಿಯುವ ಮೋಂಬತ್ತಿಯನ್ನು ನೋಡಬಹುದು. ಈ ದೂರದರ್ಶಕದ ಕನ್ನಡಿಯ ಭಾರ 42 ಟನ್‌ಗಳು. ಅದರ ಮುಖ ಅತ್ಯಂತ ತೀಕ್ಷ್ಣಗ್ರಾಹಿ.

ದೈತ್ಯ ಸಾಹಿತಿ

ಬ್ರಿಟನ್ನಿನ ಸುಪ್ರಸಿದ್ಧ ಕಾದಂಬರಿಕಾರ ಜಾನ್ ಕ್ರೀಸೆ (1908–73) ತನ್ನ ಸ್ವಂತ ಹೆಸರಿನಲ್ಲಿ ಮತ್ತು 13ಕಾವ್ಯ ನಾಮಗಳ ಅಡಿಯಲ್ಲಿ ಸುಮಾರು 40,000,000 ಶಬ್ದಗಳುಳ್ಳ 564 ಪುಸ್ತಕಗಳನ್ನು ಬರೆದ. ಒಂದು ದಿನದ ರಜೆ ಪಡೆದೂ ಸರಾಸರಿ ವಾರಕ್ಕೆರಡು ಪುಸ್ತಕ ಬರೆಯುತ್ತಿದ್ದ.

ವಿಮಾನಾಪಘಾತ ಮತ್ತು ಪಕ್ಷಿದಾಳಿ

ಪ್ರತಿ ವರುಷ ಸುಮಾರು 2,400 ಸಲ ಪಕ್ಷಿಗಳು ಹಾರುವ ವಿಮಾನಗಳ ಮೇಲೆ ದಾಳಿ ಮಾಡುತ್ತವೆ. ಮತ್ತು ಅದರಿಂದ ಸುಮಾರು ಹತ್ತು ಕೋಟಿ ರೂಪಾಯಿಗಳ ನಷ್ಟ ಸಂಭವಿಸುತ್ತದೆ. ಹೆಚ್ಚಿನ ವಿಮಾನಗಳ ಡಿಕ್ಕಿ ಪಕ್ಷಿಗಳ ದಾಳಿಯಿಂದಲೇ ಎಂಬ ವರದಿ ಇದೆ.

ದೃಷ್ಟಾಂತ ಕಥೆ

ಮಾನವನ ಬಾಳಿನಲ್ಲಿ ಜ್ಞಾನ ಮತ್ತು ಬುದ್ಧಿವಂತಿಕೆ ಎರಡು ಕಣ್ಣುಗಳಿದ್ದಂತೆ ಅವಿಲ್ಲದ ಮನುಷ್ಯ ನಿಜಕ್ಕೂ ಕುರುಡನಂತೆ. ಇದನ್ನು ಮಾರ್ಮಿಕವಾಗಿ ಸ್ಪಷ್ಟೀಕರಿಸುತ್ತದೆ ಈ ದೃಷ್ಟಾಂತ ಕಥೆ.

ಒಮ್ಮೆ ಶಿವಪಾರ್ವತಿಯರು ಗಗನ ವಿಹಾರ ಮಾಡುತ್ತ ಸಾಗಿದ್ದರು. ಒಂದು ಊರಿನ ಮೇಲೆ ಅವರ ಸವಾರಿ ಸಾಗುತ್ತಿರುವಾಗ ಕೆಳಗೆ ಕುಟುಂಬ ಒಂದರಲ್ಲಿ ವಿಪರೀತ ಗಲಾಟೆ ನಡೆಯುತ್ತಿತ್ತು. ಗಂಡ ಹೆಂಡತಿ ತುಂಬಾ ಅಜ್ಞಾನಿಗಳಂತೆ, ಅವಿವೇಕಿಗಳಂತೆ ತೋರುತ್ತಿದ್ದರು. ಒಬ್ಬರಿಗೊಬ್ಬರು ಬೈಯ್ದಾಡುತ್ತ ಮಕ್ಕಳನ್ನು ಹೊಡೆಯುತ್ತಲಿದ್ದರು. ಸಂಸಾರವು ಯುದ್ಧ ಭೂಮಿಯಷ್ಟು ಭೀಕರವಾಗಿತ್ತು. ಇದನ್ನು ನೋಡಿ ಹೆಂಗರುಳಿನ, ಮಾತೃಹೃದಯದ ಪಾರ್ವತಿಗೆ ಬಹಳಷ್ಟು ಮರುಕವೆನ್ನಿಸಿತು. ಆಕೆ ಹೇಳಿದಳು : "ಪಾಪ, ಈ ಜನ ತುಂಬಾ ದುಃಖಿತರಾಗಿದ್ದಾರೆ. ಆದ್ದರಿಂದ ಏನಾದರೂ ವರ ನೀಡಿ, ಅವರು ಉದ್ಧಾರಗೊಳ್ಳುವಂತೆ ಯತ್ನಿಸೋಣ ಎಂದಳು ಶಿವನ ಕಡೆಗೆ ತಿರುಗಿ.

"ಏನು ಮಾಡುವುದು ಪಾರ್ವತಿ. ಅಜ್ಞಾನಿಗಳಾದ ಇವರಿಗೆ ಯಾವ ವರ ಕೊಟ್ಟರೂ ಪ್ರಯೋಜನವಾಗದು. ಕೊಟ್ಟ ವರವನ್ನು ಸದುಪಯೋಗಪಡಿಸಿಕೊಳ್ಳುವ ಬುದ್ಧಿಯೂ ಇವರಿಗಿಲ್ಲ...."

"ಹಾಗಿದ್ದರೆ ಅವರಿಗೆ ಒಂದೇ ಒಂದು ಅವಕಾಶ ಕೊಡುವದು ಬೇಡ. ಮೂರು ಅವಕಾಶಗಳನ್ನು ಕೊಡೋಣ...."

"ಒಪ್ಪಿಗೆ" ಎಂದ ಶಿವನು, ಪತ್ನಿ ಸಹಿತನಾಗಿ ಕೆಳಗಿಳಿದು ಬಂದು ಕಾಣಿಸಿಕೊಂಡ ಆ ಜಗಳಗಂಟ ಸಂಸಾರದಲ್ಲಿ. "ನಿನ್ನ ಹೆಸರೇನಪ್ಪ?" "ಶುನಕಯ್ಯ" ಸಂಸಾರಸ್ಥ ಹೇಳಿದ. "ಎಲೈ ಶುನಕಯ್ಯ ! ನೀನು ಬಹಳ ಕಷ್ಟಪಡುತ್ತಿರುವೆ. ಕಂಡು ನನಗೆ ಬಹಳಷ್ಟು ವ್ಯಥೆಯಾಗಿದೆ. ನೀನು ಹೆಂಡತಿ ಮಕ್ಕಳೊಡನೆ ಸುಖವಾಗಿ ಬದುಕಲೆಂದು ವರಗಳನ್ನು ಕೊಡಲಿಚ್ಛಿಸಿದ್ದೇನೆ. ನಿನಗೇನು ಬೇಕು ಹೇಳು ?

ಹೆಂಡತಿಯನ್ನು ಕೋಲು ತೆಗೆದುಕೊಂಡು ಹೊಡೆಯುತ್ತಿದ್ದ ಅವನು ನಿಲ್ಲಿಸಿ ನುಡಿದ "ಹಂದಿಯಂಥ ಹೆಂಡತಿ ಕಟ್ಟಿಕೊಂಡು ನಾನು ಯಾವ ಸುಖ ಪಡಬಲ್ಲೆ. ಯಾವ ವರಾ ಕೊಟ್ಟರೂ ಅಷ್ಟೆ" ಎಂದು ಮತ್ತೆ ಬಡಿಯಲಾರಂಭಿಸಿದ.

"ತಥಾಸ್ತು...." ಶಿವನೆಂದು, "ಅಮ್ಮಾ ನಿನ್ನ ಹೆಸರೇನಮ್ಮ...."

"ವರಾಹಿ" ಮುಸಿ ಮುಸಿ ಅಳುತ್ತ ನುಡಿದಳು.

"ಹೋಗಲಿ....ನೀನಾದರೂ ವರ ಕೇಳಮ್ಮ. ಗಂಡ ಮಕ್ಕಳೊಡನೆ ಸುಖವಾಗಿರುವೆಯಂತೆ...." ಪಾರ್ವತಿ ಅಂತಃಕರಣ ಪೂರಿತಳಾಗಿ ನುಡಿದಳು.

"ಬಿಡಿ....ತಾಯಿ. ಏನು ಸುಖ. ಈ ನಾಯಿಯಂಥವನ ಕೈಲಿ ಬಾಳ್ವೆ ಮಾಡೋವರೆಗೆ ಕನಸಿನ ಗಂಟು ಸುಖ ಅಂಬೋದು...."

"ತಥಾಸ್ತು" ಎಂದ ಶಿವನು. ಗಂಡನು ನಾಯಿಯಾಗಿಯೂ, ಹೆಂಡತಿ ವರಾಹಿ ಹಂದಿಯಾಗಿಯೂ ಒಂದಕ್ಕೊಂದು ಜಗಳವಾಡುತ್ತ ಬೌಂವ್ ಬೌಂವ್, ಕುಂಯಿ ಕುಂಯಿ ಎಂದು ಹೊರಗೋಡಿದವು. ಪಾರ್ವತಿ ಚಟಪಟಿಸ ತೊಡಗಿದಳು. ತಾನು ಉದ್ದೇಶಿಸಿದ್ದು ಈಡೇರಲಿಲ್ಲವೆಂದು ಕಳವಳವಾಗಿ ಅಲ್ಲಿಯೇ ಅಳುತ್ತ ನಿಂತಿದ್ದ ಶುನಕಯ್ಯನ ಹಿರಿಯ ಮಗ ಮುಗ್ಧಪ್ಪನನ್ನು ಕೇಳಿದಳು :

"ಮಗು, ನೀನಾದರೂ ವರವನ್ನು ಕೇಳು. ಸುಖವಾಗಿ ಬಾಳಬಹುದು...." ಅವನು ಅಳುತ್ತ ಹೇಳಿದ :

"ತಾಯಿ, ನನ್ನ ಅಪ್ಪ–ಅಮ್ಮನನ್ನು ಕಳೆದುಕೊಂಡು ನಾನೇನು ಸುಖವಾಗಿರಬಲ್ಲೆ. ಆದ್ದರಿಂದ ಯಾವ ವರವೂ ಬೇಡ. ನನ್ನ ತಾಯಿ–ತಂದೆ ಮೊದಲ ರೂಪಕ್ಕೆ ಮರಳುವಂತಾದರೆ ಸಾಕು...."

ಶಿವನು 'ತಥಾಸ್ತು' ಎಂದಾಗ ಹಂದಿ-ನಾಯಿಗಳು ರೂಪವನ್ನು ತೊರೆದು ಮೊದಲಿನ ಮಾನವ ರೂಪಕ್ಕೆ ಮರಳಿದವು. ಶಿವ-ಪಾರ್ವತಿಯರು ತಮ್ಮ ಪ್ರಯತ್ನ ಕೈಬಿಟ್ಟು ಮುಂದೆ ಸಾಗಿದರು.

ಇನ್ನೊಂದು ಊರು, ಅಲ್ಲೊಂದು ದೇವಾಲಯ. ನಿಷ್ಠೆಯಿಂದ ಶಿವಜ್ಞಾನಿ ಎಂಬ ಓರ್ವ ತರುಣ ಗುಡಿಯಲ್ಲಿದ್ದ ಶಿವಲಿಂಗವನ್ನು ಅಷ್ಟವಿಧಾರ್ಚನೆ, ಪ್ರಾರ್ಥನೆಗಳಿಂದ ಆರಾಧಿಸುತ್ತಿದ್ದ. ಶಿವನು ಪಾರ್ವತಿಗೆ ಹೇಳಿದ, "ಇಲ್ಲಿ ನಾವು ಶಿವಲಿಂಗ ಮುಖದಲ್ಲಿ ಕಾಣಿಸಿಕೊಳ್ಳೋಣ ಗಿರಿಜೆ. ಬುದ್ಧಿ–ಜ್ಞಾನವಿರುವ ಈ ತರುಣ ನಮ್ಮ ವರಗಳನ್ನು ಹೇಗೆ ಉಪಯೋಗಿಸಿಕೊಳ್ಳಬಲ್ಲನೆಂಬುದನ್ನು ತೋರಿಸುವೆ." "ಹಾಗಾದರೆ ಇವನಿಗೆ ಒಂದೇ ಒಂದು ಅವಕಾಶ ಮಾತ್ರ ಕೊಡೋಣ" ಪಾರ್ವತಿ ನುಡಿದಳು.

ಪೂಜೆಯಲ್ಲಿ ತಲ್ಲೀನನಾಗಿದ್ದ ಶಿವಜ್ಞಾನಿಯ ಮುಂದೆ ಶಿವ ಪಾರ್ವತಿಯರು ಕಾಣಿಸಿಕೊಂಡಾಗ ಅವನು ಆನಂದ ಆಶ್ಚರ್ಯಗಳಿಂದ ಪುಳಕಿತನಾಗಿ ಸ್ತುತಿಸುತ್ತ ನಮಸ್ಕರಿಸಿದ.

"ಶಿವಜ್ಞಾನಿ, ನಿನಗೆ ವರವನ್ನು ಕೊಡಲು ಸಂಕಲ್ಪಿಸಿದ್ದೇವೆ. ಆದರೆ ಒಂದೇ ಒಂದು ಅವಕಾಶ. ಏನು ಬೇಕು ಕೇಳು...."

"ಮಹಾದೇವ, ಧನ್ಯನಾದೆ. ಆದರೆ ಪ್ರಭು, ನನ್ನ ತಾಯಿ ತಂದೆಯರೊಡನೆ ಸಮಾಲೋಚಿಸದೆ ವರ ಕೇಳಲಾರೆ. ಸಮಯಾವಕಾಶ ಮಾಡುವೆಯಾ?"

"ಆಗಲಿ ಮಗು, ಹೋಗಿ ಕೇಳಿ ಬಾ...."

ಶಿವಜ್ಞಾನಿ ನಾಗಾಲೋಟದಿಂದ ಮನೆಯ ಕಡೆ ಓಡಿದ, ತಾಯಿಗೆ ನಮಸ್ಕರಿಸಿ ನುಡಿದ:

''ಜನನಿ, ಶಿವ-ಪಾರ್ವತಿಯರು ವಶ ಕೊಡಲು ಸಿದ್ಧರಿದ್ದಾರೆ ಏನು ಕೇಳಲಿ...."

"ಮಗನೇ ನೀನು ಹೆಂಡತಿಯೊಂದಿಗೆ ಸುಖವಾಗಿರುವದನ್ನು ಕಾಣಲು ಕಣ್ಣುಗಳೇ ಇಲ್ಲ, ಆದ್ದರಿಂದ ನನಗೆ ಕಣ್ಣು ಬರಲು ಕೇಳು....''

''ಬೇಡ ಮಗು. ನಾವು ಈಗಲೋ ಆಗಲೋ ಬಿದ್ದು ಹೋಗುವ ಮುದಿ ಕೊರಡುಗಳು. ಕಣ್ಣು ಬಂದು ಏನಾಗಬೇಕಾಗಿದೆ. ನಿನಗೆ ಅಷ್ಟೈಶ್ವರ್ಯ ಬರಲು ಕೇಳಿಕೋ ಜೀವನವಿಡೀ ಸುಖವಾಗಿರುವೆಯಂತೆ....''

ಶಿವಜ್ಞಾನಿ ನಡುಮನೆ ದಾಟುವಾಗ ಪತ್ನಿ ಬಂದಳು. ಅತ್ತೆ ಮಾವಂದಿರ ಮಾತುಗಳನ್ನೆಲ್ಲ ಕೇಳಿದ್ದಳಾಕೆ. "ನೋಡಿ, ನಮಗೆ ಯಾವ ಐಶ್ವರ್ಯ ಬೇಡ. ಮದುವೆಯಾಗಿ ಮೂರು ವರ್ಷಗಳಾದರೂ ಮಕ್ಕಳಾಗಿಲ್ಲ. ಮಗುವಾಗುವಂತ ರ ಕೇಳಿ...." ಚಿಂತನಾಮಗ್ನನಾಗಿ ಬಂದ ಶಿವಜ್ಞಾನಿ."ಏನಪ್ಪಾ, ನಿರ್ಧರಿಸಿದೆಯಾ?' ಶಿವನು ಕೇಳಿದ.

"ಮಹಾಪ್ರಭು, ನನ್ನ ತಾಯಿ ತಂದೆಯರು ಬಂಗಾರದ ತೊಟ್ಟಿಲಲ್ಲಿ ಮೊಮ್ಮಗ ಆಡುವುದನ್ನು ಕಣ್ಣಾರೆ ಕಾಣುವಂತಾಗಬೇಕು. ದಯಪಾಲಿಸಿ...."

"ತಥಾಸ್ತು" ಎಂದು ಮುಗುಳ್ನಕ್ಕು ಶಿವನು ಪಾರ್ವತಿಯನ್ನು ನೋಡಿದ. ಬಂಗಾರದ ತೊಟ್ಟಿಲು ಕಟ್ಟುವಷ್ಟು ಶ್ರೀಮಂತಿಕೆ, ಅದನ್ನು ತುಂಬಲು ಮೊಮ್ಮಗ, ನೋಡಲು ಮುದುಕರಿಗೆ ಕಣ್ಣುಗಳು-ಇಷ್ಟೂ ಒಂದೇ ವರದಲ್ಲಿ ದಕ್ಕಿದವು. ಶಿವನು ನುಡಿದ: "ನೋಡಿದೆಯಾ ಬುದ್ಧಿವಂತ ಹೇಗೆ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಾನೆ".

—ತ್ರಿನೇತ್ರಿ

ಮಾತು ಜ್ಯೋತಿರ್ಲಿಂಗ

ಸಂಗ್ರಹ : ಎಂ. ಗಂಗಮ್ಮ

* ನಾವು ಬಯಸುವದು ಸಿಕ್ಕದಿದ್ದಾಗ ಸಿಕ್ಕಿದುದನ್ನೇ ಬಯಸಲು ಕಲಿಯಬೇಕು.
—ಬೂಸಿ ರಬುಟಿನ್
* ಈ ಜಗತ್ತು ಉತ್ಸಾಹಶಾಲಿಗಳ ಸೊತ್ತು —ರಾಲ್ಫ ವಾಲ್ಡೊ ಎಮರ್ಸನ್
* ಅನಂತಕೋಟಿ ಸನ್ಮಾನವ ಮಾಡಿದರೇನು? ಒಂದು ನಿಮಿಷದ ಉದಾಸೀನ ಕೆಡಿಸಿತ್ತು. —ಬಸವಣ
* ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿತ್ತು. —ಬಸವಣ್ಣ
* ಅಂಗಕ್ಕೆ ಆಚಾರವೇ ಚಲುವು; ಆತ್ಮಂಗೆ ಅರುಹೇ ಚಲುವು.
—ಷಣ್ಮುಖ ಸ್ವಾಮಿಗಳು
* ನುಡಿಯಲ್ಲಿ ಎಚ್ಚತ್ತು, ನಡೆಯಲ್ಲಿ ತಪ್ಪಿದರೆ ಹಿಡಿದಿರ್ಪಲಿಂಗವೇ ಘಟಸರ್ಪ.
—ಬಸವಣ್ಣ
* ಅರಸನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು, ಅಕ್ಕಸಾಲಿಯ ಭಕ್ತಿ ಅಗ್ಗಿಷ್ಟಿಕೆಯಲ್ಲಿ ಹೋಯಿತ್ತು. —ಚನ್ನಬಸವಣ್ಣ
* ಯೋಗಿಗೆ ಕೋಪವೇ ಮಾಯೆ, ರೋಗಿಗೆ ಅಪಥ್ಯಯೇ ಮಾಯೆ, ಜ್ಞಾನಿಗೆ ಮಿಥ್ಯೆಯೇ ಮಾಯೆ. —ಸಿದ್ಧರಾಮೇಶ್ವರ.
* ಮನವು ದರ್ಪಣದಂತೆ ಪರಿಶುದ್ಧವಾದಾಗ, ಜ್ಞಾನವು ಪ್ರತಿಬಿಂಬಿಸುತ್ತದೆ, ಆದ್ದರಿಂದ ಮನವನ್ನು ಶುದ್ಧೀಕರಿಸಲು ಪ್ರಯತ್ನಿಸಬೇಕು.
—ಶ್ರೀ ಶಂಕರಾನಂದ

ಪ್ರಾರ್ಥನೆ ಇಲ್ಲದಿದ್ದರೆ, ನಾನು ಎಂದೋ ಹುಚ್ಚನಾಗಿರುತ್ತಿದ್ದೆ.
—ಗಾಂಧೀಜಿ.

* ಸ್ವಾತಂತ್ರ್ಯವು ಪ್ರಗತಿಗೆ ಪ್ರಾಣವಿದ್ದಹಾಗೆ.—ಆರ್. ಜಿ. ಇಂಗರ್ ಸಾಲ್.
* ಸಾವಿರ ಹಸುಗಳ ಮಧ್ಯೆಯೂ ಕರುವು ತನ್ನ ತಾಯಿಯನ್ನೇ ಗುರುತಿಸುವಂತೆ, ಮಾನವ ಮಾಡಿದ ಪಾಪ-ಪುಣ್ಯಗಳು ಕರ್ತೃವನ್ನೇ ಹುಡಿಕಿಕೊಂಡು ಹೋಗುತ್ತವೆ. —ಪಂಚತಂತ್ರ.
* ನಡೆಯಲು ಸಾಧ್ಯವಾಗುವಂತೆ ವಿಚಾರಮಾಡು, ವಿಚಾರವಂತನಾಗಿ ನಡೆ.
—ಹೆನ್ರಿ ಬರ್ಗಸ್‌ನ್
* ದೌರ್ಬಲ್ಯಕ್ಕೆ ಪರಿಹಾರ ತನ್ನ ದೌರ್ಬಲ್ಯವನ್ನು ಕುರಿತು ಚಿಂತಿಸುವದರಲ್ಲಿಲ್ಲ, ಶಕ್ತಿವಂತನಾಗುವ ಪ್ರಯತ್ನದಲ್ಲಿದೆ. —ಇಂಗ್ಲೀಷ್ ಗಾದೆ

ಕೊಳಲ ದನಿಗೆ ಸರ್ಪ ತಲೆದೂಗಿದರೇನು? ಒಳಗಣ ವಿಷದ ಬಯಕೆ ಅಳಿಯದನ್ನಕ್ಕ. —ಅಕ್ಕ ಮಹಾದೇವಿ.

ಕಲ್ಯಾಣ ಕಿರಣ - ಬಾಳಗೆಳತಿ

ನನ್ನ ಅವಳ ಸ್ನೇಹವಾಗಿ
ತಿಂಗಳಾದು ಸಂದಿತು.
ಅಂದಿನಿಂದ ದಿನದಿನಕೆ
ನಮ್ಮ ಸ್ನೇಹ ಕೊನರಿತು. ||೧||

ಮಾಸಕೊಮ್ಮೆ ಅವಳು ಬಂದು
ಎನ್ನ ಜೊತೆಯಲಿರುವಳು,
ವಚನ ಕಥೆಯ ಪೇಳ್ವಳಿವಳು
ನಕ್ಕು ನಲಿದು ಕುಣಿವಳು. ||೨||

ಅವಳ ಅಮೃತ ವಾಣಿ ಕೇಳಿ,
ಅವಳಲ್ಲಿಯ ಜ್ಞಾನ ನೋಡಿ
ನಾನು ಹರುಷಗೊಳ್ಳುವೆ,
ನೋಡಿ ನೋಡಿ ನಲಿಯುವೆ. ||೩||

ಸ್ವಾತಿ ಮಳೆಯ ಹನಿಗಾಗಿ
ದಾಹದಿಂದ ಬಾಯಿ ತೆರೆದು
ಕಾಯ್ವ ಜಾತಕ ಪಕ್ಷಿಯಂತೆ
ಕಾಯುತಿರುವೆ ಅವಳಿಗಾಗಿ. ||೪||

ಅವಳು ಯಾರು ಎಂದು ನೀವು
ಕೇಳುತಿಹಿರಿ ಸೋಜಿಗದಿಂ
ತಾಳಿ ತಾಳಿ ಪೇಳ್ವೆ ನಾನು
ನಿಮಗೆ ಏಕೀ ಅವಸರ. ||೫||

ಅವಳೇ ನಮ್ಮ ಕಲ್ಯಾಣ ಕಿರಣ
ಕನ್ನಡ ನುಡಿ ಕುವರಿಯು,
ಬಸವ ಮಂಟಪದ ಭಾಗ್ಯ ದೇವತೆ
ಅಮೃತ ನೀಡ್ವ ಕಾಮಧೇನು. ||೬||

ಕುಮಾರಿ ಚ. ಸುಲೋಚನ
ದ್ವಿತೀಯ ಬಿ.ಎಸ್‌ಸಿ. ನಂಜನಗೂಡು.

ಕರ್ಮಸಿದ್ಧಾಂತ ಕಲ್ಪನೆಯೋ ನಂಬಲರ್ಹವಾದುದೇ?

ಭಾಗ—೨

ಜಗದ್ಗುರು ಮಾತೆ ಮಹಾದೇವಿ

ಮನುಷ್ಯನಿಗೆ ಜನ್ಮ ಜನ್ಮಾಂತರಗಳಿವಯೆ ? ನಮ್ಮ ನೆನಸಿನ ಅಳವಿಗೆ ಸಿಕ್ಕುತ್ತಿರುವ ಈ ಜೀವನವಷ್ಟೇ ಸತ್ಯವೆ? "ಈ ಜೀವನದ ಪಕ್ಷಿ ಹಾರುತ್ತಿದೆ" ಎಂಬುದು ಗೊತ್ತು. ಇದು ಅನುಭವ ಸಿದ್ಧ. ಹಾಗಾದರೆ ಇದು ಎಲ್ಲಿಂದ ಹಾರಿ ಬಂದಿತೆಂಬುದಾಗಲೀ, ಅಥವಾ ಸಾವಿನ ನಂತರ ಎತ್ತ ಹೋಗುವದೆಂಬುದಾಗಲಿ ತಿಳಿಯುವದ ಸಾಧ್ಯವೆ? ಈ ಸಂದೇಹಗಳು ತಾತ್ತ್ವಿಕ ಜಗತ್ತಿನಲ್ಲಿ ಎಂದಿನಿಂದಲೂ ಕಾಡುತ್ತಿರುವಂತಹವು. ಸಾಮಾನ್ಯವಾಗಿ ಇಂದ್ರಿಯವಾದಿಗಳು (empericists) ಮತ್ತು ಭೌತಿಕವಾದಿಗಳು (materialists) ಅಂಥ ಯಾವುದೇ ಜನ್ಮಗಳನ್ನು ಒಪ್ಪರು. ಅವರ ಪ್ರಕಾರ ಈ ಜೀವನವು ಆಕಸ್ಮಿಕ (accidental)ವೇ ವಿನಾ ಪೂರ್ವನಿಯೋಜಿತ (Predestined)ವಲ್ಲ ಅಥವಾ ನಂತರ ಉಳಿಯುವದೂ ಅಲ್ಲ. ಆದರೆ ಇನ್ನು ಬಹುಪಾಲು ಜಾಗತಿಕ ತತ್ತ್ವಜ್ಞಾನಿಗಳು, ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ-ಉಭಯ ತರಲ್ಲೂ ಪುನರ್ಜನ್ಮ ಸಿದ್ಧಾಂತವನ್ನು ಒಪ್ಪುತ್ತಾರೆ.

ಸುಪ್ರಸಿದ್ಧ ಧಾರ್ಮಿಕ ವಿದ್ವಾಂಸರಾದ ಡಾ|| ಡೋರ್ನರ್, ಆರ್. ಈ.ಬೀಚರ್ ಹೆನ್ರಿ, ವಾರ್ಡ್ ಬೀಚರ್, ಫಿಲಿಪ್ಸ್ ಬ್ರೂಕ್ಸ್, ಎಮರ್ಸನ್ ಮುಂತಾದವರು ಪುನರ್ಜನ್ಮ ಸಿದ್ಧಾಂತದಲ್ಲಿ ನಂಬಿಕೆ ತಳೆದವರಿದ್ದಾರೆ. ಸುಪ್ರಸಿದ್ಧ ತತ್ತ್ವಜ್ಞಾನಿ ಸ್ಪಿನೋಜಾ ಹೇಳುತ್ತಾನೆ: "ನಾವು ಅಮರರು ಎಂಬುದನ್ನು ಅನುಭವಿಸುತ್ತೇವೆ...." ಪ್ಲೇಟೋ ತನ್ನ ಫೀಡೋ ಗ್ರಂಥದಲ್ಲಿ ಹೇಳುವನು: "ಸಾವಿನ ನಂತರ ಏನೋ ಇದೆ ಎಂದು ನನಗೆ ದೃಢ ನಂಬುಗೆ ಇದೆ." ಸಿಸಿರೋ ಹೀಗನ್ನುವನು : "ಆತ್ಮನ ಅಮರತ್ವ ಇತರರ ಕಣ್ಣಿಗೆ ಒಂದು ನನ್ನ ಭ್ರಾಂತಿಯಾಗಿಯೇ ತೋರಲಿ ; ಆದರೆ ನನಗ ಅನ್ನಿಸುತ್ತದೆ ಅದು ಒಂದು ಉತ್ತಮ ಮತ್ತು ಸುಖಕರ ಭ್ರಾಂತಿ ಎಂಬುದಾಗಿ. ನನ್ನ ಕಡೆಯ ಉಸಿರು ಇರುವವರೆಗೂ ನಾನು ಈ ನಂಬುಗೆಯನ್ನು ತಳೆದಿರುತ್ತೇನೆ." ವಾಲ್ಟ್ ವಿಟ್‌ಮನ್ನನ ವಿಚಾರ ಹೀಗಿದೆ: Leaves of grass ಎಂಬ ತನ್ನ ಗ್ರಂಥದಲ್ಲಿ "ನಿಮ್ಮ ಬದುಕಿನ ಬಗೆಗೆ ಹೇಳುವದಾಗಿದ್ದರೆ ನಾನು ದೃಢವಾಗಿ ಹೇಳುವೆ ನೀವು ಅನೇಕ ಸಾವುಗಳ ಉಳಿಕೆಗಳು, ನಾನು ಹತ್ತು ಸಹಸ್ರ ಬಾರಿ ಹುಟ್ಟಿ ಸತ್ತಿದ್ದೇನೆ ಎಂಬ ಬಗ್ಗೆ ಸಂದೇಹವಿಲ್ಲ ಎಂದು ಹೇಳುವನು."

ಜೋಹಾರನ ಸಿದ್ಧಾಂತವು| "ಎಲ್ಲ ಜೀವಿಗಳೂ ಪುನರ್ಜನ್ಮವನ್ನು ಧರಿಸಲೇ ಬೇಕಾಗಿದೆ" ಎನ್ನುತ್ತದೆ. ಸಾಲೋಮನ್ ತನ್ನ "Book of Wisdom"ನಲ್ಲಿ

ಹೇಳುವನು : "ನಾನು ಒಳ್ಳೆಯ ಸ್ವಭಾವದ ಮಗುವಾಗಿದ್ದೆ. ಆದಕಾರಣವೇ ಒಳ್ಳೇ ಜೀವ ನನಗೆ ಬಂದಿತು. ನಾನು ಒಳ್ಳೆಯವನಾಗಿದ್ದುದರಿಂದ ನಾನೊಂದು ಪರಿಶುದ್ಧವಾದ ದೇಹಕ್ಕೆ ಬಂದೆ."

ಇಲ್ಲಿಯವರೆಗೆ ಪಾಶ್ಚಿಮಾತ್ಯರ ವಿಚಾರಧಾರೆಯಿಂದ ಉಕ್ತಿಗಳನ್ನು ಹೆಕ್ಕಿ ಪೋಣಿಸಿದ್ದಾಯಿತು. ಭಾರತೀಯ ಜನ್ಯ ಎಲ್ಲ ಧರ್ಮಗಳೂ ನಿಸ್ಸಂದೇಹಪೂರ್ವಕವಾಗಿ ಕರ್ಮ ಸಿದ್ಧಾಂತವನ್ನು ಒಪ್ಪುತ್ತವೆ. ಅದಕ್ಕೆ ಸದ್ಯದಲ್ಲಿ ಆಧಾರ ಕೊಡದೆ. ಕರ್ಮ ಸಿದ್ಧಾಂತದ ವಿವರಗಳನ್ನು ಕೊಡುವಾಗಲೇ ನೀಡುವೆ.

ಕರ್ಮ ಸಿದ್ಧಾಂತವು ಸ್ವತಂತ್ರವಾದ "ಆತ್ಮ"ನೆಂಬ ಘಟಕವನ್ನು ಒಪ್ಪುತ್ತದೆ. ಮಾತ್ರವಲ್ಲ ಅದು ಅವಿನಾಶಿಯು, ದೇಹದೊಡನೆಯೇ ಸಾಯದೆ ಅಮರವಾಗಿ ಇರುವಂತಹುದು ಎನ್ನುತ್ತದೆ. ಪ್ಲೇಟೋ ಹೇಳುತ್ತಾನೆ : "ಜೀವ ದೇಹಕ್ಕಿಂತ ಪುರಾತನವಾದುದು. ಅದು ಹಲವು ವೇಳೆ ಈ ಪ್ರಪಂಚಕ್ಕೆ ಬರುವದು."

ಡ್ರೈಡನ್ ತನ್ನ Ovid ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾನೆ : "ಅಮೃತವಾದ ಆತ್ಮನನ್ನು ನಾಶಮಾಡಲು ಮೃತ್ಯುವಿಗೆ ಆಗಲಾರದು. ಈಗಿನ ದೇಹ ಮಣ್ಣುಪಾಲಾದ ಮೇಲೆ ಜೀವ ಹಿಂದಿನ ಶಕ್ತಿಯಿಂದಲೇ ಹೊಸದೊಂದು ಮನೆಯನ್ನು ಹುಡುಕುವುದು. ಇನ್ನೊಂದು ದೇಹದಲ್ಲಿ ತಂಗಿ ಅದನ್ನು ಜೀವ ಬುದ್ಧಿಯಿಂದ ತುಂಬುವುದು." ದೇಹದ ಹುಟ್ಟು, ಅದರ ಸಾವು-ಈ ಮಧ್ಯದ ಅವಧಿಯ ಚಟುವಟಿಕೆಯನ್ನು ನಾವು ಜೀವನ ಎನ್ನುವದಾದರೆ ಹುಟ್ಟಿಗೆ ಮೊದಲೂ ಇದ್ದು ಸಾವಿನ ನಂತರವೂ ಇರುವ ಚೇತನವೊಂದಿದೆ. ಅದುವೆ ಆತ್ಮ. ಇದು ಒಂದು ಬಗೆಯ ಸೂತ್ರ. ಮೊಲ್ಲೆ, ಮಲ್ಲಿಗೆ, ಸೇವಂತಿಗೆ, ಇತ್ಯಾದಿ ಹೂಗಳನ್ನೆಲ್ಲ ಒಂದು ದಾರದಿಂದ ಪೋಣಿಸುವಂತೆ ಈ ಆತ್ಮವೆಂಬ ಸೂತ್ರವು ಅನೇಕ ಜನ್ಮಗಳೆಂಬ ಹೂಗಳನ್ನೂ, ಬಾಲ್ಯ-ಯೌವ್ವನ-ಮುಪ್ಪು ಎಂಬ ಸ್ಥಿತಿಗಳನ್ನೂ, ಜಾಗೃತ-ಸ್ವಪ್ನ-ಸುಷುಪ್ತಿ ಎಂಬ ಅವಸ್ಥೆಗಳನ್ನೂ ಬಂಧಿಸುವ ಸೂತ್ರ. ಈ ಆತ್ಮದ ಸೂತ್ರ ಜನ್ಮ ಜನ್ಮಾಂತರಗಳಲ್ಲಿ ಹಾಸುಹೊಕ್ಕಾಗಿ ಹರಿದಿದೆ. ನಾಶವಾಗುವ ದೇಹದ ಆಚೆಗಿದೆ ಇದರ ವಿಸ್ತಾರ. ಅದನ್ನು ಬಸವಣ್ಣನವರೂ ಹೇಳುತ್ತಾರೆ :

"ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ...."

ಭಗವದ್ಗೀತೆ ಹೇಳುತ್ತದೆ :

೧. ದೇಹಿನೋಽಸ್ಮಿನ್ಯಥಾ ದೇಹೇ ಕೌಮಾರಂ ಯೌವ್ವನಂ ಜರಾ
ತಥಾ ದೇಹಾಂತರ ಪ್ರಾಪ್ತಿ ಅಧ್ಯಾಯ ೨-೧೨:೧೩

ದೇಹದಲ್ಲಿರುವ ಅಂತರ್ಯಾಮಿಯು ಹೇಗೆ ಬಾಲ್ಯ, ಯೌವ್ವನ ಮತ್ತು ಮುಪ್ಪುಗಳನ್ನು ದೇಹದಲ್ಲೇ ಅನುಭವಿಸುವನೋ ಹಾಗೆಯೇ ದೇಹಾಂತರಗಳನ್ನು ಅನುಭವಿಸುವನು.

೨. ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ
ಅನಾಶಿನೋ ಅಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ಅ. ೨-೧೭,೧೮

ನಿತ್ಯನೂ, ಅಖಂಡಿತನೂ, ಅಮೌಲ್ಯನು ಆದ ಅಂತರ್ವಾಸಿಯಾದ ಆತ್ಮನು ಧರಿಸುವ ದೇಹಗಳು ಅಂತ್ಯವನ್ನು ಹೊಂದಿಯೇ ಹೊಂದುತ್ತವೆ.

೩. ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ಅ. ೨-೨೦

ಹುಟ್ಟಿಲ್ಲದ, ನಿತ್ಯನಾದ, ಶಾಶ್ವತನಾದ ಆತ್ಮನನ್ನು ಕೊಲ್ಲುವುದಾಗಲಿ, ಕೊಲ್ಲಲ್ಪಡುವುದಾಗಲಿ ಸಾಧ್ಯವಿಲ್ಲ.

4. ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ೨-೨೩

ಶಸ್ತ್ರವು ಛಿದ್ರಿಸಲಾರದು, ಬೆಂಕಿ ದಹಿಸಲಾರದು, ನೀರು ಮುಳುಗಿಸಲಾರದು, ಗಾಳಿಯು ಹಾರಿಸಲಾರದು.

ಹೀಗೆ ಅಮೃತಮಯವಾದ ಆತ್ಮನನ್ನು ನಾಶಮಾಡಲು ಮೃತ್ಯುವಿಗೆ ಸಾಧ್ಯವಾಗದು. ಈಗಿನ ದೇಹವು ಮಣ್ಣುಪಾಲಾದ ಮೇಲೆ ಜೀವವು ತನ್ನ ಹಿಂದಿನ ಸಂಸ್ಕಾರಗಳ ಬಲದಿಂದಲೇ ಹೊಸದಾದ ಆಶ್ರಯವನ್ನು ಹುಡುಕುವುದು.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಯಾತಿ ನರೋಽಪರಾಣಿ
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹಿ ॥
೨-೨೨

ಶಿಥಿಲಗೊಂಡ ವಸ್ತ್ರಗಳನ್ನು ಬಿಸುಟಿ ಹೊಸ ವಸ್ತ್ರಗಳನ್ನು ಮಾನವರು ಧರಿಸುವಂತೆ ಆತ್ಮವೂ ಸಹ (ರೋಗ ರುಜಿನ ಮುಪ್ಪುಗಳಿಂದ) ಶಿಥಿಲಗೊಂಡ ದೇಹವನ್ನು ತೊರೆದು ನೂತನ ದೇಹವನ್ನು ಧರಿಸುವದು.

ಹುಲ್ಲಿನ ಕೀಡೆಯು ಒಂದು ಹುಲ್ಲೆಳೆಯ ಮೇಲೆ ಸರಿಯುತ್ತ ಅದರ ಕೊನೆ ಬರುತ್ತಿದ್ದಂತೆಯೇ ಇನ್ನೊಂದು ಎಳೆಯ ಆಶ್ರಯ ಹೊಂದಿ ಸಾಗುವಂತೆ ಆತ್ಮವು ಒಂದಾದ ಮೇಲೊಂದು ದೇಹಗಳ ಆಶ್ರಯ ಹೊಂದುತ್ತದೆ.

ಆತ್ಮವು ದೇಹ ಬಿಡುವಾಗ ಏನಾಗುವುದು ?

ಆತ್ಮವು ಮೂರು ಶರೀರಗಳಿಂದಾವೃತವಾಗಿದೆ. ಒಂದು, ಕ್ರಿಯಾ ಪ್ರಧಾನವಾದ, ಬಹಿರೀಂದ್ರಿಯ ಧಾರಕವಾದ ಸ್ಥೂಲ ಶರೀರ. ಎರಡು, ಅಂತರೀಂದ್ರಿಯ, ಅಂತಃಕರಣ ಸಂಯುಕ್ತವಾದ ಸೂಕ್ಷ್ಮ ಶರೀರ. ಮೂರು, ಭಾವನೆಗಳಿಂದ ಕೂಡಿದ ಕಾರಣ ಶರೀರ. ಆತ್ಮವು ದೇಹವನ್ನು ತ್ಯಜಿಸಿದಾಗ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳೆರಡೂ ಕಳಚಿಕೊಂಡು ಕಾರಣ ಶರೀರವಷ್ಟೇ ಆತ್ಮವನ್ನೊಳಗೊಂಡು ಮುಂದಿನ ಜನ್ಮಕ್ಕೆ ಗಮಿಸುವುದು.

[ಇಲ್ಲಿ ಇನ್ನೊಂದು ವಿಷಯ. ಆತ್ಮನೇ ಮೊದಲಿಗೆ ದೇಹವನ್ನು ತೊರೆದಾಗ ಈ ದೇಹ ಶವವಾಗುವದೋ; ಅಥವಾ ಈ ದೇಹ ಶವವಾದಾಗ ಆತ್ಮವು ತೊರೆಯುವದೋ ಎಂದು ಕೆಲವರು ಪ್ರಶ್ನೆ ಕೇಳಬಹುದು. ಈ ಎರಡೂ ಸಂಭವವಿವೆ. ರೋಗರುಜಿನಗಳಿಂದ ಮುಪ್ಪಿನಿಂದ ದೇಹವು ನಿಧಾನವಾಗಿ ಶಿಥಿಲಗೊಂಡಾಗ ಇನ್ನದು ನಿರುಪಯುಕ್ತವೆಂದರಿತು ಆತ್ಮನು ದೇಹವನ್ನು ತೊರೆವುದು. ಆಗಲೂ ಸಾವು ಸಂಭವಿಸುವದು. ಕೆಲವೊಮ್ಮೆ ದುರ್ಮರಣ ಸಂಭವಿಸಿದಾಗ, ಅಂದರೆ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮ-ಹತ್ಯೆ ಮಾಡಿಕೊಂಡಾಗ, ದೇಹವು ಸಂಪೂರ್ಣವಾಗಿ ಶಿಥಿಲಗೊಂಡಾಗ ಆತ್ಮವು ದೇಹಬಿಟ್ಟು ತೊಲಗುವುದು. ಮೊದಲನೆಯದು ಫಿಲಮೆಂಟ್ ಸುಟ್ಟು ವಿದ್ಯುತ್ ದೀಪ ಆರಿದಂತೆ; ಎರಡನೆಯದು ಹೊರಗಣ ಗಾಜಿನ ಬಲ್ಬು ಒಡೆದು ದೀಪ ಆರಿದಂತೆ ಎರಡೂ ಸಾವುಗಳೇ; ಆದರೆ ಒಂದರಲ್ಲಿ ಆತ್ಮನ ನಿರ್ಗಮನ ಮೊದಲಿಗೆ ದೇಹ ಜಡತ್ವ ಆನಂತರ ; ಇನ್ನೊಂದರಲ್ಲಿ ದೇಹ ಶೈಥಿಲ್ಯ ಮೊದಲಿಗೆ ಆತ್ಮನ ನಿರ್ಗಮನ ನಂತರ. ಇನ್ನೂ ಒಂದು ಉದಾಹರಣೆ ಕೊಡಬಹುದು. ಒಂದು ಹಣ್ಣು ಗರಿಪಕ್ವಗೊಂಡು ತೊಟ್ಟು ಕಳಚಿ ಬೀಳುವುದು. ಆಗ ಗಿಡದೊಡನೆ ಅದರ ಸಂಪರ್ಕ ಕಡಿವುದು. ನಾವಾಗಿಯೆ ಬಲವಂತವಾಗಿ ಎಳೆಗಾಯನ್ನು ಕಿತ್ತರೂ ಅದು ಸಂಪರ್ಕ ಕಡಿದುಕೊಳ್ಳುವುದು. ತಾನಾಗಿ ಬಿದ್ದ ಹಣ್ಣು ಪರಿಪಕ್ವ ಸ್ಥಿತಿಯಲ್ಲಿದ್ದರೆ, ಕಿತ್ತ ಎಳೆಗಾಯಿ ಅಪರಿಪಕ್ವ ಸ್ಥಿತಿಯಲ್ಲಿರುವುದು]

ಸ್ಥೂಲ + ಸೂಕ್ಷ್ಮ + ಕಾರಣ + ಆತ್ಮ = ಮಾನವ

ಸೂಕ್ಷ್ಮ + ಕಾರಣ + ಆತ್ಮ = ಗಾಳಿ ಶರೀರಗಳಾದ ಭೂತ, ಪ್ರೇತಗಳು.

ಕಾರಣ + ಆತ್ಮ = ದೇಹವನ್ನು ಬಿಟ್ಟ ಚೇತನ್ಯ, ಪುನರ್ಜನ್ಮ ಧರಿಸಲು ಸಿದವಾಗುವ ವಸ್ತು ಇದೇ.

ಎಲ್ಲ ಶರೀರಗಳಿಂದ ಬಿಡುಗಡೆ = ದೇವನೊಡನೆ ಒಂದಾಗಲು ಸಿದ್ಧವಾಗಿರುವ ಹೊಂದಿದ. ಆತ್ಮ ಶುದ್ಧೀಕೃತ ಚೇತನ ;

(ಸಶೇಷ)

ಸ್ವಾತಂತ್ರ್ಯಯೋಧ ಮಹರ್ಷಿ ಶ್ರೀ ಅರವಿಂದರು

ಶತಮಾನಗಳ ಘೋರ ನಿದ್ರೆಯಲ್ಲಿ ಮುಳುಗಿದ್ದು, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಹಾಗೂ ಸರ್ವಾಂಗೀಣ ಅವನತಿಗಿಳಿದಿದ್ದ ರಾಷ್ಟ್ರವೊಂದು, ಪುನಃ ಚೇತರಿಸಿ ನಿಲ್ಲಬೇಕಾದರೆ, ಸತತವಾದ ಪರಿಶ್ರಮ, ಎಣೆಯಿಲ್ಲದ ಸಾಹಸ, ಕಳಂಕವಿಲ್ಲದ ಸಾಧನೆ, ಅಸೀಮವಾದ ಸ್ವಾರ್ಥತ್ಯಾಗ, ಮಿತಿ ಇಲ್ಲದ ಬಲಿದಾನಗಳು ಬೇಕಾಗಿವೆ. ಸ್ವತಂತ್ರ ಭಾರತದ ಇಂದಿನ ಸಚೇತನ ಜಾಗೃತಿಗೆ ನೆರವಾದ ಮಹಾಪುರುಷರಲ್ಲಿ, ಅಗ್ರಗಣ್ಯರೆನಿಸಿದವರಲ್ಲಿ, ಮಹರ್ಷಿ ಅರವಿಂದ ಘೋಷರೂ ಒಬ್ಬರು.

ಅರವಿಂದ ಎಂದರೆ ಕಮಲ. ಈ ಕಮಲ ಆಗಸ್ಟ್ ೧೫, ೧೮೭೨ರಲ್ಲಿ, ಬಂಗಾಳದ ಸಿರಿವಂತ ಕುಟುಂಬವೊಂದರಲ್ಲಿ ಅರಳಿತು. ತಂದೆ ಅತಿರೇಕವೆನ್ನುವಷ್ಟರ ಮಟ್ಟಿಗೆ ಪಾಶ್ಚಾತ್ಯ ಜೀವನ ಸಂಸ್ಕೃತಿಗಳ ಅಂಧಾಭಿಮಾನಿ. ತಾಯಿ ವಂಶಪಾರಂಪರ್ಯದ ಉನ್ಮಾದ ರೋಗಪೀಡಿತೆ. ಹೀಗಾಗಿ ಅರವಿಂದರು ಮಾತೃ ಪ್ರೇಮದಿಂದ ವಂಚಿತರು. ಅರವಿಂದರ ಬಾಲ್ಯ ಜೀವನ ನಿರಾಶೆ ಹಾಗೂ ಕಹಿಗಳಿಂದ ಕೂಡಿದ್ದಿತು. ಚಿಕ್ಕವಯಸ್ಸಿನಿಂದಲೇ ಅವರು ಅಂತರ್ಮುಖಿಗಳೂ ಮತ್ತು ಧ್ಯಾನಾಸಕ್ತರೂ ಆಗಿದ್ದರು.

ತಂದೆಯ ಪಾಶ್ಚಾತ್ಯ ಸಂಸ್ಕೃತಿಯ ಅಭಿಮಾನ, ಅರವಿಂದರನ್ನು ಎಳೆಯ ವಯಸ್ಸಿನಲ್ಲಿಯೇ ಮಾತೃ ಭೂಮಿಯನ್ನು ತೊರೆಯುವಂತೆ ಮಾಡಿತು. ತಮ್ಮ ಮಕ್ಕಳನ್ನು ಆಧುನಿಕರನ್ನಾಗಿ ಮಾಡುವ ಪ್ರಯತ್ನದಲ್ಲಿ, ತಂದೆಯು ಎಳೆತನದಲ್ಲಿಯೇ ಅರವಿಂದರನ್ನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿದರು. ಬಹು ಪ್ರತಿಭಾವಂತ ವಿದ್ಯಾರ್ಥಿಯೆಂದು, ಎಲ್ಲರ ಮೆಚ್ಚುಗೆ ಗಳಿಸಿದ. ಶ್ರೀ ಅರವಿಂದರು ಹದಿನಾಲ್ಕು ವರ್ಷಗಳನ್ನು ಇಂಗ್ಲೆಂಡಿನಲ್ಲಿ ಕಳೆದರು. ಲ್ಯಾಟಿನ್. ಇಂಗ್ಲೀಷ್, ಫ್ರೆಂಚ್, ಇಟಾಲಿಯನ್ ಜರ್ಮನ್, ಸ್ಪಾನಿಷ್, ಭಾಷೆಗಳಲ್ಲಿ ಪರಿಣತಿ ಪಡೆದಿದ್ದರು. ಕುದುರೆ ಸವಾರಿಯ ವಿಷಯವನ್ನುಳಿದಂತೆ(ಅದೂ ಫೇಲಾಗಬೇಕೆಂಬ ಇಚ್ಛೆಯಿಂದ ಮಾಡಿದ್ದು) ಉಳಿದೆಲ್ಲಾ ವಿಷಯುಗಳಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು.

ಅರವಿಂದರು ಇಚ್ಛಿಸಿದ್ದರೆ ಇಂಗ್ಲೆಂಡಿನಲ್ಲಿ ದೊಡ್ಡ ಹುದ್ದೆಯನ್ನು ಗಳಿಸಬಹುದಿತ್ತು. ಆದರೆ ಹೃದಯದ ಮೂಲೆಯಲ್ಲಡಗಿದ್ದ, ಮಾತೃ ಭೂಮಿಯ ಕರೆ ಅವರನ್ನು ಸ್ವದೇಶದತ್ತ ಎಳೆಯ ತೊಡಗಿತು. ಬ್ರಿಟಿಷರು ಭಾರತೀಯರನ್ನು ನಡೆಸಿಕೊಳ್ಳುತ್ತಿದ್ದ ರೀತಿ, ಅವರಿಂದ ಆಗುತ್ತಿದ್ದ ಅನ್ಯಾಯ, ದೌರ್ಜನ್ಯಗಳ ಬಗ್ಗೆ ವೃತ್ತ ಪತ್ರಿಕೆಗಳಿಂದ ತಿಳಿದ ಅರವಿಂದರಿಗೆ, ಮನಸ್ಸು ತಲ್ಲಣಿಸಿ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡ

ಬೇಕೆಂಬ ಆಸೆ ಮೊಳೆಯಿತು. ಭಾರತ ಮಾತೆಯನ್ನು ದಾಸ್ಯ ಸಂಕೋಲೆಯಿಂದ ಬಿಡಿಸಲು ಟೊಂಕಕಟ್ಟಿ ನಿಲ್ಲುವ ಸಂಕಲ್ಪ ತಳೆದ ಅರವಿಂದರು, ಅಲ್ಲಿಯೇ ಭಾರತೀಯ ವಿದ್ಯಾರ್ಥಿಗಳು ನಡೆಸುತ್ತಿದ್ದ 'ಇಂಡಿಯನ್ ಮಜಲಿಸ್' ಎಂಬ ಸಂಘಕ್ಕೆ ಸದಸ್ಯರಾಗಿ, ಸ್ವಾತಂತ್ರ್ಯಕ್ಕೆ ಬೆಂಬಲಕೊಡುವಂತೆ ಜನರಲ್ಲಿ ಪ್ರಚುರಪಡಿಸಲು ಪ್ರಯತ್ನಿಸಿದರು. ಇದರಿಂದಲೂ ತೃಪ್ತಿಯಾಗದ ಮನಸ್ಸು ಉನ್ನತ ಹುದ್ದೆಯನ್ನು ತಿರಸ್ಕರಿಸಿ ತಾಯ್ನಾಡಿಗೆ ಹಿಂದಿರುಗು ಎಂದು ಮೊಳಗಿತು. ಆತ್ಮನ ಕರೆಗೆ ಓಗೊಟ್ಟ ಅರವಿಂದರು ತಮ್ಮ ೨೧ನೇ ವಯಸ್ಸಿಗೆ ಮಾತೃ ಭೂಮಿಗೆ ಮರಳಿದರು.

ಭರತ ಭೂಮಿಗೆ ಬಂದಿಳಿಯುತ್ತಿದ್ದಂತೆಯೇ ತಾಯ್ಮಡಿಲನ್ನು ಕಂಡ ಕಂದನಂತೆ ಆನಂದಿಸಿದರು. ಅವರೇ ಹೇಳುವಂತೆ, ಪರಮ ಶಾಂತಿಯೊಂದು ಅವರನ್ನು ಅಕ್ಷರಶಃ ಆವರಿಸಿಕೊಂಡಿತು. ಗಾಢವಾದ ಮೌನವು ಅವರ ಅಂತರಂಗವನ್ನು ತುಂಬಿ ಅಲ್ಲಿ ನೆಲೆಸಿತು. ಅರವಿಂದರು ಬಂದ ಕೆಲವಾರು ದಿನಗಳಲ್ಲೇ ಅವರ ಬುದ್ಧಿವಂತಿಕೆಯನ್ನು ಕರ್ಣಾಕರ್ಣಿಯಾಗಿ ತಿಳಿದ ಬಡೋದೆ ಮಹಾರಾಜರು ತಮ್ಮ ಸಂಸ್ಥಾನದ ಸೇವೆಗಾಗಿ ಆಹ್ವಾನಿಸಿದರು. ಎಲ್ಲಾ ಇಲಾಖೆಗಳಲ್ಲೂ ಕೆಲಸ ಮಾಡಿ ಎಲ್ಲದರ ಅನುಭವ ಪಡೆದ ಅರವಿಂದರು, ೧೮೯೭ರಲ್ಲಿ ಬಡೋದಾ ಕಾಲೇಜಿನಲ್ಲಿ ಫ್ರೆಂಚ್ ಭಾಷೆ ಕಲಿಸುವ ಉಪನ್ಯಾಸಕರಾದರು. ಕಾಲಾನಂತರ, ಉಪ ಪ್ರಾಚಾರ್ಯ, ಕೊನೆಗೆ ಪ್ರಾಚಾರ್ಯರಾಗಿಯೂ ಕೆಲಸ ಮಾಡಿದರು. ೧೯೦೬ರ ಆಗಸ್ಟ್‌ನಲ್ಲಿ ಅವರು ಬಡೋದಾ ಸರ್ಕಾರದ ಹುದ್ದೆಗೆ ರಾಜಿನಾಮೆ ಕೊಟ್ಟಾಗ, ಸರ್ಕಾರಿ ಕಾಲೇಜಿನ ಪ್ರಾಚಾರ್ಯರಾಗಿದ್ದರು.

ಅರವಿಂದರು ಬಹಳ ಸರಳ ಜೀವಿಗಳು. ಉಡುಪು-ವಿಲಾಸ-ವೈಭೋಗಕೆಂದು ಎಂದೂ ದುಂದು ವೆಚ್ಚ ಮಾಡಿದವರಲ್ಲ. ಪುಸ್ತಕವೇ ಅವರ ಸಂಗಾತಿ. ಬೇಸರವಿಲ್ಲದೆ ಮಾಡುತ್ತಿದ್ದ ಕೆಲಸವೆಂದರೆ ಓದುವುದು. ಊಟವನ್ನೂ ಮರೆಯುವಷ್ಟು ತಲ್ಲೀನತೆ ಅವರಿಗೆ. ಇಂಗ್ಲೆಂಡಿನಲ್ಲಿದ್ದಾಗ ಗ್ರೀಕ್, ಲ್ಯಾಟಿನ್, ಫ್ರೆಂಚ್ ಕಾವ್ಯಾಭ್ಯಾಸ ಮಾಡುತ್ತಿದ್ದ ಅವರು ಭಾರತಕ್ಕೆ ಬಂದ ಮೇಲೆ ಸಂಸ್ಕೃತ ಮತ್ತು ಬಂಗಾಳೀ ಭಾಷೆಯನ್ನು ಕಲಿತರು. ಮಹಾಭಾರತ, ರಾಮಾಯಣಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದರು. ಕಾಳಿದಾಸ, ಭಾಸ, ಭವಭೂತಿ, ಮುಂತಾದ ಸಂಸ್ಕೃತ ಕವಿಗಳ ಕಾವ್ಯಗಳನ್ನು ವಿಮರ್ಶಕ ದೃಷ್ಟಿಯಿಂದ ಅಭ್ಯಸಿಸಿದರು. ಗೀತೆ-ಉಪನಿಷತ್ತು ಮತ್ತು ವೇದಗಳನ್ನು ನಿಷ್ಠಾವಂತ ತಿಳಿ ಮನಸ್ಸಿನಿಂದ ಓದಿದರು. 'ಇಂದು ಪ್ರಕಾಶ' ಎಂಬ ಪತ್ರಿಕೆಯಲ್ಲಿ, ಬಂಕಿಮ್ಚಂದ್ರ ಚಟರ್ಜಿ ಅವರನ್ನು ಕುರಿತು ಪ್ರೌಢ ಪ್ರಬಂಧಗಳನ್ನು ಬರೆದರು. ಇಷ್ಟೇ ಅಲ್ಲದೆ ಬಂಗಾಳಿ ಭಾಷೆಯಲ್ಲಿ ಕೆಲವು ಕವಿತೆಗಳನ್ನೂ ಬರೆಯತೊಡಗಿದರು. ಅವು ಇಂದಿಗೂ ಬಂಗಾಳ ಸಾಹಿತ್ಯದಲ್ಲಿ ದೊಡ್ಡ ಸ್ಥಾನವನ್ನು ಪಡೆದಿವೆ.

ಬಡೋದಾ ಸಂಸ್ಥಾನದಲ್ಲಿ ವಿದ್ಯಾ ಇಲಾಖೆಯ ಪ್ರಮುಖರಾಗಿ ಕಾರ್ಯ ನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದರು. ಆದರೆ ದೇಶದ ತುಂಬೆಲ್ಲ ಗುಡುಗುಡಿಸುತ್ತಿದ್ದ ಸ್ವಾತಂತ್ರ್ಯದ ಕರೆ, ಅವರ ಚೇತನವನ್ನು ಕೆರಳಿಸಿತು. ಅರವಿಂದರು ತತ್‌ಕ್ಷಣ ಪ್ರತ್ಯಕ್ಷ ರಾಜಕೀಯಕ್ಕೆ ಧುಮುಕಿದರು.

ಆಂಗ್ಲರ ದಬ್ಬಾಳಿಕೆಯನ್ನೇ ಆಜ್ಞೆಯೆಂದು ತಲೆ ಬಾಗಿಸಿ ನಡೆಯುತ್ತಿದ್ದ 'ಜೀ ಹುಜೂರ್' ಭಾರತೀಯರನ್ನು ಕಟುವಾಗಿ ಟೀಕಿಸಿ 'ಇಂದು ಪ್ರಕಾಶ' ಪತ್ರಿಕೆಯಲ್ಲಿ ಬರೆಯ ತೊಡಗಿದರು. ಹಿಂದುಗಳನ್ನು ಒಗ್ಗೂಡಿಸಲು ಒಂದು ಸಂಸ್ಥೆ, ಆರಾಧ್ಯ ದೈವ ಬೇಕೆನಿಸಿ, ಭಾರತಮಾತೆಯನ್ನೇ ಆರಾಧ್ಯಮೂರ್ತಿಯಾಗಿಸಿ, ಭವಾನಿ ಮಂದಿರವನ್ನು ಸ್ಥಾಪಿಸಲು ಯೋಚಿಸಿದರು. ಸ್ವತಂತ್ರ ಸೈನ್ಯವನ್ನು ಕಟ್ಟುವ ಉದ್ದೇಶದಿಂದ ಸೈನ್ಯ ಶಿಕ್ಷಣವನ್ನು ಪಡೆಯಲು ಬಂದ, ಜತೀಂದ್ರನಾಥ, ಅರವಿಂದರಲ್ಲಿ ಆಶ್ರಯ ಹೊಂದಿ, ಆಪ್ತ ಅನುಯಾಯಿಯಾದ. ಅವನ ನೇತೃತ್ವದಲ್ಲಿ ಆಗಾಗ ಕಲ್ಕತ್ತೆಯಲ್ಲಿ ಗುಟ್ಟಾಗಿ ನಡೆಯುತ್ತಿದ್ದ ಕ್ರಾಂತಿಕಾರಕ ಚಳುವಳಿಗೆ ಜನ-ಧನ ಬಲವನ್ನು ಕೂಡಿಸಿದರು. ಅದೇ ವೇಳೆಯಲ್ಲಿ ಮಹಾರಾಷ್ಟ್ರದಲ್ಲಿದ್ದ ಬಾಲಗಂಗಾಧರ ತಿಲಕರನ್ನು ಕಂಡು ತಮ್ಮ "ಭವಾನಿ ಮಂದಿರದ" ಧ್ಯೇಯ ಧೋರಣೆಗಳನ್ನು ವಿವ[illegible] ಬೆಂಬಲವನ್ನೂ ಸಂಪಾದಿಸಿದರು. 'ಸ್ವಾತಂತ್ರ್ಯ ನನ್ನ ಆಜನ್ಮ ಹಕ್ಕು" ಎಂದು ಸಾರಿದ್ದ ತಿಲಕರೇ 'ಭವಾನಿ ಮಂದಿರ"ಕ್ಕೆ ಮೂರ್ತ ಸ್ವರೂಪ ಕೊಟ್ಟರು. ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ಭವಾನಿ ಮಂದಿರದ ಕೆಲಸ ತಕ್ಕಮಟ್ಟಿಗೆ ಬೇರೂರಿದ ಮೇಲೆ ಪಂಜಾಬ್ ಮತ್ತು ಉತ್ತರ ಪ್ರದೇಶದಲ್ಲೂ ಕೆಲವು ಗುಪ್ತ ಕೇಂದ್ರಗಳು ಸ್ಥಾಪನೆಯಾದವು. ಅವುಗಳಿಗೆ ತಕ್ಕಷ್ಟು ಜನ ಬೆಂಬಲ, ಪ್ರೋತ್ಸಾಹವೂ ದೊರೆಯುತ್ತಿತ್ತು.

ಶ್ರೀ ಅರವಿಂದರು ಬಡೋದೆಯಲ್ಲಿದ್ದಾಗಲೇ ಸೋದರಿ ನಿವೇದಿತಾರವರ ಪರಿಚಯವಾಯ್ತು. ಅವರ 'ಕಾಳೀ ಮಾತೆ' ಎಂಬ ಗ್ರಂಥವನ್ನು ಓದಿ ಮೆಚ್ಚಿಕೊಂಡಿದ್ದ ಅರವಿಂದರಿಗೂ- ನಿವೇದಿತರಿಗೂ ಸ್ನೇಹ ಬೆಳೆಯಿತು. ನಿವೇದಿತಾರವರು ಇವರ ಕಾರ್ಯಗಳಿಗೆ, ಪ್ರೋತ್ಸಾಹಿಸುತ್ತಿದ್ದರು. ಇದೇ ಸಮಯದಲ್ಲಿ ಲೋಕ ಮಾನ್ಯ ತಿಲಕರಿಗೂ ಅರವಿಂದರಿಗೂ ಗಾಢವಾದ ಮೈತ್ರಿ ಬೆಳೆಯಿತು. ಇಬ್ಬರೂ ಉಗ್ರಗಾಮಿಗಳು. ಅಂದಿನ ಕಾಂಗ್ರೆಸ್ ಸಂಸ್ಥೆಯಲ್ಲಿದ್ದ ಮಂದಗಾಮಿಗಳಿಂದ ಅಧಿಕಾರ ಕಿತ್ತುಕೊಂಡರೆ, ಭಾರತೀಯ ಸ್ವಾತಂತ್ರ್ಯ ಸಮರಕ್ಕೆ ಬಹುದೊಡ್ಡ ಲಾಭವಾಗುತ್ತದೆ, ಎಂದು ಇಬ್ಬರೂ ಯೋಚಿಸಿದರು. ಆದ್ದರಿಂದ ೧೯೦೭ರಲ್ಲಿ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾರಾಷ್ಟ್ರ ಮತ್ತು ಬಂಗಾಳದಿಂದ ಉಗ್ರಗಾಮಿಗಳ ಪ್ರಚಂಡ ತಂಡಗಳು ಅಧಿಕ ಸಂಖ್ಯೆಯಲ್ಲಿ ಬಂದು, ಶ್ರೀ ಅರವಿಂದರ ಮತ್ತು ಲೋಕಮಾನ್ಯರ ನಾಯಕತ್ವದಲ್ಲಿ ಕಾಂಗ್ರೆಸ್ಸನ್ನು ತಮ್ಮ ಕೈವಶ ಮಾಡಿಕೊಂಡವು.

ಮುಂದೆ ಐದು ವರ್ಷಗಳ ಕಾಲ ಅರವಿಂದರು ರಾಜಕೀಯ ರಂಗದಲ್ಲಿ ಅವಿಶ್ರಾಂತರಾಗಿ ದುಡಿದರು. ಸ್ವದೇಶ, ಸ್ವಧರ್ಮ, ಸ್ವರಾಜ್ಯಗಳ ಸಂದೇಶವನ್ನು ದೇಶದ ಮೂಲೆ ಮೂಲೆಗಳಲ್ಲಿಯೂ ಸಾರಿದರು. ಉಗ್ರಗಾಮಿ ಮತ್ತು ತೀವ್ರವಾದಿಯಾಗಿದ್ದ ಅರವಿಂದರು ಕಾಂಗ್ರೆಸ್ ಪಕ್ಷದ ಸಪ್ಪೆ ನೀತಿಯನ್ನು ಕಟುವಾಗಿ ಖಂಡಿಸಿದರು. ಪೂರ್ಣ ಸ್ವರಾಜ್ಯದ ರಣ ಘೋಷವನ್ನು ಉಗ್ಘಡಿಸಿದರು. ಪರಕೀಯರ ದುರ್ಧರ ರಾಜ್ಯಾಡಳಿತವು ಕೊನೆಗೊಂಡು ಭಾರತವು ಸ್ವಾತಂತ್ರ್ಯ ಪಡೆಯುವುದೆಂದು ಭವಿಷ್ಯ ನುಡಿದು, ಪಡೆಯಲೇ ಬೇಕೆಂದೂ ಅವರು ಛಲದಿಂದ ಸಾರಿ ಹೇಳಿದರು.

ತಮ್ಮ ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಮೃಣಾಲಿನಿ ದೇವಿಯನ್ನು ಮದುವೆಯಾದರು. ಆದರೆ ಏಳೆಂಟು ವರ್ಷಗಳಲ್ಲಿಯೇ ಸ್ವಾತಂತ್ರ್ಯ ಹೋರಾಟ ಮತ್ತು ಅಧ್ಯಾತ್ಮಿಕ ಜೀವನದ ಪ್ರಬಲ ಸೆಳೆತಕ್ಕೆ ಸಿಕ್ಕಿ ವೈವಾಹಿಕ ಜೀವನದಿಂದ ದೂರವಾದರು.

ಅರವಿಂದರು ಸ್ವಾತಂತ್ರ್ಯ ಸಂಗ್ರಾಮ ಮತ್ತು ಅಧ್ಯಾತ್ಮ ಇವೆರಡನ್ನೂ ಸಮನ್ವಯಗೊಳಿಸಿದ್ದರು. ತಪಸ್ಸಿನಿಂದ ಮುಕ್ತಿ ದೊರೆಯುವಂತೆ, ಅದೇ ತಪಸ್ಸಿನ ಬಲದಿಂದ ಸ್ವಾತಂತ್ರ್ಯವನ್ನೂ ಏಕೆ ತಂದುಕೊಡಬಾರದು ? ಎಂಬುದು ಅರವಿಂದರ ಪ್ರಶ್ನೆಯಾಗಿತ್ತು. ಅರವಿಂದರಿಗೆ ಸಾಹಿತ್ಯದಲ್ಲಿ ಒಳ್ಳೆಯ ಪರಿಜ್ಞಾನವಿತ್ತು. 'ವಂದೆ ಮಾತರಂ' ಪತ್ರಿಕೆಯನ್ನು ಸ್ಥಾಪಿಸಿ, ಆ ಮೂಲಕ ಬಹಳ ಶಕ್ತಿಯುತವಾದ ವಾಣಿಯಿಂದ ತರುಣ ಭಾರತದ ಹೃದಯವನ್ನು ಜಾಗ್ರತಗೊಳಿಸಿದರು. ಸಾವಿರಾರು ತರುಣರು ಸ್ವಾತಂತ್ರ್ಯದ ರಣ ಕಹಳೆಯನ್ನು ಕೇಳಿ ಎಚ್ಚರಗೊಂಡರು.

ವಂಗ ಭಂಗದಿಂದ ಉದ್ರೇಕಿತಗೊಂಡಿದ್ದ ಜನತೆಯನ್ನು ಮುಖ್ಯವಾಗಿ ತರುಣರನ್ನು ಸಂಘಟಿಸುವ ಕಾರ್ಯದಲ್ಲಿ ಅರವಿಂದರು ತೊಡಗಿದರು. ಅನೇಕ ಕ್ರಾಂತಿಕಾರಿ ಸಂಘ ಸಂಸ್ಥೆಗಳು ಅರವಿಂದರ ಮುಖಂಡತ್ವದಲ್ಲಿ ಸಂಘಟಿತವಾದವು. ೧೯೦೮ರಲ್ಲಿ ಸರ್ಕಾರ ಇವರನ್ನು ಬಂಧಿಸಿತು. ಆದರೆ ಇವರ ಮೇಲೆ ಹೊರಿಸಿದ್ದ ಬಾಂಬು ಸ್ಫೋಟದ ಆರೋಪವು ಸಿದ್ಧವಾಗಲಿಲ್ಲ. ಬಿಡುಗಡೆಯಾದರು. ನಂತರ ಇನ್ನೂ ತೀವ್ರತೆಯಿಂದ ಗುಪ್ತ ಕ್ರಾಂತಿ ಕಾರ್ಯದಲ್ಲಿ ಅರವಿಂದರು ತೊಡಗಿದರು. ಅರವಿಂದರ ಸೋದರ ಬರೀಂದ್ರರು ಬಂಗಾಳ ಕ್ರಾಂತಿಕಾರರ ಗುಂಪಿಗೆ ಮುಂದಾಳಾಗಿದ್ದರು.

"ಭಾರತದ ರಾಷ್ಟ್ರೀಯತೆಯ ಪ್ರವಾದಿಯಾಗಿ, ನೂತನ ಜಗ ನಿರ್ಮಾಣತರಲ್ಲಿ ಪ್ರಾಥಮಿಕವಾಗಿ, ಭೂಮಿ ಸಮುದ್ರಗಳನ್ನು ದಾಟಿ ಪ್ರಪಂಚದ ಮೂಲೆ ಮೂಲೆಗಳಲ್ಲಿ, ಒಂದು ದಿನ ಈತನ ನಾಮವು ಬೆಳಗುವುದು" ಎಂದು ಆ ಕಾಲದಲ್ಲಿ ಚಿತ್ತರಂಜನ ದಾಸರು ಅರವಿಂದರ ವಿಷಯವಾಗಿ ಭವಿಷ್ಯ ನುಡಿದಿದ್ದರು.

ಅರವಿಂದರ ಚಟುವಟಿಕೆಗಳ ಮೇಲೆ ಸರ್ಕಾರ ಕಣ್ಣಿಟ್ಟಿತು. ತಮ್ಮನ್ನು ಬಂಧಿಸುವ ಸಂಭವವಿದೆಯೆಂದು, ಅರಿತ ಶ್ರೀ ಅರವಿಂದರು ಗುಪ್ತ ಪೋಲೀಸರ ಕಣ್ಣಿಗೆ ಮಣ್ಣೆರಚಿ ಪಾಂಡಿಚೆರಿಗೆ ತಲುಪಿದರು. ಅಲ್ಲಿದ್ದುಕೊಂಡೇ, ಗುಪ್ತ ಕ್ರಾಂತಿ ಕಾರ್ಯಗಳನ್ನು ಮಾಡಬೇಕೆಂಬ ಹಂಬಲದಿಂದ ಬ್ರಿಟೀಷರ ಕಾನೂನಿನ ಹಸ್ತದಿಂದ ದೂರವಿರಬೇಕೆಂದು, ಫ್ರೆಂಚ್ ವಸಾಹತುವಾದ ಪಾಂಡಿಚೆರಿಗೆ ಬಂದರು (೧೯೧೦).

ಆದರೆ ಅರವಿಂದರ ಜೀವನದಲ್ಲಿ ಮತ್ತೆ ಹೊಸ ಅಧ್ಯಾಯವೊಂದು ಇಲ್ಲಿ ಆರಂಭವಾಯಿತು. ಅದುವರೆಗೂ ರಾಜಕೀಯ-ಧಾರ್ಮಿಕವನ್ನು ಸಮನ್ವಯಗೊಳಿಸಿ, ಯುವ ಜನಾಂಗಕ್ಕೆ ಧೈರ್ಯ, ಸಾಹಸ, ಸ್ಫೂರ್ತಿ ಶಕ್ತಿಯನ್ನು ತುಂಬುತ್ತಿದ್ದ ಅವರು ಪಾಂಡಿಚೆರಿಗೆ ಹೋಗಿ ನೆಲೆಸಿದ ನಂತರ ತಮ್ಮ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಿದರು. ಅಲ್ಲಿ ಯೋಗಾಭ್ಯಾಸದಲ್ಲಿ ನಿರತರಾದರು. ೧೯೫೦ರ ವರೆಗೆ ಅವರು ತಮ್ಮ ವಿಚಾರಗಳನ್ನು ಲೇಖನಾದಿಗಳ ಮೂಲಕ ಆಗಾಗ ಪ್ರಕಟಿಸುತ್ತಿದ್ದರು. ೧೯೨೬ರಲ್ಲಿ ಅವರು ಪೂರ್ಣ ಏಕಾಂತ ಜೀವನವನ್ನೇ ಕೈಗೊಂಡರು. ವರ್ಷಕ್ಕೊಂದು ದಿನ ಮಾತ್ರ ಅವರು ದರ್ಶನ ಕೊಡುತ್ತಿದ್ದರು.

ಅರವಿಂದರ ಸಾಧನೆ-ಸಿದ್ಧಿಯ ಕೀರ್ತಿ ದೇಶವಿದೇಶಗಳಿಗೆಲ್ಲಾ ಹರಡಿತು. ದೇಶ ವಿದೇಶಗಳಿಂದ ಅಸಂಖ್ಯಾತ ಸ್ತ್ರೀ ಪುರುಷರು, ಅರವಿಂದರ ಸಿದ್ಧಿ ಮತ್ತು ಸಾಧನೆಯ ಪರಿಚಯ ಮಾಡಿಕೊಳ್ಳಲು ಬಂದರು.

ಸಮುದ್ರ ತೀರದ ಪಾಂಡಿಚೆರಿಯ ಪ್ರಶಾಂತ ಆಶ್ರಮದಲ್ಲಿ ಶ್ರೀ ಅರವಿಂದರು ಕೈಗೊಂಡ ಪೂರ್ಣಯೋಗದ ಪ್ರಯೋಗದಲ್ಲಿ ನೆರವಾಗಲೆಂದೇ ಹುಟ್ಟಿ ಬಂದರೇನೋ ಎಂಬಂತೆ ೧೯೧೪ರಲ್ಲಿ ಫ್ರಾನ್ಸ್‌ನಿಂದ ಪಾಲ್ ರಿಚರ್ಡ್ಸ್ ಮತ್ತು ಅವರ ಪತ್ನಿ ಮೀರಾ ರಿಚರ್ಡ್ಸ್ ಪಾಂಡಿಚೆರಿಗೆ ಬಂದರು. ತಾವು ಅದುವರೆಗೂ ಜೀವನ ಪರ್ಯಂತರ ಹುಡುಕುತ್ತಿದ್ದ ದೈವೀ ಪುರುಷನನ್ನು ಕಂಡ ಶ್ರೀಮತಿ ಮೀರಾ ರಿಚರ್ಡ್ಸ್‌ರವರು ಪಾಂಡಿಚೇರಿಯಲ್ಲೇ ನೆಲಸಲು ನಿರ್ಧರಿಸಿ, ಜಗತ್ತಿನ ಅಧ್ಯಾತ್ಮಿಕ ಪ್ರಗತಿ ಮತ್ತು ಅಭ್ಯುದಯದ ಕೆಲಸದಲ್ಲಿ ಪಾಲುಗಾರ್ತಿಯಾದರು. ಅವರೇ ಅರವಿಂದಾಶ್ರಮದ ಶ್ರೀ ಮಾತೆಯೆಂದು ಖ್ಯಾತಿವೆತ್ತ ಮಹೋನ್ನತೆ. ವೇದೋಪನಿಷತ್ತು, ಗೀತೆ ಮುಂತಾದ ಆಧ್ಯಾತ್ಮ ಗ್ರಂಥಗಳಲ್ಲಿರುವ ಸತ್ಯವನ್ನು ಮೊದಲು ಜಗತ್ತಿಗೆ ಪರಿಚಯ ಮಾಡಿಕೊಡಬೇಕು ಎಂದು, 'ಆರ್ಯ' ಎಂಬ ಆಂಗ್ಲ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಅದೇ ವೇಳೆಗೆ ಅವರು ತಾವು ಕಂಡುಂಡ ಅನುಭವ ದರ್ಶನವನ್ನು ಲೈಫ್ ಡಿವೈನ್ (Life Divine) ಎಂಬ ಉದ್ಗ್ರಂಥದಲ್ಲಿ ಬರೆದರು. ಎಲ್ಲವೂ ದೈವೀಮಯ ಎಂಬ ಮೂಲಭೂತ ಸತ್ಯವನ್ನು ಕಂಡವರು ಮಾತ್ರ ನಾನು ನೀನು ಎಂಬ ಭೇದ

ವನ್ನು ಮರೆತು, ನಾನು ನನ್ನವರು ಎಂಬ ಅಹಂಕಾರ ಸ್ವಾರ್ಥಗಳನ್ನು ತೊರೆದು, ನನ್ನ ಜಾತಿ, ನನ್ನ ಮತ, ಎಂಬ ಸಂಕುಚಿತ ಭಾವನೆಗಳನ್ನು ಬಿಟ್ಟು, ಈ ಲೋಕ ವೆಲ್ಲಾ ನನ್ನ ಮನೆ, ಜಗತ್ತಿನ ಜನರೆಲ್ಲಾ ನನ್ನ ಕುಟುಂಬ ಎಂದು ತಿಳಿಯಲು ಸಾಧ್ಯ ಎಂಬುದು ಶ್ರೀ ಅರವಿಂದರ ಅಭಿಪ್ರಾಯ.

ಸಾಮಾನ್ಯವಾಗಿ ಎಲ್ಲರೂ ಆಧ್ಯಾತ್ಮಿಕ ಜೀವನಕ್ಕೂ, ಪ್ರಾಪಂಚಿಕ ಸುಖಕ್ಕೂ ತದ್ವಿರುದ್ಧ ಎಂದು ತಿಳಿದಿರುತ್ತಾರೆ. ಆದರೆ ಅರವಿಂದರು, ಸುಖ-ಸಂತೋಷ-ಆನಂದ ಯಾವುದನ್ನೂ ಹೊರದೂಡಿಲ್ಲ. ಚೆನ್ನಾಗಿ ಉಣ್ಣಬೇಕು, ಉಡಬೇಕು, ತೊಡಬೇಕು ಆದರೆ ಒಂದು-ಎಲ್ಲದಕ್ಕೂ ಮಿತಿ ಇರಬೇಕು. ಈ ದೇಹ ದಿವ್ಯ ಜೀವನಕ್ಕೆ ಆಧಾರ ವಿರುವಷ್ಟು ಮಾತ್ರ; ಇದರ ಪೋಷಣೆ ಸರಿಯಾಗಿ ಆಗಬೇಕು. ದೇಹ ಬದುಕಿರ ಬೇಕಾದರೆ, ಶುದ್ಧ ಹಾಗೂ ಪೌಷ್ಟಿಕ ಆಹಾರಬೇಕು. ಸಂಪತ್ತು ದಿವ್ಯ ಜೀವನ ಕ್ಕಾಗಿಯೇ ಬಳಕೆಯಾಗಬೇಕು. ಆಮೋದ-ಪ್ರಮೋದಕ್ಕಾಗಿ ಗಳಿಸುವುದು-ಕೂಡಿ ಡುವುದೂ ಸಲ್ಲದು. ಅಂತೆಯೇ ಮಾಡುವ ಕಾಯಕದಲ್ಲಿ ಮೇಲು-ಕೀಳು ಎಂದು ಯೋಚಿಸದೇ ಮಾಡುವ ಪ್ರತಿಯೊಂದು ಕಾರ್ಯಕ್ಕೂ ತನ್ನಲ್ಲಿಯೇ ನೆಲೆಸಿರುವ ಆ ದೈವೀಶಕ್ತಿ ಈ ದೇಹವನ್ನು ಕೇವಲ ಸಾಧನವಾಗಿರಿಸಿಕೊಂಡಿದೆ ಎಂಬ ಪ್ರಜ್ಞೆ ಸದಾ ಜಾಗೃತವಾಗಿರಬೇಕು, ಎನ್ನುವರು ಶ್ರೀ ಅರವಿಂದರು.

ಪಾಂಡಿಚೆರಿಯಿಂದ ವಿಶ್ವದ ಎಲ್ಲೆಡೆ ಆಧ್ಯಾತ್ಮಿಕ ಸಂದೇಶವನ್ನು ಬೀರುತ್ತ, ಅರವಿಂದರು ೪೦ ವರ್ಷಗಳನ್ನು ಕಳೆದರು. ಅನಂತರ ಅವರು ತಮ್ಮ ೭೮ನೆಯ ವರ್ಷದಲ್ಲಿ (೧೮೭೨-೧೯೫೦) ಡಿಸೆಂಬರ್ ೫ನೇ ತಾರೀಖು ದೇಹವನ್ನು ವಿಸರ್ಜಿಸದರು. ಪಾಂಡಿಚೆರಿಯ ಆಶ್ರಮದಲ್ಲೇ ಅವರ ಮಹಾ ಸಮಾಧಿಯಾಯಿತು.

ಅಧ್ಯಾತ್ಮದ ಆಳವನ್ನು ಕಂಡುಕೊಂಡ ಅಪೂರ್ವ ವ್ಯಕ್ತಿ ಶ್ರೀ ಅರವಿಂದರು. ಆಗಸ್ಟ್ ಹದಿನೈದರಂದು ಭಾರತವು ಬ್ರಿಟೀಷರ ನೊಗದಿಂದ ಬಿಡುಗಡೆ ಹೊಂದಿತು. ಅದೇ ದಿನ ಅವರ ಜನ್ಮ ದಿನೋತ್ಸವವೂ ಕೂಡ ಆಚರಿಸಲ್ಪಟ್ಟಿತು. ಎಂತಹ ಒಂದು ಅಪೂರ್ವ ಸುಯೋಗ ಅದು ! ಮಾತೃಭೂಮಿಗಾಗಿ ತನು, ಮನ, ಧನಗಳನ್ನರ್ಪಿಸಿದ ಮಹಾಯೋಗಿಯ ಜನ್ಮ ದಿನದಂದೇ ಭಾರತವು ಸ್ವಾತಂತ್ರ್ಯವನ್ನು ಪಡೆಯಿತು.

ವಿಶ್ವದ ಪ್ರತಿಯೊಬ್ಬ ಮಾನವನಿಗೂ ವಿಶ್ವನಾಗರೀಕತೆ ಇರಬೇಕೆಂಬ, ವಿಶ್ವ ಧರ್ಮವನ್ನು ಶ್ರೀ ಅರವಿಂದರು ಸಾರಿದ್ದಾರೆ. ಎಂದು ಈ ಜಗವು ಆ ಕರೆಗೆ ಕಿವಿ ಗೊಡುವುದೋ, ಅಂದೇ ಈ ಲೋಕದ ಕಲ್ಯಾಣ ಎಂಬುದರಲ್ಲಿ ಸಂಶಯವಿಲ್ಲ,

* * *

ಗೀತಾಮೃತ

—ಸ್ವಾಮಿ ಶಂಕರಾನಂದ

ಧಾರಾವಾಹಿ–೪

ಸಂಬಂಧ : ಅರ್ಜುನನು ಯುದ್ಧದಲ್ಲಿ ಸ್ವಜನರನ್ನು ಕೊಲ್ಲುವುದರಿಂದ ಸ್ವರ್ಗ ಮೊದಲಾದ ಅದೃಷ್ಟ ಪ್ರಯೋಜನಗಳು ಪ್ರಾಪ್ತಿಯಾಗದೆ ಹೋದರೆ ಹೋಗಲಿ, ಈಗ ದೃಷ್ಟ ಫಲಗಳಾದ ವಿಜಯ, ರಾಜ್ಯ, ವಿಷಯ ಸುಖಗಳೆಂಬುವು ಪ್ರಾಪ್ತವಾಗುವುದಿಲ್ಲವೇ ? ಅವುಗಳಿಗಾಗಿಯಾದರೂ ಯುದ್ಧವನ್ನು ಮಾಡಬಹುದಲ್ಲವೇ ? ಎಂಬ ಪ್ರಶ್ನೆಗೆ ಮುಂದಿನ ಶ್ಲೋಕದಲ್ಲಿ ಅರ್ಜುನನು ಸಮಾಧಾನವನ್ನು ಹೇಳುತ್ತಾನೆ.

ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ ॥೩೨॥

ತಾತ್ಪರ್ಯ : ನಾನು ಯುದ್ಧದಲ್ಲಿ ಜಯವನ್ನು ಕೋರುವುದಿಲ್ಲ. ರಾಜ್ಯವನ್ನೂ, ಸುಖಗಳನ್ನೂ ಅಪೇಕ್ಷಿಸುವುದಿಲ್ಲ. ಎಲೈ ಗೋವಿಂದ, ನಮಗೆ ರಾಜ್ಯದಿಂದೇನು ? ಭೋಗಗಳಿಂದಾಗಲೀ ಅಥವಾ ಜೀವನಧಾರಣದಿಂದಾಗಲೀ ಏನು ಪ್ರಯೋಜನ ?

ಈ ಲೋಕದಲ್ಲಿ ಆಯಾಯಾ ಫಲಾಪೇಕ್ಷೆಯುಳ್ಳ ಪುರುಷನೇ ಆಯಾಯಾ ಫಲಪ್ರಾಪ್ತಿಯ ಉಪಾಯದಲ್ಲಿ ಪ್ರವೃತ್ತನಾಗುತ್ತಾನೆ. ಫಲಾಪೇಕ್ಷೆಯಿಲ್ಲದವನು ಪ್ರವೃತ್ತನಾಗುವುದಿಲ್ಲ.

ಉದಾ : ಭೋಜನವೆಂಬ ಫಲವನ್ನು ಪಡೆಯಬೇಕೆಂಬ ಅಪೇಕ್ಷೆಯುಳ್ಳವನೇ ಅದರ ಪ್ರಾಪ್ತಿಯ ಉಪಾಯವಾದ ಅನ್ನಪಾಕವೇ ಮೊದಲಾದ ಕಾರ್ಯದಲ್ಲಿ ಪ್ರವರ್ತಿಸುತ್ತಾನೆ. ಭೋಜನಾಪೇಕ್ಷೆಯಿಲ್ಲದವನು ಪ್ರವರ್ತಿಸುವುದಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೆಯೇ ವಿಜಯ, ರಾಜ್ಯ, ವಿಷಯ ಸುಖಗಳೆಂಬ ಫಲಗಳನ್ನು ಹೊಂದಬೇಕೆಂಬ ಪುರುಷನು ಅವುಗಳ ಪ್ರಾಪ್ತಿಯ ಉಪಾಯವಾದ ಯುದ್ಧದಲ್ಲಿ ಪ್ರವರ್ತಿಸುತ್ತಾನೆ.

ಹೇ ಕೃಷ್ಣಾ, ನನಗೆ ವಿಜಯ, ರಾಜ್ಯಾದಿ ಫಲಗಳನ್ನು ಹೊಂದಬೇಕೆಂಬ ಅಪೇಕ್ಷೆ ಇಲ್ಲದ್ದರಿಂದ ಈ ಯುದ್ಧದಲ್ಲಿ ನಾನು ಪ್ರವರ್ತಿಸುವುದಿಲ್ಲ ಎಂದು ಅರ್ಜುನನು ಸೂಚಿಸಿದನು.

ಪ್ರಶ್ನೆ : ಅರ್ಜುನಾ, ನಿನ್ನ ಸಂಬಂಧಿಗಳಾದ ದುರ್ಯೋಧನಾದಿಗಳಿಗೆ ಇಚ್ಛೆ ಇರುವಾಗ ನಿನಗೆ ಹೇಗೆ ಇಚ್ಛೆಯುಂಟಾಗಲಿಲ್ಲ ?

ಉತ್ತರ : ಎಲೈ ಗೋವಿಂದನೇ, ಧರ್ಮಾಧರ್ಮಗಳ ಸ್ವರೂಪವನ್ನು ತಿಳಿಯದೆ ಈ ದುರ್ಯೋದನಾದಿಗಳಿಗೆ ಅನಿತ್ಯವಾದ ರಾಜ್ಯ ಸುಖಾದಿಗಳಲ್ಲಿ ಇಚ್ಛೆ ಇರುವುದು ಆಶ್ಚರ್ಯವೇನಲ್ಲ. ಆದರೆ ಧರ್ಮಾಧರ್ಮದ ಸ್ವರೂಪವನ್ನು ತಿಳಿದ ನನಗೆ ರಾಜ್ಯದಿಂದಲೂ, ವಿಷಯ ಸುಖದಿಂದಲೂ ಮತ್ತು ಜೀವಿಸುವುದಕ್ಕೆ ಸಾಧನವಾದ ವಿಷಯಗಳಿಂದಲೂ ಏನು ಪ್ರಯೋಜನ ?

ಅರ್ಜುನನ ಮನೋಭಾವವೇನೆಂದರೆ ವಿಜಯ, ರಾಜ್ಯ, ಭೋಗ ಈ ಮೂರನ್ನೂ ತೊರೆದು ವನದಲ್ಲಿ ನಿವಾಸ ಮಾಡುವಾಗ ನಮಗೆ ಸಂತೋಷವಿರಲಿಲ್ಲವೇ? ನಮಗೆ ಈ ಜಗತ್ತಿನಲ್ಲಿ ಆಗ ಜೀವನ ನಡೆಯಲಿಲ್ಲವೇ ? ಆದುದರಿಂದ ಜೀವನಕ್ಕೆ ವಿಜಯ, ರಾಜ್ಯಾದಿಗಳು ಅಷ್ಟು ಅಗತ್ಯವಲ್ಲವೆಂದು ತೋರುತ್ತದೆ.

ಒಂದು ವೇಳೆ ನಿನಗೆ ಈ ರಾಜ್ಯ ಸುಖಾದಿಗಳಲ್ಲಿ ವೈರಾಗ್ಯ ಉಂಟಾಗಿದ್ದರೂ, ನಿನ್ನ ಸಂಬಂಧಿಗಳ ಸುಖಕ್ಕಾಗಿ ನೀನು ಈ ಯುದ್ಧದಲ್ಲಿ ಪ್ರವೃತ್ತನಾಗುವುದು ಹಿತವಲ್ಲವೇ ? ಎಂದು ಶ್ರೀಕೃಷ್ಣನು ಪ್ರಶ್ನಿಸಲು ಮುಂದಿನ ಶ್ಲೋಕದಲ್ಲಿ ಅರ್ಜುನನು ಅದಕ್ಕೆ ಸಮಾಧಾನವನ್ನು ಹೇಳುತ್ತಾನೆ.

ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಸ್ಸುಖಾನಿಚ ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥ ೩೩ ॥

ತಾತ್ಪರ್ಯ : ಯಾರಿಗೋಸ್ಕರ ರಾಜ್ಯವೂ, ಭೋಗಗಳೂ, ಸುಖಗಳೂ ನಮಗೆ ಅಪೇಕ್ಷಿತವಾಗಿರುವುವೋ ಅಂತಹ ಬಂಧುಗಳೇ ತಮ್ಮ ಪ್ರಾಣವನ್ನೂ, ಧನವನ್ನೂ, ತ್ಯಾಗ ಮಾಡಿ ರಣರಂಗದಲ್ಲಿ ನಿಂತಿರುತ್ತಾರೆ.

ಏಕಾಕಿಯಾದ ಪುರುಷನಿಗಂತೂ ಈ ರಾಜ್ಯಾದಿಗಳೇ ಬೇಕಾಗಿಲ್ಲ. ಇನ್ನು ಯಾವ ಬಂಧುಬಾಂಧವರಿಗೋಸ್ಕರ ಈ ರಾಜ್ಯವು ? ಯಾರಿಗೆ ಸುಖ ಸಾಧನರೂಪವಾದ ವಿಷಯವೂ, ವಿಷಯದಿಂದ ಹುಟ್ಟುವ ಸುಖವೂ ಬೇಕಾಗಿರುವುದೋ, ಅಂತಹ ನಮ್ಮ ಬಾಂಧವರೆಲ್ಲರೂ ತಮ್ಮ ಪ್ರಾಣಗಳ ಆಸೆಯನ್ನೂ ಮತ್ತು ಧನದಾಸೆಯನ್ನೂ ತೊರೆದು ಮರಣಕ್ಕೂ ಸಹ ಹೆದರದೆ ಈ ಯುದ್ಧಭೂಮಿಯಲ್ಲಿ ನಿಂತಿರುವರು. ಈ ಅಭಿಪ್ರಾಯದಿಂದ ನನ್ನ ಪ್ರಯೋಜನಕ್ಕಾದರೂ ಅಥವಾ ಸಂಬಂಧಿಗಳ ಪ್ರಯೋಜನಕ್ಕಾದರೂ ಈ ಯುದ್ಧದಲ್ಲಿ ನನಗೆ ಪ್ರವೃತ್ತಿಯುಂಟಾಗಲಾರದು.

ಸಂಬಂಧ : ಮುಂದಿನ ಶ್ಲೋಕದಲ್ಲಿ ಅರ್ಜುನನು ಯುದ್ಧ ಭೂಮಿಯಲ್ಲಿ ಯಾರು ಯಾರು ಬಂದು ನಿಂತಿರುವರೆಂಬುದನ್ನು ಹೇಳುತ್ತಾನೆ.

ಆಚಾರ್ಯಾಃ ಪಿತರಃ ಪುತ್ರಾ-ಸ್ತಥೈವ ಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ ॥ ೩೪ ॥

ತಾತ್ಪರ್ಯ : ಈ ಯುದ್ಧಭೂಮಿಯಲ್ಲಿ ಆಚಾರ್ಯರೂ, ಚಿಕ್ಕಪ್ಪ ದೊಡ್ಡಪ್ಪಂದಿರೂ, ಮಕ್ಕಳೂ ಮತ್ತು ತಾತಂದಿರೂ, ಸೋದರ ಮಾವಂದಿರೂ, ಮೊಮ್ಮಕ್ಕಳೂ ಭಾವಮೈದುನರೂ ಮತ್ತು ಇತರ ನೆಂಟರೂ ಯುದ್ಧಕ್ಕೋಸ್ಕರ ತಮ್ಮ ಪ್ರಾಣದ ಆಸೆಯನ್ನು ತೊರೆದು ನಿಂತಿರುತ್ತಾರೆ.

ಈ ಶ್ಲೋಕದ ಅರ್ಥವು ಸ್ಪಷ್ಟವಾಗಿರುವುದರಿಂದ ಹೆಚ್ಚಾದ ವಿವರಣೆಯು ಬೇಕಾಗಿಲ್ಲ. ಈ ಯುದ್ಧಕ್ಕಾಗಿ ಬಂದವರೆಲ್ಲರೂ ತನ್ನ ಸಂಬಂಧಿಗಳೇ ಎಂದು ಅರ್ಜುನನು ಹೇಳುತ್ತಾನೆ.

ಅವನಿಗೆ ಶತ್ರುಗಳೇ ಕಂಡುಬರುವುದಿಲ್ಲ. ಶತ್ರುಗಳೇ ಕಾಣದಿದ್ದರೆ ಯುದ್ಧಕ್ಕೆ ಹೇಗೆ ಬಂದ ? ಅಂದರೆ ಅಂತಃಕರಣದಲ್ಲಿ ದ್ವೇಷವೃತ್ತಿಯಿದ್ದಾಗ ಅವರು ಶತ್ರುಗಳಾಗಿ ಕಂಡುಬಂದಿದ್ದರು.

ಈಗ ದ್ವೇಷ ವೃತ್ತಿಯು ಅಡಗಿ, ಮಮಕಾರ ವೃತ್ತಿಯು ಎದ್ದುಕೊಂಡಿದೆ. ಆ ಮಮಕಾರದ ವೃತ್ತಿಯ ಪ್ರಭಾವದಿಂದ ಶತ್ರುಗಳೂ ಸಹ ಸಂಬಂಧಿಗಳಾಗಿ ತೋರಿದರು. ಈ ಸಂಬಂಧಿಗಳೊಡನೆ ನಾನು ಹೇಗೆ ಯುದ್ಧಮಾಡಲಿ ? ಎಂಬುದೇ ಅರ್ಜುನನ ಶಂಕೆ.

ಸಂಬಂಧ : ಒಂದು ವೇಳೆ ನೀನು ಕೃಪೆಯಿಂದ ಈ ಭೀಷ್ಮ ದ್ರೋಣಾದಿಗಳನ್ನು ಕೊಲ್ಲದೆ ಹೋದರೂ ಯುದ್ಧ ಸನ್ನದ್ಧರಾದ ಭೀಷ್ಮದ್ರೋಣಾದಿಗಳು ರಾಜ್ಯದ ಲೋಭದಿಂದ ನಿನ್ನನ್ನು ಅವಶ್ಯವಾಗಿ ಕೊಲ್ಲುವರು. ಅಷ್ಟಕ್ಕೆ ಅವಕಾಶ ಕೊಡದೆ ಅದಕ್ಕಿಂತ ಮೊದಲೇ ನೀನು ಅವರನ್ನು ಕೊಂದು ರಾಜ್ಯವನ್ನು ಭೋಗಿಸಕೂಡದೇ ? ಎಂದರೆ ಮುಂದಿನ ಶ್ಲೋಕದಲ್ಲಿ ಅರ್ಜುನನು ಅದಕ್ಕೆ ಸಮಾಧಾನವನ್ನು ಹೇಳುತ್ತಾನೆ.

ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥ ೩೫ ॥

ತಾತ್ಪರ್ಯ : ಎಲೈ ಮಧುಸೂದನ, ನಾನು ಕೊಲ್ಲಲ್ಪಟ್ಟರೂ ತ್ರೈಲೋಕ್ಯ

ರಾಜ್ಯದ ನಿಮಿತ್ತವಾಗಿಯೂ ಇವರನ್ನು ವಧಿಸಲು ಇಚ್ಛಿಸುವುದಿಲ್ಲ. ಈ ಭೂಮಿಗಾಗಿ ಏನು ಹೇಳಲಿ ?

ಅರ್ಜುನನು ತಾನು ಯುದ್ಧದಲ್ಲಿ ಪ್ರವೃತ್ತನಾಗದೆ ಇರಲು ಕಾರಣವನ್ನು ತೋರಿಸುತ್ತಾನೆ. ಶತ್ರುಪಕ್ಷದಲ್ಲಿರುವ ಆಚಾರ್ಯರೇ ಮೊದಲಾದವರು ತೀಕ್ಷ್ಣವಾದ ಶಸ್ತ್ರಗಳಿಂದ ನನ್ನನ್ನು ಕೊಲ್ಲಲು ಉದ್ಯುಕ್ತರಾದರೂ, ನಾನು ಇವರನ್ನು ಕೊಲ್ಲಬೇಕೆಂದು ಬಯಸುವುದಿಲ್ಲ. ಒಂದು ವೇಳೆ ಇವರನ್ನು ಕೊಲ್ಲುವುದರಿಂದ ಭೂಮಿ, ಸ್ವರ್ಗ, ಪಾತಾಳಗಳೆಂಬ ಮೂರು ಲೋಕಗಳ ರಾಜ್ಯವು ದೊರೆತರೂ ನಾನು ಹಾಗೆ ಮಾಡಲು ಇಚ್ಛಿಸುವುದಿಲ್ಲ. ಹೀಗಿರುವಾಗ ಕೇವಲ ಈ ಒಂದು ಭೂಮಿಗಾಗಿ ಇವರನ್ನು ಕೊಲ್ಲಲಾರೆನು ಎಂದು ಮತ್ತೆ ಹೇಳಬೇಕಾಗಿಲ್ಲ.

ಈ ಶ್ಲೋಕದಲ್ಲಿ ಅರ್ಜುನನು ಭಗವಂತನನ್ನು "ಮಧುಸೂದನ" ಎಂದು ಸಂಬೋಧಿಸಿರುತ್ತಾನೆ. "ಮಧುಸೂದನ" ಎಂಬ ಪದಕ್ಕೆ ಎರಡು ಅರ್ಥಗಳು.

೧. "ಮಧು" ಎಂಬ ರಾಕ್ಷಸನನ್ನು ಕೊಂದು ಭಕ್ತರನ್ನು ರಕ್ಷಿಸಿದ್ದರಿಂದ ಮಧುಸೂದನ.

೨. "ಮಧು" ಎಂದರೆ ಸಿಹಿ. ಮನುಷ್ಯನಿಗೆ ಅತ್ಯಂತ ಸಿಹಿಯಾದದ್ದು ಅಹಂಕಾರ. ಮೋಕ್ಷಕ್ಕೆ ಪ್ರತಿಬಂಧಕವಾದ ಈ ಅಹಂಕಾರವನ್ನು ಸೆಳೆದು ಭಕ್ತರಿಗೆ ಮೋಕ್ಷವನ್ನು ಕೊಡುವವನಾದ್ದರಿಂದ ಮಧುಸೂದನ.

ಸಂಬಂಧ : ಆಚಾರ್ಯಾದಿ ಪುರುಷರು ನಿನಗೆ ಹಿತವನ್ನು ಮಾಡಿರುವುದರಿಂದ ಅವರನ್ನು ಕೊಲ್ಲದೆ ಹೋದರೆ ಹೋಗಲಿ, ಆದರೆ ದುರ್ಯೋಧನಾದಿಗಳು ನಿನಗೆ ಅನೇಕ ಪ್ರಸಂಗಗಳಲ್ಲಿ ಅಹಿತವನ್ನು ಮಾಡಿರುವುದರಿಂದ ಅವರನ್ನೇಕೆ ಕೊಲ್ಲಬಾರದು ? ಎಂದರೆ ಅದಕ್ಕೆ ಸಮಾಧಾನವನ್ನು ಅರ್ಜುನನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ.

ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।
ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥ ೩೬ ॥

ತಾತ್ಪರ್ಯ : ಎಲೈ ಜನಾರ್ದನ, ಈ ಕೌರವರನ್ನು ಕೊಂದರೆ ನಮಗೆ ಯಾವ ಪ್ರಿಯವು ಉಂಟಾದೀತು ? ಈ ಪಾತಕಿಗಳನ್ನು ಕೊಂದರೆ ನಮ್ಮನ್ನು ಪಾಪವೇ ಆಶ್ರಯಿಸುತ್ತದೆ.

ಈ ಶ್ಲೋಕದಲ್ಲಿ ಅರ್ಜುನನು, ಅರ್ಥಶಾಸ್ತ್ರಕ್ಕಿಂತಲೂ ಧರ್ಮಶಾಸ್ತ್ರವು

ಪ್ರಬಲವಾದುದರಿಂದ ಆತತಾಯಿಗಳಾದ ಬಂಧುವಧೆಯಿಂದ ತನಗೆ ಪಾಪವೇ ಸಂಭ
ವಿಸುವುದು. ಆದುದರಿಂದ ತಾನು ಯುದ್ಧ ಮಾಡುವುದಿಲ್ಲವೆಂಬುದನ್ನು ತೋ
ಸುತ್ತಾನೆ.

ಎಲೈ ಜನಾರ್ಧನನೇ, ಧೃತರಾಷ್ಟ್ರನ ಪುತ್ರರಾದ ಈ ದುರ್ಯೋಧನಾದಿಗಳ
ನಮಗೆ ಸಹೋದರರಾದ್ದರಿಂದ, ಇವರನ್ನು ಕೊಂದರೆ ನಮಗೆ ಹೇಗೆ ಸುಖ
ವಾಗುತ್ತದೆ ?

ಬಂಧುಗಳನ್ನು ಕೊಂದವರು ಜಗತ್ತಿನಲ್ಲಿ ಸುಖವಾಗಿರುವುದು ಕಂಡುಬರುವುದಿಲ್ಲ. ಮೂಢ ಜನರ ಪ್ರೀತಿಗೆ ವಿಷಯವಾಗಿ ಕ್ಷಣಮಾತ್ರ ಮಿಂಚಿನಂತೆ ತೋರಿ ಅಡಗುವ, ಸುಖಾಭಾಸದ ಲೋಭದಿಂದ ಬಹುಕಾಲದವರೆಗೆ ನರಕದ ದುಃಖಪಡುವಂತಹ ಈ ಬಾಂಧವರ ಹಿಂಸೆಯು ಯೋಗ್ಯವಾದುದಲ್ಲ. ವಿಷಯ ಸುಖವು, ಸುಖ ರೂಪವಲ್ಲದಿದ್ದರೂ ಸುಖದಂತೆ ತೋರುವುದರಿಂದ ಅದಕ್ಕೆ ಸುಖಾಭಾಸವೆಂದು ಹೆಸರು.

ಪ್ರಶ್ನೆ : ಧರ್ಮ ಶಾಸ್ತ್ರದಲ್ಲಿ—

ಅಗ್ನಿ ದೋ ಗರದ ಶ್ಚೈವ ಶಸ್ತ್ರ ಪಾಣಿರ್ಧ ನಾ ಪಹಃ ॥
ಕ್ಷೇತ್ರ ಧಾರಾ ಪ ಹರ್ತಾ ಚ। ಷಡೇ ಕೇ ಹ್ಯಾತತಾಯಿನ ॥

ಅರ್ಥ : ೧. ಮನೆಗೆ ಬೆಂಕಿಯನ್ನು ಹಾಕಿದವನು, ೨. ವಿಷವನ್ನಿಟ್ಟವನು, ೩. ಕೈಯಲ್ಲಿ ಶಸ್ತ್ರವುಳ್ಳವನು, ೪. ಪರರ ಧನವನ್ನು ಅಪಹರಿಸಿದವನು, ೫. ಪರರ ಭೂಮಿಯನ್ನು ಅಪಹರಿಸಿದವನು ಮತ್ತು ೬. ಪರ ಸ್ತ್ರೀಯನ್ನು ಅಪಹರಿಸಿದವನು— ಈ ಆರೂ ತರಗತಿಯ ಜನರು "ಆತತಾಯಿ" ಗಳೆಂದು ಹೇಳಿಸಿಕೊಳ್ಳುತ್ತಾರೆ. ಈ ದುರ್ಯೋಧನಾದಿಗಳಲ್ಲಿ ಈ ಆರೂ ತರಹದ ಗುಣಗಳಿರುವುದರಿಂದ ಇವರು ಆತತಾಯಿಗಳು. ಮತ್ತು—

ಆತತಾಯಿನ ವಯಾಂತಂ। ಹನ್ಯಾ ದೇವಾ ವಿಚಾರಯನ್।
ನಾತತಾಯೀ ವದೇ ದೋ ಷೋ। ಹಂತುರ್ಭವತಿ ಕಶ್ಚನ॥

ಅರ್ಥ : ಅಕಸ್ಮಾತ್ತಾಗಿ ಎದುರಿಗೆ ಬಂದ ಆತತಾಯಿ ಮನುಷ್ಯನನ್ನು ಬುದ್ಧಿವಂತನಾದವನು ಹಿಂದು ಮುಂದು ನೋಡದೆ ವಧಿಸಬೇಕು. ವಧಿಸಿದವನಿಗೆ ಯಾವ ದೋಷವೂ ಅಂಟುವುದಿಲ್ಲ. ವಧಿಸಿದರೆ ಸಮಾಜಕ್ಕೂ ಹಿತವಾಗುತ್ತದೆ. ಹೀಗಿರುವಾಗ ಈ ದುರ್ಯೋಧನಾದಿಗಳನ್ನು ಕೊಂದರೆ ನಿನಗೆ ಯಾವ ಪಾಪವೂ ಉಂಟಾಗುವುದಿಲ್ಲ. ಆದ್ದರಿಂದ ಯುದ್ಧ ಮಾಡು.

ಉತ್ತರ : ಈ ದುರ್ಯೋಧನಾದಿ ಆತತಾಯಿಗಳನ್ನು ಕೊಂದ ನಮಗೆ ಪಾಪವ

ಅವಶ್ಯವಾಗಿ ಆಶ್ರಯಿಸುತ್ತದೆ. ಪಾಪದ ವಿನಹ ಬೇರೆ ದೃಷ್ಟ ಪ್ರಯೋಜನವಾಗಲೀ, ಅದೃಷ್ಟ ಪ್ರಯೋಜನವಾಗಲೀ ಕಂಡುಬರವುದಿಲ್ಲ.

ಏಕೆಂದರೆ "ಆತತಾಯಿನಂ ಹನ್ಯಾತ್"ಈ ವಚನವು ಆತತಾಯಿಗಳ ವಧೆಯನ್ನು ವಿಧಿಸುತ್ತದೆ. ಆದರೂ ಅದು ಅರ್ಥಶಾಸ್ತ್ರದ ವಚನ. ಧರ್ಮಶಾಸ್ತ್ರದ ವಚನವಲ್ಲ. ಅರ್ಥಶಾಸ್ತ್ರಕ್ಕಿಂತಲೂ ಧರ್ಮಶಾಸ್ತ್ರವು ಪ್ರಭಲವಾದದ್ದು. ಧರ್ಮಶಾಸ್ತ್ರವಾದರೋ ಯಾವ ಕಾಲದಲ್ಲಿಯೂ, ಯಾವ ಪ್ರಸಂಗದಲ್ಲಿಯೂ, ಪ್ರಾಣಿ ಮಾತ್ರದವರನ್ನು ಹಿಂಸೆ ಮಾಡಬಾರದೆಂದೂ, "ಅಹಿಂಸಾ ಪರಮೋಧರ್ಮಃ" ಎಂದೂ ಬೋಧಿಸುತ್ತದೆ. ಆದುದರಿಂದ ಬಲವಾದ ಧರ್ಮಶಾಸ್ತ್ರದ ವಿಧಿಯನ್ನು ಬಿಟ್ಟು, ಅರ್ಥಶಾಸ್ತ್ರವನ್ನನುಸರಿಸುವುದು ಉಚಿತವಲ್ಲ.

ಅಥವಾ "ಪಾಪಮೇವಾಶ್ರಯೇದಸ್ಮಾತ್ ಹತ್ವೈತಾನಾತ ತಾಯಿನಃ" ಎಂಬ ಅರ್ಥಶಾಸ್ತ್ರದ ಶ್ಲೋಕಕ್ಕೆ ಮತ್ತೊಂದು ವಿಧವಾಗಿ ಅರ್ಥಮಾಡಬಹುದು.

ಪ್ರಶ್ನೆ : ದುರ್ಯೋಧನಾದಿಗಳನ್ನು ಹೊಡೆಯುದರಲ್ಲಿ ನಿನಗೆ ಪ್ರೀತಿ ಇಲ್ಲದಿದ್ದರೂ, ನಿನ್ನನ್ನು ಕೊಲ್ಲುವುದರಲ್ಲಿ ಅವರಿಗೆ ಪ್ರೀತಿ ಇದ್ದೇ ಇದೆ. ನಿನಗೆ ಪ್ರೀತಿ ಇಲ್ಲದ ಪಕ್ಷಕ್ಕೆ ಅವರು ಸುಮ್ಮನಿರುವರೇ ?

ಉತ್ತರ : " ಪಾಪಂ-ಏವ-ಆಶ್ರಯೆತ್-ಅಸ್ಮಾನ್-ಹತ್ವಾ-ಏತಾಂ-ಆತತಾಯಿನಃ"—ಅಂದರೆ ನಮ್ಮನ್ನು ಕೊಂದ ಮೇಲೆ ಬಾಳುವ ಈ ದುರ್ಯೋಧನ. ಮೊದಲಾದ ಆತತಾಯಿಗಳಿಗೆ ಕೇವಲ ಪಾಪವೇ ಆಶ್ರಯವಾಗಿರುತ್ತದಲ್ಲದೆ ಯಾವ ಸುಖವೂ ಉಂಟಾಗಲಾರದು. ಸಾರಾಂಶವೇನೆಂದರೆ, ದುರ್ಯೋದನಾದಿಗಳು ಪೂರ್ವದಲ್ಲಿಯೇ ಆತತಾಯಿಗಳಾಗಿದ್ದರೂ, ಪುನಃ ಯುದ್ಧ ಮಾಡದಿರುವ ನಮ್ಮನ್ನು ಕೊಂದು ಈಗಲೂ ಅವರೇ ಪಾಪಿಗಳಾಗುತ್ತಾರೆ. ಇದರಿಂದ ನಮಗೆ ಯಾವ ಪಾಪವೂ ಸಂಭವಿಸುವುದಿಲ್ಲ. ಆದ್ದರಿಂದ ಯುದ್ಧವನ್ನು ಮಾಡದೆ ಇರುವುದರಿಂದ ನಮಗೆ ಯಾವ ಹಾನಿಯೂ ಇಲ್ಲ.

ಸಂಬಂಧ : ಹಿಂದೆ ಇತರ ಪ್ರಾಣಿಗಳನ್ನು ಹಿಂಸಿಸುವುದರಲ್ಲಿ ಯಾವ ಫಲವೂ ಇಲ್ಲವೆಂತಲೂ, ಪ್ರತಿಯಾಗಿ ಅನರ್ಥವೇ ಪ್ರಾಪ್ತಿಯಾಗುವುದೆಂತಲೂ, ಈ ಕಾರಣದಿಂದ ಯಾವ ಪ್ರಾಣಿಯನ್ನೂ ಹಿಂಸಿಸುವುದು ಯೋಗ್ಯವಲ್ಲ ಎಂಬುವ ವಿಷಯವನ್ನು "ನಚಶ್ರೇಯೋನು ಪಶ್ಯಾಮಿ" ಎಂಬಲ್ಲಿಂದ ಹಿಡಿದು ಇಲ್ಲಿಯವರೆಗೆ ಹೇಳಿದ್ದನ್ನು ಮುಂದಿನ ಶ್ಲೋಕದಲ್ಲಿ ಅರ್ಜುನನು ಸಮಾಪ್ತಿ ಮಾಡುತ್ತಾನೆ.

ತಸ್ಮಾನ್ನಾರ್ಹಾ ವಯಂ ಹಂತುಂಧಾರ್ತರಾಷ್ಟ್ರಾನ್ಸ್ವ ಬಾಂಧವಾನ್
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ||೩೭||

ತಾತ್ಪರ್ಯ : ಆದುದರಿಂದ ನಮ್ಮ ಬಂಧುಗಳಾದ ಕೌರವರನ್ನು ಕೊಲ್ಲಲು ನಾವು ಯೋಗ್ಯರಲ್ಲ. ಏಕೆಂದರೆ, ಎಲೈ ಮಾಧವ, ಸ್ವಜನರನ್ನು ಕೊಂದು ಹೇಗೆ ತಾನೇ ನಾವು ಸುಖಿಗಳಾದೇವು?

ಪ್ರಶ್ನೆ : ಈ ಶ್ಲೋಕದಲ್ಲಿ ಬಂದಿರುವ 'ತಸ್ಮಾತ್' ಎಂಬ ಪದವು ಏನನ್ನು ಸೂಚಿಸುತ್ತದೆ ?

ಉತ್ತರ : ೩೧ನೇ ಶ್ಲೋಕದಲ್ಲಿ 'ನಚ ಶ್ರೇಯೋನುಪಶ್ಯಾಮಿ' ಎಂಬುವುದರಿಂದ ಹಿಡಿದು ಇಲ್ಲಿಯವರೆಗೆ ಸೂಚಿಸಿರುವ ಇತರ ಪ್ರಾಣಿಗಳ ಹಿಂಸೆಯು ದೋಷಭೂಯಿಷ್ಠವಾದುದೆಂದೂ, ಪ್ರತಿಯಾಗಿ ಅನರ್ಥವನ್ನುಂಟುಮಾಡುವುದೆಂದೂ ಹೇಳಿದ ವಿಷಯವನ್ನು 'ತಸ್ಮಾತ್' ಎಂಬ ಪದವು ಉಪಸಂಹಾರ ಮಾಡುತ್ತದೆ.

ಪ್ರಶ್ನೆ : ಅರ್ಜುನನ ಭಾವವೇನು ?

ಉತ್ತರ : ಯುದ್ಧ ಮಾಡುವುದರಿಂದ ಬಾಂಧವರ ಹಿಂಸೆಯ ಮೂಲಕ ಸ್ವರ್ಗಾದಿಗಳಾದ ಅದೃಷ್ಟ ಫಲವು ದೊರಕದೆ ಪ್ರತಿಯಾಗಿ ಮಹಾ ಅನರ್ಥವೇ ಉಂಟಾಗುವುದರಿಂದ ದುರ್ಯೋಧನಾದಿ ಬಾಂಧವರನ್ನು ನಾನು ಕೊಲ್ಲಲು ಇಚ್ಛಿಸುವುದಿಲ್ಲವೆಂಬುದೇ ಅರ್ಜುನನ ಭಾವ.

ಪ್ರಶ್ನೆ : ಬಂಧುಗಳನ್ನು ವಧಿಸುವುದರಿಂದ ಸ್ವರ್ಗಾದಿ ಅದೃಷ್ಟ ಸುಖವು ದೊರೆಯದಿದ್ದರೆ ಹೋಗಲಿ, ಈ ಲೋಕದ ದೃಷ್ಟ ಸುಖವೆಂಬುದು ದೊರೆಯುವುದಲ್ಲವೇ ಎಂಬ ಪ್ರಶ್ನೆಗೆ ಅರ್ಜುನನು ಏನು ಸಮಾಧಾನ ಹೇಳುತ್ತಾನೆ ?

ಉತ್ತರ : "ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ"—ಹೇ ಮಾಧವ ! ಪ್ರಪಂಚದಲ್ಲಿ ತಮ್ಮ ಸಂಬಂಧಿಗಳ ಸುಖಕ್ಕಾಗಿಯೇ ಶ್ರೇಷ್ಠ ಪುರುಷರ ಪ್ರವೃತ್ತಿಯು ಕಂಡುಬರುತ್ತದೆ. ಈಗ ನಮ್ಮ ಸಂಬಂಧಿಗಳನ್ನೇ ಕೊಂದು ಸುಖಿಸುವುದು ಹೇಗೆ ? ಸುಖಕ್ಕೆ ಬದಲಾಗಿ ದುಃಖವೇ ಉಂಟಾಗುವುದಲ್ಲವೇ ? ಆದುದರಿಂದ ಯುದ್ಧ ಮಾಡುವುದರಿಂದ ಈ ಲೋಕದ ದೃಷ್ಟ ಸುಖವೂ ದೊರೆಯಲಾರದು.

ಪ್ರಶ್ನೆ : 'ಮಾಧವ' ಎಂಬ ಪದಕ್ಕೆ ಅರ್ಥವೇನು ?

ಉತ್ತರ : 'ಮಾ' ಎಂದರೆ ಲಕ್ಷ್ಮಿ. 'ಧವ' ಎಂದರೆ ಪತಿ. 'ಮಾಧವ' ಎಂದರೆ ಲಕ್ಷ್ಮೀಪತಿ. 'ಮಾ' ಎಂದರೆ 'ಶ್ರೀ' ಅರ್ಥಾತ್ 'ಜ್ಞಾನ' 'ಧವ' ಎಂದರೆ

ಸಂಪನ್ನ. ಮಾಧವನೆಂದರೆ ಜ್ಞಾನ ಸಂಪನ್ನನಾದ ಪರಮಾತ್ಮ.

ಸಂಬಂಧ : ಬಾಂಧವರ ಹಿಂಸೆಯಿಂದ ದೃಷ್ಟಾದೃಷ್ಟ ಸುಖವು ಇಲ್ಲದೆ ಹೋಗಿ, ಪ್ರತಿಯಾಗಿ ದೋಷವೇ ಪ್ರಾಪ್ತವಾಗುವುದೆಂದು ತಿಳಿದು ನೀನು ಯುದ್ಧದಿಂದ ವಿಮುಖನಾದಂತೆ, ಭೀಷ್ಮಾದಿ ಮಹಾ ಪುರುಷರೂ ಸಹ ಕುಲಕ್ಷಯವನ್ನುಂಟುಮಾಡುವ ಮತ್ತು ಸ್ವಜನರನ್ನು ಹಿಂಸಿಸುವ ಈ ಘೋರ ಕರ್ಮದಲ್ಲಿ ಅವರಿಗೇಕೆ ಪ್ರವೃತ್ತಿಯುಂಟಾಯಿತು ? ನಿನ್ನಂತೆ ಅವರೂ ಏಕೆ ಹಿಂದೆಗೆಯಲಿಲ್ಲ ? ಎಂಬ ಪ್ರಶ್ನೆಗೆ ಮುಂದಿನ ಶ್ಲೋಕದಲ್ಲಿ ಸಮಾಧಾನ ಹೇಳಲ್ಪಡುತ್ತದೆ.

ಯದ್ಯಪ್ಯೇತೇನ ಪಶ್ಯಂತಿ ಲೋಭೋಪಹತಚೇತಸಃ ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್ ||೩೮||

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ||೩೯||

ತಾತ್ಪರ್ಯ : ರಾಜ್ಯ ಲೋಭದಿಂದ ವಿವೇಕ ಶೂನ್ಯವಾದ ಮನಸ್ಸುಳ್ಳ ದುರ್ಯೋಧನಾದಿಗಳು ಕುಲನಾಶದಿಂದುಂಟಾಗುವ ದೋಷವನ್ನೂ, ಮಿತ್ರದ್ರೋಹದಿಂದುಂಟಾಗುವ ಪಾತಕವನ್ನೂ ತಿಳಿದುಕೊಳ್ಳದೆ ಹೋದರೂ, ಕುಲನಾಶದಿಂದುಂಟಾಗುವ ದೋಷವನ್ನೂ ತಿಳಿದುಕೊಳ್ಳುವ ಶಕ್ತಿಯುಳ್ಳ ನಾವು ಈ ಪಾಪದಿಂದ ನಿವೃತ್ತರಾಗಲು ಏಕೆ ಪ್ರಯತ್ನಪಡಬಾರದು ?

ಪ್ರಪಂಚದಲ್ಲಿ ಲೋಭದಿಂದ ಕೂಡಿದ ಬುದ್ಧಿಯುಳ್ಳವರಿಗೆ ತಾವು ಮಾಡುವ ಕರ್ಮದಿಂದುಂಟಾಗುವ ಅನರ್ಥವು ತಿಳಿಯದೆ ಹೋದರೂ, ವಿವೇಕಿಗಳಿಗೆ ಮಾತ್ರ ಪ್ರತ್ಯಕ್ಷವಾಗಿ ಕಂಡುಬರುತ್ತದೆ ಎಂಬುದು ಒಂದು ನಿಯಮ.

ಪ್ರಶ್ನೆ : ಲೋಭವೆಂದರೇನು ?

ಉತ್ತರ : ಇರುವ ಪದಾರ್ಥದ ತ್ಯಾಗವನ್ನು ಸಹಿಸದೇ ಇರುವುದೇ ಲೋಭ. ಈ ಲೋಭದಿಂದ ಭೀಷ್ಮಾದಿಗಳ ಚಿತ್ತವು ಗ್ರಸ್ತವಾಗಿರುವುದರಿಂದ ಕುಲನಾಶದಿಂದುಂಟಾಗುವ ದೋಷವನ್ನೂ ಮತ್ತು ಮಿತ್ರದ್ರೋಹದಿಂದ ಪಾತಕವನ್ನೂ ಅವರು ತಿಳಿಯಲಾರರು. ಲೋಭವೆಂಬ ದೋಷವಿಲ್ಲದ ಚಿತ್ತವುಳ್ಳ ನಮಗೆ ಈ ದೋಷ ಪಾತಕಾದಿಗಳು ಸ್ಪಷ್ಟವಾಗಿ ತೋರಿಬರುವುದರಿಂದ, ಭೀಷ್ಮಾದಿಗಳಿಗೆ ಯುದ್ಧದಲ್ಲಿ ಪ್ರವೃತ್ತಿ ಸಂಭವಿ

ಸಿದರೂ ನಮಗೆ ಆ ಪ್ರವೃತ್ತಿಯು ಸಂಭವಿಸುವುದಿಲ್ಲ. ಹೀಗೆ ಹೇಳುವುದರಿಂದ ಶಿಷ್ಟ ಪುರುಷರ ಆಚರಣೆಯನ್ನು ಇತರರು ಮಾಡಬೇಕೆಂಬುದರಲ್ಲಿ ಇರುವ ಸಂದೇಹವೂ ನಿವೃತ್ತಿಯಾಯಿತು. ಶಿಷ್ಟ ಪುರುಷರ ಆಚರಣೆಯು ಶಾಸ್ತ್ರಾನುಸಾರವಾಗಿದ್ದರೆ ಮಾತ್ರ ಅದನ್ನನುಸರಿಸಬೇಕೇ ಹೊರೆತು ಶಾಸ್ತ್ರ ವಿರುದ್ಧವಾಗಿದ್ದರೆ ಅದು ತ್ಯಾಜ್ಯವೇ. ಭೀಷ್ಮಾದಿಗಳು ಶಿಷ್ಟ ಪುರುಷರಾದರೂ ಅವರಲ್ಲಿರುವ ಯುದ್ಧ ಪ್ರವೃತ್ತಿಯು ಲೋಭಾದಿ ದೋಷಗಳಿಂದ ಕೂಡಿರುವುದರಿಂದ ಅದನ್ನನುಸರಿಸಲಾಗುವುದಿಲ್ಲ.

ಉಪಮಾನ : ಒಬ್ಬ ಸಾಧು ಒಬ್ಬ ಗೃಹಸ್ಥನ ಮನೆಗೆ ಊಟಕ್ಕೆ ಹೋದನು. ಊಟ ಮಾಡಿ ಮುಗಿದ ಮೇಲೆ ನೀರು ಕುಡಿಯಲು ಕೊಟ್ಟಿದ್ದ ಬೆಳ್ಳಿ ಲೋಟವನ್ನು ಕದಿಯಬೇಕೆಂಬ ಇಚ್ಛೆ ಆ ಸಾಧುವಿಗೆ ಉಂಟಾಯಿತು. ಇಚ್ಛೆಯಂತೆ ಕದ್ದುಕೊಂಡು ಹೋದನು. ಮರು ದಿವಸ ತಿಂದ ಅನ್ನವೆಲ್ಲಾ ಜೀರ್ಣವಾದ ಮೇಲೆ ಅವನಿಗೆ ನಾನು ಈ ಪಾಪ ಕರ್ಮವನ್ನು ಏಕೆ ಮಾಡಿದೆನೆಂಬ ಪಶ್ಚಾತ್ತಾಪ ಉಂಟಾಯಿತು. ತಕ್ಷಣ ಅವನು ಹಿಂದಕ್ಕೆ ಬಂದು ಈ ಯಜಮಾನನ ಕ್ಷಮಾಪಣೆಯನ್ನು ಕೇಳಿ ಲೋಟವನ್ನು ವಾಪಸ್ ಕೊಟ್ಟನು. ನಂತರ ನನಗೆ ನಿನ್ನೆ ಕೊಟ್ಟ ಆಹಾರವನ್ನು ನೀನು ಹೇಗೆ ಗಳಿಸಿದ್ದೆ ? ಎಂದು ಕೇಳಿದನು. ಕಳ್ಳತನದಿಂದ ಗಳಿಸಿದ್ದೆನೆಂದು ಆತನು ಹೇಳಿದನು. ಕಳ್ಳತನ ಮಾಡಿ ತಂದ ಆಹಾರವನ್ನು ತಿಂದಿದ್ದರಿಂದ ನನಗೂ ಕಳ್ಳತನ ಮಾಡಬೇಕೆಂಬ ಬುದ್ಧಿ ಬಂದಿತು. 'ಜಸ ಅತ ಸಮನ್'—ಎಂಥ ಅನ್ನವೋ ಅಂಥ ಮನಸ್ಸು ಎಂಬ ನ್ಯಾಯದಂತೆ ಆಯಿತೆಂದು ಹೇಳಲು ಯಜಮಾನನು, ದಿನ ದಿನವೂ ನಾವು ಕಳ್ಳತನ ಮಾಡುತ್ತಿದ್ದರೂ ನಮಗೇಕೆ ದೋಷವು ಕಂಡು ಬರುವುದಿಲ್ಲ? ನಿಮಗೇಕೆ ದೋಷವು ಕಂಡು ಬಂದಿತು ಎಂದು ಕೇಳಲು, ನಿನ್ನ ಅಂತಃಕರಣವು ಅನೇಕ ದೋಷಗಳಿಂದ ಮೊದಲೇ ಕೂಡಿರುವುದರಿಂದ ನಿನಗೆ ಕಳ್ಳತನದಲ್ಲಿ ದೋಷದೃಷ್ಟಿ ಉಂಟಾಗುವುದಿಲ್ಲ. ಆದರೆ ನನ್ನ ಅಂತಃಕರಣವು ದೋಷರಹಿತವಾಗಿರುವುದರಿಂದ ನನಗೆ ಕಳ್ಳತನದಲ್ಲಿ ದೋಷದೃಷ್ಟಿ ಉಂಟಾಗಿದೆ. ಹೇಗೆಂದರೆ ಬಿಳಿಯ ಗೋಡೆಯಲ್ಲಿ ಒಂದು ಚುಕ್ಕೆ ಇಟ್ಟರೆ ಅದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಮೊದಲೇ ಅನೇಕ ಚುಕ್ಕೆಗಳಿಂದ ಕೂಡಿದ ಗೋಡೆಯ ಮೇಲೆ ಪುನಃ ಮತ್ತೊಂದು ಚುಕ್ಕೆ ಇಟ್ಟರೆ ಅದೇನೂ ಸ್ಪಷ್ಟವಾಗಿ ಕಾಣುವುದಿಲ್ಲ. ಈ ದೃಷ್ಟಾಂತದಂತೆ ಅರ್ಜುನನ ಅಂತಃಕರಣವು ನಿರ್ಮಲವಾಗಿರುವುದರಿಂದ ಬಾಂಧವರ ಹಿಂಸೆಯಿಂದಲೂ ಮಿತ್ರರ ಹಿಂಸೆಯಿಂದಲೂ ಉಂಟಾಗುವ ದೋಷಗಳು ಸ್ಪಷ್ಟವಾಗಿ ಕಂಡುಬುರುತ್ತವೆ.

(ಸಶೇಷ)

ಬಸವ ಗಂಗೋತ್ರಿ

ಈ ಶತಮಾನದ ಸುಂದರ ಅಧ್ಯಾತ್ಮ ವಿದ್ಯಾಲಯ : ಬೆಂಗಳೂರು ದಕ್ಷಿಣ ತಾಲ್ಲೋಕಿನ ವಲಯಕ್ಕೆ ಸೇರಿದ ಕುಂಬಳಗೋಡು ಗ್ರಾಮ ವ್ಯಾಪ್ತಿಗೆ ಒಳಪಟ್ಟ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ೩೨ ಎಕರೆ ವಿಸ್ತೀರ್ಣದ ಪ್ರಶಾಂತ ನೆಲದಲ್ಲಿ ಮೈದಳೆಯುಲಿದೆ ಈ ಶತಮಾನದ ಸುಂದರ ಅಧ್ಯಾತ್ಮ ವಿದ್ಯಾಲಯ. ಬೆಂಗಳೂರು ನಗರದಿಂದ ಕೇವಲ ಹತ್ತೊಂಭತ್ತು ಕಿಲೋಮೀಟರ್ ದೂರದಲ್ಲಿರುವ ಅತ್ಯುತ್ತಮ ನಗರ ವಾಹನ ಸೌಕರ್ಯವಿರುವ ಪ್ರಶಾಂತತೆಯ ನೆಲೆ ಬೀಡು "ಬಸವ ಗಂಗೋತ್ರಿ". ಚಿನ್ನಕ್ಕೆ ಸುವಾಸನೆ ಬಂದಂತೆ ನಿಸರ್ಗದೇವತೆಯ ಮಡಿಲಲ್ಲಿ ಹರಿಯುತ್ತಿದೆ ವೃಷಭಾವತಿಯ ಒಡಲನ್ನು ಬೆರೆಯುವ ಸುಂದರ ಉಪನದಿ "ಬಸವ ತೀರ್ಥ."

ವಿಶ್ವ ಕಲ್ಯಾಣ ಮಿಷನ್ (ಸಾರ್ವಜನಿಕ ಧಾರ್ಮಿಕ ಟ್ರಸ್ಟ್) ಈ ನಿವೇಶನವನ್ನು ಖರೀದಿಸಲಿದ್ದು, ಇಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲು ಉದ್ದೇಶಿಸಿದೆ.

೧. **ಬಸವ ಭಾರತಿ ವಿದ್ಯಾಶಾಲೆ:** ವಸತಿ ಸಹಿತ ವಿದ್ಯಾಲಯ (Residential School) ಭಾರತೀಯ ಸಾಂಸ್ಕೃತಿಕ ಪರಂಪರೆಯ ಮೇಲೆ ಆಧಾರಿತವಾದ ಶಿಕ್ಷಣ ನೀಡುವ ಗುರುಕುಲ. ಐದನೇ ತರಗತಿಯಿಂದ ಆರಂಭವಾಗುವ ಈ ಶಾಲೆಯ ಆರಂಭೋತ್ಸವ ೧೯೭೪ರ ಬಸವ ಜಯಂತಿಯಂದು ಜರುಗಲಿದೆ.

೨. **ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ :** ಧರ್ಮ ಪ್ರಸಾರಕರನ್ನು ತರಬೇತಿ ಮಾಡುವ ಯೋಜನೆಯು ಕಳೆದೊಂದು ವರ್ಷದಿಂದ ಆರಂಭವಾಗಿದ್ದು, ಇದಕ್ಕೆ ಸ್ವತಂತ್ರ ತರಬೇತಿ ವಿದ್ಯಾಲಯವನ್ನು ನಿರ್ಮಾಣ ಮಾಡಲಾಗುವುದು.

೩. ವೈದ್ಯಕೀಯ ಸೇವಾರಂಗ-

೪. ಅನಾಥ ಸೇವಾ ಮಂದಿರ.

೫. **ವೃದ್ಧಾಲಯ :** ಮಕ್ಕಳಿಲ್ಲದವರು, ಮಕ್ಕಳಿದ್ದೂ ನೋಡಿಕೊಳ್ಳದ ನಿಸ್ಸಹಾಯಕರು, ಮಕ್ಕಳ ಸೇವಾಲಭ್ಯವಿದ್ದೂ ಸಹ ತಮ್ಮ ವಾರ್ಧಿಕ್ಯವನ್ನು ಸತ್ಸಂಗದಲ್ಲಿ ಕಳೆಯಬೇಕೆಂಬ ಮುಮುಕ್ಷುಗಳು ತಮ್ಮ ವೆಚ್ಚವನ್ನು ಕೊಟ್ಟು, ಬಾಳಿನ ಸಂಧ್ಯಾದಿನಗಳನ್ನು ನೆಮ್ಮದಿಯಿಂದ ಕಳೆಯಲು ಸಹಾಯಕವಾಗುವ ಯೋಜನೆ.

೭. **ಸರ್ವ ಧರ್ಮ ಮಹಾಲಯ :** ಮಸ್ತ್ಂಗ್ರಹಾಲಯದ ಮಾದರಿಯಲ್ಲಿ ಈ ಭವನವನ್ನು ರೂಪಿಸಿ ವಿಶ್ವದ ಎಲ್ಲ ಧರ್ಮಗಳ ಅನುಯಾಯಿಗಳ ಆರ್ಥಿಕ ನೆರವಿನಿಂದ ಅವರವರ ಧರ್ಮದ ಇತಿಹಾಸ-ಸಂಸ್ಕೃತಿಗಳ ಒಂದು ವಿಹಂಗಮ ನೋಟ ನೀಡುವ ಕೋಣೆಗಳನ್ನು ರಚಿಸಿ, ಪ್ರವಾಸಿಕರಿಗೆ ಸರ್ವಧರ್ಮ ಪರಿಚಯ ಮಾಡಿಕೊಡುವ ಯೋಜನೆ.

೮. **ವಸ್ತು ಸಂಗ್ರಹಾಲಯ :** ಶಬ್ದ ಮತ್ತು ಧ್ವನಿಸಹಿತವಾದ, ಐತಿಹಾಸಿಕ ಮತ್ತು ಧಾರ್ಮಿಕ ಘಟನೆಗಳನ್ನು ಒಳಗೊಂಡ ದೃಶ್ಯಗಳ ರಚನೆ, ತೈಲ ಚಿತ್ರಗಳ ಸಂಗ್ರಹ ಇವೇ ಮುಂತಾದ ಸಾಹಿತ್ಯವನ್ನೊಳಗೊಂಡ ವಸ್ತು ಸಂಗ್ರಹಾಲಯ.

೯. ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ಘಟಸ್ಥಲ ಸಂಕೇತದ ಶಿಲ್ಪವನ್ನೊಳಗೊಂಡ ಮಹಾದ್ವಾರ ಸಹಿತವಾದ ಸುಂದರವಾದ ಶ್ರೀ ಬಸವೇಶ್ವರ ದಿವ್ಯಾಲಯ ಮತ್ತು ಧ್ಯಾನಮಂದಿರ ನಿರ್ಮಿಸುವ ಯೋಜನೆ.

೧೦. ಬುದ್ಧಿಜೀವಿಗಳು, ಸಾಹಿತಿಗಳು, ಯೋಗಾಭ್ಯಾಸಿಗಳು, ಅಂತರ್ಮುಖಿಗಳು ಮೌನವಾಗಿಯೋ ಅಥವಾ ಜನಸಂಪರ್ಕವಿಲ್ಲದೆಯೋ ಶಾಂತರಾಗಿದ್ದುಕೊಂಡು ತಮ್ಮ ಸಾಹಿತ್ಯ ರಚನೆಯಲ್ಲಿ ತೊಡಗಲು ಅಥವಾ ಚಿಂತನೆಯಲ್ಲಿ ಮಗ್ನರಾಗಲು ತಮಗೆ ಬೇಕೆನಿಸಿದಷ್ಟು ಕಾಲ ಇರುವ "ಆತ್ಮಶಾಂತಿ ಧಾಮ"ವೆಂಬ "ವಿಶ್ರಾಂತಿ ಧಾಮ". ಅವರಿಗೆ ಸ್ನಾನ, ಧ್ಯಾನ, ಪ್ರಸಾದ ಮುಂತಾದ ಎಲ್ಲ ವ್ಯವಸ್ಥೆಯನ್ನು ಅತ್ಯಲ್ಪ ದರದಲ್ಲಿ ಒದಗಿಸಿಕೊಡುವುದು.

೧೧. ಪ್ರಶಾಂತ ನಿಸರ್ಗದ ಮಧ್ಯೆ ಇರುವ, ಹರಿಯುವ ನೀರಿನ ಉತ್ತಮ ಸೌಲಭ್ಯವಿರುವ ವಿಶಾಲ ಮೈದಾನದಲ್ಲಿ ವಿವಾಹ ಕಾರ್ಯಗಳಿಗನುಕೂಲವಾಗುವ ಕಲ್ಯಾಣ ಮಂದಿರ.

** ** **

ಉನ್ನತ ಗುರಿಯಿರಲಿ

ಹಾರುವ ಗುರಿಯಿರಲಿ ಎತ್ತರಕೆ ಬಾನೆತ್ತರಕೆ,
ಬಲಿಯದಿದ್ದರು ರೆಕ್ಕೆ ಅಂಜಿಕೆ ಏಕದಕೆ ?
ಹಿರಿದಾದ ಗುರಿಯೊಂದು ಇರುವುದು ತಪ್ಪೆ ?
ಹಾರೋಣ ನೆಗೆದಷ್ಟು ಕೈ ಚಾಚಿ ಮುಂದೆ.

—ಗುರುಪಾದ ಸೂರಗೊಂಡ

ಧನ ಸಹಾಯಕ್ಕೆ ಮನವಿ

೧. ಎಡದ ಕೈಯಲ್ಲಿ ಲಿಂಗ(ದೇವ)ಪೂಜೆ; ಬಲದ ಕೈಯಲ್ಲಿ ಜಂಗಮ(ಸಮಾಜ)ಸೇವೆ.
—ವಿಶ್ವಗುರು ಬಸವೇಶ್ವರರು.

೨. ಸ್ಥಾವರ (ಹಣ, ದೇವಾಲಯ)ಕ್ಕಳಿವುಂಟು ಜಂಗಮ (ಜ್ಞಾನ ಸೇವೆ)ಕ್ಕಳಿವಿಲ್ಲ.

೩. ತೊಟ್ಟು ಬಿಡುವನ್ನಕ್ಕ ಮತ್ತಾ ಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ (ಸಮಾಜ, ಮಾನವ ಕುಲ) ಸೇವೆ ಕೃತ್ಯವಿರಬೇಕು.
—ಆಯ್ದಕ್ಕಿ ಲಕ್ಕಮ್ಮ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ "ಬಸವ ಗಂಗೋತ್ರಿ" ವಿದ್ಯಾಲಯ ಅಭಿವೃದ್ಧಿಗಾಗಿ ಮತ್ತು ಹಿಂದಿನ ಪುಟದಲ್ಲಿ ತಿಳಿಸಿದ ಬಹುಮುಖ ಯೋಜನೆಗಳ ಕಾರ್ಯವಹಣೆಗೆ ೧೦ ಲಕ್ಷ ರೂಪಾಯಿಗಳ ನೆರವನ್ನು ಜನತೆಯಿಂದ ಬಯಸುತ್ತಲಿದೆ. ಈ ಸಂದರ್ಭದಲ್ಲಿ, ಆದಷ್ಟು ತ್ವರಿತವಾಗಿ ಆರ್ಥಿಕ ನೆರವು ಒದಗಬೇಕಾಗಿದೆ. ಸದ್ಭಕ್ತರು ಕಾಣಿಕೆಯ ರೂಪದಲ್ಲಿ ಸಂಸ್ಥೆಗೆ ಸಲ್ಲಿಸಬೇಕೆಂದು ಕೋರುವೆವು. ಮಹಾಜನತೆಯಾದ ನೀವು ಕಾಣಿಕೆಯನ್ನು ಕೊಡಿರಿ ಅಥವಾ ನಿಮ್ಮ ಸ್ನೇಹಿತರಿಂದ ಕೊಡಿಸಿರಿ. ನಿಸ್ಸಂಕೋಚವಾಗಿ, ಉದಾರವಾಗಿ ಸಹಾಯಮಾಡಲು ಮುಂದೆ ಬರುವಿರೆಂದು ಆಶಿಸುವೆವು.

ದಾನಿಗಳಿಗಿರುವ ಅವಕಾಶಗಳು :

೧.	ಬಸವ ಭಾರತಿ ವಿದ್ಯಾಲಯ ರಚನೆ (Residential School)	೧,೦೦೦೦೧
೨.	ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ (Prealcers Traing College)	೧,೦೦೦೦೧
೩.	ಸಂಶೋಧನಾ ಗ್ರಂಥಾಲಯ.	೫೦,೦೦೧
೪.	ಕಲ್ಯಾಣ ಮಂದಿರದ ವಿವಾಹ ಮಂಟಪ	೫೦,೦೦೧
೫.	ಶ್ರೀ ಬಸವೇಶ್ವರ ಅಮೃತ ಶಿಲಾ ಪುತ್ಥಳಿ	೧೦,೦೦೧
೬.	ಬಸವ ಭಾರತಿ ವಿದ್ಯಾಲಯದಲ್ಲಿ ಕೊಠಡಿ ನಿರ್ಮಾಣ	೫,೦೦೧

೭.	ಕಲ್ಯಾಣ ಮಂದಿರದ ವಸತಿ ಗೃಹದ ಕೊಠಡಿಗೆ	೫,೦೦೧
೮,	ಗ್ರಂಥಗಳ ಪ್ರಕಟಣೆಗೆ	೩,೦೦೧
೯.	ಮಹಾ ಪೋಷಕರು	೧,೦೦೧
೧೦.	ಆಜೀವ ಸದಸ್ಯರು	೫,೦೦೧

೧೧. ವಿದ್ಯಾಲಯಕ್ಕೆ ಅಲ್ಮೈರಾ, ಕುರ್ಚಿಗಳು, ಬೆಂಚು, ಅಡಿಗೆಗಾಗಿ ಪಾತ್ರೆಗಳು ಮುಂತಾದುವನ್ನು ದಾನವಾಗಿ ಕೊಡಬಹುದು.

ಸಂಚಾಲಕರು :

ವಿಶ್ವಕಲ್ಯಾಣ ಮಿಷನ್'
ದೂರವಾಣಿ : 82335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್,
ನಂ. ೨೪, ೨ನೇ ಬ್ಲಾಕು, ಕಾರ್ಡ್ ರೋಡ್
ರಾಜಾಜಿನಗರ, ಬೆಂಗಳೂರು-೫೬೦೦೧೦

ಸೂಚನೆ :

ಹಣವನ್ನು ಕಳಿಸುವವರು Viswakalyana Mission ಹೆಸರಿನಲ್ಲಿ ಕ್ರಾಸ್ ಚೆಕ್, ಡ್ರಾಫ್ಟ್, ಮನಿಯಾರ್ಡರ್ ಮುಖೇನ ಅಥವಾ ಖಾತೆ ನಂ. 1451, ಕೆನರಾ ಬ್ಯಾಂಕ್, 1ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು–10. ಇಲ್ಲಿಗೆ ಉಚಿತ ದರದಲ್ಲಿ ಎಂ. ಟಿ. ಮಾಡಬಹುದು.

★ ★

"ಅಂಬುಜೆಯ ಮಕರಂದವನ್ನು ಪಾನಗೈಯುತ್ತ ದುಂಬಿ ಮೈಮರೆದು ಧಳಗಳ ಗರ್ಭದಲ್ಲಿ ಸೆರೆಯಾಗುವಂತೆ ಅನುಭಾವಿಯು ತನ್ನ ಇರವಿನ ಅರಿವನ್ನು ಕಳೆದುಕೊಂಡು ದಿವ್ಯತ್ವದಲ್ಲಿ ಕೈಸೆರೆಯಾಗುವನು."

—ಮಾತಾಜಿ.

"ಕಳ್ಳಿಯೊಳು ಹಾಲು, ಮುಳ್ಳುಗಳ್ಳಿಯೊಳು ಹೆಜ್ಜೇನು,
ಎಳ್ಳಿನೊಳಗೆಣ್ಣೆ ಹನಿದಿರಲು, ಶಿವಲೀಲೆ ಸುಳ್ಳೆನ್ನಬಹುದೆ ?

—ಸರ್ವಜ್ಞ.

ಬಸವ ಗಂಗೋತ್ರಿ ಮುತ್ತು ಸಮುದಾಯ ಜೀವನಕ್ಕೆ ಕರೆ

ಲೇಸೆನಿಸಿಕೊಂಡು ಐದು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು ?....
ಕೂಡಲ ಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ ?

ಇದು ವಿಶ್ವಗುರು ಬಸವಣ್ಣನವರ ವಾಣಿ. ಲೇಸಾಗಿ ಬದುಕಿ, ಲೇಸನ್ನೇ ಲೋಕಕ್ಕೆ ನೀಡಿ, ಲೇಸನ್ನೇ ಸಕಲ ಜೀವಾವಳಿಗೆ ಬಯಸುವುದೇ ನಿಜ ಜೀವನದ ಗುರಿ ಯಾವ ತುತ್ತೂರಿಯ ಕಹಳೆಯ ದನಿ ಮೊಳಗದಿದ್ದರೂ, ಜಾಗಟೆ–ತಮ್ಮಟೆ ಬಡಿಯದಿದ್ದರೂ, ಪತ್ರಿಕೆಗಳು ಸುದ್ಧಿ ನೀಡದಿದ್ದರೂ ಮಲ್ಲಿಗೆ ಮೌನವಾಗಿ ಅರಳಿ ಸುವಾಸನೆ ಸೂಸಿ ಕಣ್ಮರೆಯಾಗುವುದು. ಅದೇ ರೀತಿ ಮಾನವನ ಬದುಕಾದರೂ ಕೆಲವು ಕ್ಷಣಗಳ ಹಿತವನ್ನು ಲೋಕಕ್ಕೆ ಇತ್ತರೆ ಅದು ಸಾರ್ಥಕದ ಬದುಕು. ಅಂತಹ ಬದುಕು ಬದುಕಲು ಶಾಂತ ಪರಿಸರಬೇಕು.

ಅಂಥ ಪರಿಸರವನ್ನು ಒದಗಿಸಿಕೊಡಲೆಂದು ನಿರ್ಮಾಣವಾಗುತ್ತಿದೆ ಬಸವ ಗಂಗೋತ್ರಿ. ರಟ್ಟೆಯಲ್ಲಿ ಶಕ್ತಿ ಇದ್ದಷ್ಟು ಕಾಯಕ, ಹೊಟ್ಟೆ ತುಂಬುವಷ್ಟು ಪೂಜೆ–ಧ್ಯಾನ, ದಿನ ನಿತ್ಯ ವ್ಯಾಯಾಮ, ಭೋಜನ, ಭಜನೆ–ಈ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಂಪೂರ್ಣ ಅವಕಾಶ. ಇದೊಂದು ಅನುಭವ ಮಂಟಪದ ಮಾದರಿಯ ಸಮುದಾಯದ ಬದುಕು.

ನಿಸರ್ಗದ ಮಡಿಲಿನಲ್ಲಿ ಶರಣರ ನಡುವೆ ಪ್ರಶಾಂತ ಜೀವನ ನಡೆಯಿಸಬಯಸುವ ಸಾಧಕರಿಗೆ, ಸಜ್ಜನರಿಗೆ ಪ್ರವೇಶ. ಇಚ್ಛೆ ಇದ್ದವರು ಅರ್ಜಿಗಳನ್ನು ಸಲ್ಲಿಸಬೇಕು. ಕೆಳಗಿನ ವಿಳಾಕ್ಕೆ :

ಚೇರ್ಮನ್, ವಿಶ್ವಕಲ್ಯಾಣ ಮಿಷನ್,
ಬಸವ ಮಂಟಪ, ೩೪, ೨ನೇ ಬ್ಲಾಕು, ರಾಜಾಜಿನಗರ
ಕಾರ್ಡ್ ರೋಡ್, ಬೆಂಗಳೂರು—೫೬೦೦೧೦

ಜಾ ಹಿ ರಾ ತು *

"ಈ ಯುಗದ ಅದ್ಭುತ ಶೋಧ!"
ದಿನಪತ್ರಿಕೆಯಲೊಂದು ಜಾಹಿರಾತು ;
ಎಲ್ಲರ ಬಾಯಲ್ಲೂ ಅದೇ ಮಾತು !
ಅದು ಸೋಜಿಗದ ಸುದ್ದಿಯೇ ಸೈ :
"ಪೆನ್ನಿಲ್ಲದೆ ಬರೆಯುವ ವಿಧಾನ —
ಈ ಯುಗದಲ್ಲೇ ವಿನೂತನ !
ನಿಮ್ಮ ಪೂರ್ಣ ವಿಳಾಸ ತಿಳಿಸಿ ;
ವಿವರಕ್ಕೆ ಕೇವಲ ಒಂದು ರೂ. ಕಳಿಸಿ !
ಪೆನ್ನಿಲ್ಲದೆ ಬರೆಯುವುದೆಂದರೆ
ಸಾಮಾನ್ಯ ಶೋಧನೆ?
ಎಲ್ಲರಿಗೂ ಕೇಳಿ ತಿಳಿಯುವ ಕಾತರ
ಒಂದು ರೂ. ವೆಚ್ಚದಲಿ
ಮುಂದಿನ ಖರ್ಚನ್ನೆಲ್ಲ ಉಳಿಸುವ ಅವಸರ !
ಸರಿ ; ಮಾರನೆಯ ದಿನವೆ,
ಜಾಹಿರಾತು ನೀಡಿದವನ ವಿಳಾಸಕ್ಕೆ —
ಮನಿಯಾರ್ಡರುಗಳು ತಿಕ್ಕಿತಿಕ್ಕಿ !
ಓದುಗರ ಪ್ರತಿಕ್ರಿಯೆ ಕಂಡು
ಶೋಧಕನ ಹಿಗ್ಗು ಮೀರಿತು ಎಲ್ಲೆ !
(ಮನಿಯಾರ್ಡರು ಪಡೆಯಲು ಆತ ಸಹಿ ಹಾಕಿದುದು ಪೆನ್ನಿನಲ್ಲೇ !)
ಇರಲಿ ; ಕೇಳಬೇಕೆ ಜನರ ಹುಚ್ಚು ?
ಬಂದ ಮನಿಯಾರ್ಡರುಗಳ ಸಂಖ್ಯೆ
ಸಾವಿರಕ್ಕೂ ಹೆಚ್ಚು !
ಸರಿ, ಇನ್ನು ಹಣ ಕಳಿಸಿದವರಿಗೆ
ವಿವರ ಕಳಿಸಬೇಕು.
ಶೋಧಕ ಪ್ರತಿಯೊಬ್ಬರಿಗೂ
ಒಂದೊಂದು ಕಾರ್ಡು ಬರೆದ.
ಕೊಟ್ಟ ಉತ್ತರ ಒಂದೇ ಸಾಲು —
"[illegible], [illegible], ಸೀಸದಕಡ್ಡಿ ಬಳಸಿದರಾಯಿತು !"
ಹಣ ಕಳಿಸಿದವನಿಗೆ ಕಾರ್ಡು ಬಂತು.
ಓ!
ಮೂಗಿನ ಮೇಲೆ ಬೆರಳಿಟ್ಟುಕೊಂಡ !
ಇತ್ತ ಆ ಅದ್ಭುತ ಶೋಧಕ —
ಮೀಸೆಯ ಮೇಲೆ ಕೈಯಿಟ್ಟುಕೊಂಡ !

— ಗೊ. ರು. ಚ.

* (ಕೇಳಿದ ಕತೆಯೊಂದಕ್ಕೆ ಕೊಟ್ಟ ಕವನ ರೂಪ,
ಬೇಗ ಹಣ ಕಳಿಸಿ ಕೊ[illegible])

ಈ ತಿಂಗಳ ಮಂಗಳಮೂರ್ತಿ :



"ಕ್ರಾಂತಿ ಕಲ್ಯಾಣ"ದ ತಾತ ಬಿ. ಪುಟ್ಟಸ್ವಾಮಯ್ಯ

— ಗೊ. ರು. ಚನ್ನಬಸಪ್ಪ

ಕಿಕ್ಕಿರಿದು ತುಂಬಿದ ಸಭಾವರಣ. ಪುಸ್ತಕವೊಂದರ ಬಿಡುಗಡೆಯ ಕಾರ್ಯಕ್ರಮ. ಅತಿಥಿಗಳ ಆಗಮನವಾಗುತ್ತಿದ್ದಂತೆ ಸಭೆಯ ಹರ್ಷೋದ್ಗಾರ !

ಸಂಪ್ರದಾಯದ ಸ್ವಾಗತ-ಪರಿಚಯ. ನಂತರ ಅತಿಥಿಗಳ ಭಾಷಣ. ಅದು ಕನ್ನಡಿಗರಿಗೆ ಚಿರಪರಿಚಿತ ದನಿ; ಆದರೂ ಹೊಸ ವಿಚಾರ ವಾಹಿನಿ. ಸಭ್ಯ ಸಭೆ. ತಣ್ಣನೆಯ ಗಾಳಿ. ಹಣ್ಣಾದ ಬಾಯಿಂದ ಹೊರಬಂದ ವಾಣಿ !

"ಇಲ್ಲಿಗೆ ಹತ್ತು-ಹನ್ನೆರಡು ವರ್ಷಗಳೇ ಆದವು. ನಾನು ಆಗ "ಕ್ರಾಂತಿ ಕಲ್ಯಾಣ" ಕಾದಂಬರಿ ಮಾಲೆಯನ್ನು ರಚಿಸುತ್ತಿದ್ದ ಕಾಲ. ಅನೇಕ ವೇಳೆ ನನ್ನ ಬರಹ ಮುಂದೆ ಸಾಗದಿದ್ದಾಗ, ನಾನು ಮುಂಗಾಣದೆ ಮೌನವಾಗಿ ಕುಳಿತು ಕೊಳ್ಳುತ್ತಿದ್ದೆ. ಆಗ ಅತ್ಯಂತ ಸೌಮ್ಯ, ಅಷ್ಟೇ ತೇಜಸ್ಸಿನ ಓರ್ವ ಶುಭ್ರ ಶ್ವೇತ ವಸ್ತ್ರಧಾರಿ ನನ್ನ ಕಣ್ಣ ಮುಂದೆ ಹಾದು ಹೋದಂತೆ, ಅಭಯ ರಕ್ಷೆ ನೀಡಿದಂತೆ ಭಾಸವಾಗುತ್ತಿತ್ತು. ಮತ್ತೆ ನನ್ನ ಬರಹ ಮುಂದೆ ಸಾಗುತ್ತಿತ್ತು. ಅಂತಹ ಅನುಭವ ನನ್ನ ಕಾದಂಬರಿ ಕೊನೆಗೊಳ್ಳುವವರೆಗೂ ಆಗಾಗ ಆದುದುಂಟು. ಆದರೆ

ಆ ತೇಜೋಮೂರ್ತಿಯ ದೃಶ್ಯ ಪರೋಕ್ಷವಾಗಿಯೇ ಇತ್ತು. ಅರ್ಥವಾಗದ ಒಗಟಾಗಿಯೇ ಉಳಿದಿತ್ತು. ಇಂದು ಆ ಒಗಟಿಗೆ ಪರಿಹಾರ ದೊರೆಯಿತು. ನಾನು ಅಂದು ಕಂಡ ಸಾತ್ವಿಕ ಕಳೆಯ ಸ್ತ್ರೀರೂಪ ಇದೇ ಎಂದು ಪೂಜ್ಯ ಮಾತಾಜಿ ಅವರನ್ನು ಕಂಡಾಗ ಅನಿಸಿತು. ನಾನು ಅವರನ್ನು ಇದೇ ಮೊದಲ ಬಾರಿಗೆ ಕಂಡರೂ, ನನ್ನ "ಕ್ರಾಂತಿ ಕಲ್ಯಾಣ"ಕ್ಕೆ ಚೇತನ ನೀಡಿ, ಕೈಹಿಡಿದು ನಡೆಸಿದ ಆ ತಾಯಿಯೇ ಎಂದೆನಿಸುತ್ತದೆ. ಇಂತಹ ಪೂಜ್ಯ ವ್ಯಕ್ತಿಯು ಬರೆದ ಗ್ರಂಥವನ್ನು ಬಿಡುಗಡೆ ಮಾಡಲು ನನಗೆ ಸಂತೋಷ."

ಇಡೀ ಸಭೆ ಬಯಲು ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿತು. ಮಾತಾಡಿದ ಹಿರಿಹೃದಯಕ್ಕೆ ಮನಮುಟ್ಟಿ ನಮಸ್ಕರಿಸಿತು. ಆ ಕ್ಷಣ ನಿಜಕ್ಕೂ ಅನಿರ್ವಚನೀಯ !

ಸಂದರ್ಭ : ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪ್ರಥಮ ಮಹಿಳಾ ಜಗದ್ಗುರು, ಪ್ರತಿಭಾವಂತ ಸಾಹಿತಿ ಪೂಜ್ಯ ಮಾತೆ ಮಹಾದೇವಿ ಅವರ ಪ್ರಥಮ ಕಾದಂಬರಿಯ ಬಿಡುಗಡೆ. ಸಮಾರಂಭ ನಡೆದುದು ಬೆಂಗಳೂರಿನ ರಾಜಾಜಿನಗರ ಬಡಾವಣೆಯಲ್ಲಿ. ಕೃತಿಯನ್ನು ಬಿಡುಗಡೆ ಮಾಡುತ್ತಾ ಮೇಲಿನ ನುಡಿಗಳನ್ನು ಆಡಿದವರೇ ಈ ತಿಂಗಳ ಮಂಗಳಮೂರ್ತಿ ಶ್ರೀ ಬಿ. ಪುಟ್ಟಸ್ವಾಮಯ್ಯನವರು. ಬಿಡುಗಡೆಯಾದ ಕಾದಂಬರಿಯ ಹೆಸರು "ಹೆಪ್ಪಿಟ್ಟ ಹಾಲು" (ಕೃತಿಯ ಪರಿಚಯದ ಸೇವೆ ಈ ಲೇಖಕನ ಪಾಲು). ಪರಿಶುದ್ಧ ಹಸ್ತದಿಂದಾದ ಬಿಡುಗಡೆ; ಸಿದ್ಧ ಹಸ್ತದ ರಚನೆ. ಅಂತಲೇ "ಹೆಪ್ಪಿಟ್ಟ ಹಾಲಿಗೆ" ರಾಜ್ಯ ಸರ್ಕಾರದ ಮನ್ನಣೆ.

"ಬಿ. ಪುಟ್ಟಸ್ವಾಮಯ್ಯ" ಕನ್ನಡ ನಾಡಿನ ಪತ್ರಿಕಾ ಕ್ಷೇತ್ರದಲ್ಲಿ, ಸಾಹಿತ್ಯ ಲೋಕದಲ್ಲಿ, ನಾಟಕರಂಗದಲ್ಲಿ ನಿತ್ಯ ನೂತನ ಹೆಸರು.

ಬರಹದ ಬದುಕು ಆರಂಭವಾದುದೇ ಪತ್ರಿಕಾ ಕ್ಷೇತ್ರದಲ್ಲಿ, ಆಗ ಅವರಿಗೆ ಇಪ್ಪತ್ತು ವರ್ಷ ವಯಸ್ಸು; ಏನೆಲ್ಲಾ ಸಾಧಿಸುವ ಹುಮ್ಮಸ್ಸು ! ಆದರೂ ಆವೇಶಕ್ಕೆ ಬಲಿಯಾಗದ ಸಂಯಮ. ಸಮಷ್ಟಿಯೊಡನೆ ಸಹಜವಾಗಿ ಹೊಂದಿಕೊಳ್ಳುವ ಸೌಜನ್ಯ. ಈ ಸ್ವಭಾವ ಇಂದಿಗೂ ಮಾಸಿಲ್ಲ.

ಆರಂಭದಲ್ಲಿ "ನ್ಯೂ ಮೈಸೂರ್" ಪತ್ರಿಕೆಯ ಕೆಲಸಗಾರ; ಜೊತೆಯಲ್ಲೇ "ಮೈಸೂರು ಪತ್ರಿಕೆ"ಯ ವರದಿಗಾರ. ಅನಂತರ "ಒಕ್ಕಲಿಗರ ಪತ್ರಿಕೆ" ಸಂಪಾದಕ ಹುದ್ದೆ. "ಜನವಾಣಿ"ಯಲ್ಲಿ ಸಂಪಾದಕೀಯ ಬರಹ. ಬಾಲಗ್ರಹ ಪೀಡೆಗೆ ತುತ್ತಾದ

"ಜನವಾಣಿ" ಮತ್ತೆ ಹುಟ್ಟಿಕೊಂಡಾಗ ಪುಟ್ಟಸ್ವಾಮಯ್ಯನವರೇ ಸಂಪಾದಕರು. "ಮಾತೃಭೂಮಿ" ಮತ್ತು "ಜನ್ಮಭೂಮಿ" ಇವರು ಸಂಪಾದಕರಾಗಿದ್ದ ಇನ್ನೆರಡು ಪತ್ರಿಕೆಗಳು.

ಇಂದು ಬೃಹತ್ತಾಗಿ ಬೆಳೆದಿರುವ "ಪ್ರಜಾವಾಣಿ" ಆರಂಭವಾದುದು ಪುಟ್ಟಸ್ವಾಮಯ್ಯನವರ ಸಂಪಾದಕತ್ವದಲ್ಲಿ. ಆ ಪತ್ರಿಕೆಗೆ ಇವರು ಒದಗಿಸಿದ ನೆಲೆಗಟ್ಟು ಘನವಾದುದು.

ಪುಟ್ಟಸ್ವಾಮಯ್ಯನವರ ಸಂಪಾದಕೀಯ ಬರಹಗಳು ಬಲು ಸುಂದರ. ಎದುರಾಳಿಗಳೂ ಒಪ್ಪಿಕೊಳ್ಳುವಂತಹ ಅರ್ಥ; ಪ್ರಭಾವ. "ಪತ್ರಿಕಾ ಕ್ಷೇತ್ರ ಆಸಕ್ತಿಯ ವಿಷಯವಾದರೂ ಪತ್ರಿಕೆಯಿಂದ ಪತ್ರಿಕೆಗೆ ಬದಲಾಯಿಸುವ ಪ್ರಸಂಗ"ಗಳಿಂದ ಬೇಸರ. ಕೊನೆಗೊಮ್ಮೆ ಆ ಕ್ಷೇತ್ರಕ್ಕೇ ನಮಸ್ಕಾರ.

ಹೆಚ್ಚು ಬಯಲಿಗೆ ಬಂದುದು ನಾಟಕ ಸಾಹಿತ್ಯದ ಮೂಲಕ. ಬರೆದ ನಾಟಕ ಕೃತಿಗಳು ಅನೇಕ. ಮೊದಲ ಕೃತಿ "ಷಹಜಹಾನ್". ಬಂಗಾಲಿ ಮೂಲದ ಕನ್ನಡಾನುವಾದ. ಮಹಮದ್ ಪೀರ್ ಅವರ ಚಂದ್ರಕಲಾ ಮಂಡಲಿಯಿಂದ "ಷಹಜಹಾನ್" ಪ್ರಸಿದ್ಧ. ಎರಡನೆಯ ಕೃತಿಯೇ "ಗೌತಮ ಬುದ್ಧ"!

(ಈ ನಾಂದಿಕೃತಿಗಳು ಅತ್ಯಂತ ಸಾಂಕೇತಿಕ. ವೈಭವದ (ಷಹಜಹಾನ್) ಬೆನ್ನ ಹಿಂದೆ ವೈರಾಗ್ಯ(ಬುದ್ಧ)ದ ದ್ಯೋತಕ!)

ಕನ್ನಡ ರಂಗಭೂಮಿಗೆ ಹೊಸ ರಂಗು ಮೂಡಿಸಿದ ಕೃತಿ ರಚನೆಯ ಕೀರ್ತಿ ಪುಟ್ಟಸ್ವಾಮಯ್ಯನವರದು. ಅವರ ಹೆಸರಿಗೆ ಜಯಭೇರಿ ನುಡಿಸಿದ ಇನ್ನೆರಡು ನಾಟಕ ಕೃತಿಗಳೆಂದರೆ "ಕುರುಕ್ಷೇತ್ರ" ಮತ್ತು "ದಶಾವತಾರ". "ರಾಮಾಯಣ" ಆ ನಂತರ. ಈ ಕೃತಿಗಳನ್ನು ರಂಗದ ಮೇಲೆ ಯಶಸ್ವಿಗೊಳಿಸಿದ ಸಾಹಸಿ ಗುಬ್ಬಿ ವೀರಣ್ಣನವರು. ಇವುಗಳ ಪ್ರದರ್ಶನ ಸಂಖ್ಯೆ ಕನ್ನಡ ರಂಗಭೂಮಿಯ ಇತಿಹಾಸದಲ್ಲೇ ದೊಡ್ಡ ದಾಖಲೆ. ಒಂದೊಂದು ಸಾವಿರ ಪ್ರದರ್ಶನ ಕಂಡ ಹಿರಿಮೆ. 'ಕುರುಕ್ಷೇತ್ರ' ಎರಡು ಸಾವಿರಕ್ಕೂ ಹೆಚ್ಚು ಸಲ ಪ್ರದರ್ಶಿತ. ಆ ನಂತರ, ಇದುವರೆಗೂ ಆ ದಾಖಲೆ ಮುರಿಯುವಂತಹ ನಾಟಕಗಳು ಬಂದಿಲ್ಲ.

"ಕುರುಕ್ಷೇತ್ರ" ಕೃತಿಯಲ್ಲಿ ಪುಟ್ಟಸ್ವಾಮಯ್ಯನವರ ಲೇಖನಿಯ "ದಶಾವತಾರ" ದರ್ಶನವೇ ಆಗುತ್ತದೆ. ಸರಸ-ವಿರಸ, ಹಾಸ್ಯ-ಗಾಂಭೀರ್ಯ, ವೀರ-ಶೃಂಗಾರ, ಶೋಕ-

ಹರ್ಷ, ತತ್ತ್ವ-ಸಿದ್ಧಾಂತ, ವೈಭವ-ವೈರಾಗ್ಯ, ಸಹನೆ-ಸಂತಾಪ, ಸಾಹಸ-ಆದರ್ಶ —ಹೀಗೆ ಮಾನವ ಸ್ವಭಾವದ ವಿರಾಟ್ ರೂಪವನ್ನೇ ಕಾಣುತ್ತೇವೆ – ಅಲ್ಲಿನ ಪಾತ್ರಗಳಲ್ಲಿ.

"ಕುರುಕ್ಷೇತ್ರ" ನಾಟಕದ ಒಂದು ಪ್ರಸಂಗದಲ್ಲಿ ರಾಜಕೀಯ ಸಲಹೆಗಾರ ಶಕುನಿ ಒಂದು ಕಡೆ ಹೇಳುತ್ತಾನೆ: "ದುರ್ಯೋಧನಾ, ಈಗ ಸರಿಯಾದ ಸಮಯ. ಕ್ಷಾಮಲಿ ಕಾದಾಗಲೇ ಹೋಳಿಗೆ ಬೇಯಿಸಿಕೊಳ್ಳಬೇಕು." ಶಕುನಿಯ ಸ್ವಭಾವ ಎಷ್ಟೊಂದು ಅರ್ಥಪೂರ್ಣವಾಗಿ ಮೂಡಿ ಬಂದಿದೆ ನೋಡಿ! (ಶಕುನಿಯಂತಹ ಸಮಯ ಸಾಧಕರು ನಮ್ಮ ಸಮಾಜದಲ್ಲಿ ಸಮೃದ್ಧವಾಗಿದ್ದಾರೆ ಬಿಡಿ!)

ಪುಟ್ಟಸ್ವಾಮಯ್ಯನವರ ಸಂಭಾಷಣೆಯ ಶೈಲಿ, ಭಾಷೆಯ ಬೆಡಗು ಅದ್ಭುತ. ಅಡಗಿರುವ ಸತ್ಯ ಶಾಶ್ವತ. ಆಯ್ಕೆಯ ಕಥೆ ಪ್ರಾಚೀನ; ಅಲ್ಲಿನ ಪಾತ್ರಗಳು ನವೀನ. ನುಡಿನುಡಿಯಲ್ಲೂ ಶ್ರೋತೃ ತಲ್ಲೀನ.

ಯಾಜ್ಞಸೇನಿ, ಅಕ್ಕಮಹಾದೇವಿ, ಸತೀ ತುಲಸಿ, ಬಿಡುಗಡೆಯ ಬಿಚ್ಚುಗತ್ತಿ, ಪ್ರಚಂಡ ಚಾಣಕ್ಯ, ತಾರಕವಧೆ, ರಾಣಿ, ಚಿರಕುಮಾರ ಸಭಾ (ಇದು ವಿಶ್ವಕವಿ ರವೀಂದ್ರನಾಥ ಠಾಗೂರರ ಕೃತಿಯ ಅನುವಾದ) ಇವೆಲ್ಲ ಪುಟ್ಟಸ್ವಾಮಯ್ಯನವರ ಲೇಖನಿಯಿಂದ ಅರಳಿದ ರಂಗಪುಷ್ಪಗಳು.

ಬಾಲ್ಯದಲ್ಲೇ ಹಚ್ಚಿಕೊಂಡ ನಾಟಕದ ಹುಚ್ಚು. ಬೆಂಗಳೂರಿನ ತುಳಸೀತೋಟದಲ್ಲಿ ಪಾರಸಿ ಕಂಪನಿಯ ನಾಟಕಗಳನ್ನು ಆಡುತ್ತಿದ್ದ ಕಾಲ. ಬಾಲಕ ಪುಟ್ಟಸ್ವಾಮಯ್ಯನವರ ಮೇಲೆ ಆಚ್ಚೊತ್ತಿದ ಪ್ರಭಾವ. ನಾಟಕ ಕೃತಿ ರಚನೆಗೆ ಅದೇ ಪ್ರೇರಣೆ. ಸಮಾಜ ಶಿಕ್ಷಣಕ್ಕೆ ನಾಟಕ ಪರಿಣಾಮಕಾರಿ ಮಾಧ್ಯಮ—ಅದರಲ್ಲೂ ಅನಕ್ಷರಸ್ಥರೇ ಹೆಚ್ಚಿರುವ ನಮ್ಮ ದೇಶದಲ್ಲಿ. ನಾಟಕ ರಂಗದ ಒಲವು ಮೂಡಲು ಇದೂ ಕಾರಣ.

ಬರೆದ ನಾಟಕಗಳೆಲ್ಲ ಅವರಿಗೆ ತೃಪ್ತಿ ನೀಡಿವೆಯೋ ಇಲ್ಲವೋ ತಿಳಿಯದು. ಆದರೆ ಅವನ್ನು ಓದಿದವರು, ಆಡಿದವರು ಮತ್ತು ನೋಡಿದವರಂತೂ ತೃಪ್ತಿ ಪಟ್ಟುಕೊಂಡಿದ್ದಾರೆ. ಅವರ ಭಾಷೆಯ ಮೋಡಿ ಅಂತಹುದು. ಅಲ್ಲಿ ಕೊರತೆಯ ಕುರುಹಿಲ್ಲ. "ಅತಿ" ಎನ್ನುವುದಕ್ಕೆ ಅವಕಾಶವಿಲ್ಲ.

ಇನ್ನು ಕನ್ನಡ ಕಾದಂಬರಿ ಕಣಜಕ್ಕೆ ಪುಟ್ಟಸ್ವಾಮಯ್ಯನವರು ಕೊಟ್ಟ ಕಾಣಿಕೆ ಕಡಿಮೆಯೇನಲ್ಲ. ಅವರ ಸಾಹಿತ್ಯ ಶರಣವಾಣಿಯಂತೆ ಪರಿಣಾಮ ಪ್ರಸಾದ; ತ್ರಿಕರಣ ತಾಂಬೂಲ; ಅನುಭಾವದ ಮಿಂಚು!

ಮೊದಲ ಕಾದಂಬರಿ "ರೂಪಲೇಖಾ". ನಂತರ ಅರ್ಧಾಂಗಿ, ಮಲ್ಲಮ್ಮನ ಪವಾಡ, ರತ್ನಹಾರ, ಹೂವು-ಕಾವು, ಚಹ ಕಟ್ಟಿದ ಸಾಮ್ರಾಜ್ಯ, ಅಭಿಸಾರಿಕೆ, ಸುಧಾಮಯಿ, ಧ್ರುವಸ್ವಾಮಿನಿ, ಪ್ರಭುದೇವ, ದ್ವಾಸುಪರ್ಣ –ಒಂದೊಂದೂ ಸುಂದರ ಸೃಷ್ಟಿ; ಓದುಗರ ಮನವರಳಿಸುವ ದೃಷ್ಟಿ.

'ನಾಟ್ಯಮೋಹಿನಿ' ಕಥಾ ಸಂಕಲನ. "ನಾಟ್ಯರಂಗ-ಚಿತ್ರರಂಗ" ಅನುಭವ ಕಥನ. ಇವರ ಸಣ್ಣ ಕಥೆಗಳನ್ನು ಕಾಣದ ಕನ್ನಡ ನಿಯತಕಾಲಿಕಗಳು, ವಿಶೇಷಾಂಕಗಳು ಅಪರೂಪ. ಕಥನ ಕಲೆ ಇವರಿಗೆ ಸಿದ್ಧಿಸಿದ ತಂತ್ರ; ಓದುಗರನ್ನು ಸೆರೆಹಿಡಿಯುವ ಮಂತ್ರ!

ವಿಚಾರಕ್ಕೆ ತಕ್ಕ ವಿವೇಚನೆ, ಸನ್ನಿವೇಶಕ್ಕೆ ತಕ್ಕ ಉಪಮೆ. ಉಜ್ವಲ ಭಾಷಾ ಪ್ರಜ್ಞೆ, ಸಹಜ ಅಭಿವ್ಯಕ್ತಿ, ಮಿಗಿಲಾದ ಕನ್ನಡದ ಕೆಚ್ಚು-ಇವು ಪುಟ್ಟಸ್ವಾಮಯ್ಯನವರ ಸಾಹಿತ್ಯದ ವೈಶಿಷ್ಟ್ಯ. ಪ್ರಧಾನವಿರಲಿ, ಪೋಷಕವಿರಲಿ, ಅವರ ಕೃತಿಗಳಲ್ಲಿ ಬರುವ ಪ್ರತಿಯೊಂದು ಪಾತ್ರವೂ ಚೇತನಪೂರ್ಣ. ಪ್ರತಿಯೊಂದು ಪಾತ್ರಕ್ಕೂ ಶುದ್ಧ ಸಂಸ್ಕರಣ.

'ಕಥೆ-ಕಾದಂಬರಿ ರಚನೆಯಲ್ಲೇ ಹೆಚ್ಚು ತೃಪ್ತಿ'. ಆ ತೃಪ್ತಿಗೆ ಅರ್ಥ ತಂದು ಕೊಟ್ಟ ಕಾದಂಬರಿ ಮಾಲೆ "ಕ್ರಾಂತಿ ಕಲ್ಯಾಣ!" ಪುಟ್ಟಸ್ವಾಮಯ್ಯನವರನ್ನು ಕೆಲವು ಅಭಿಮಾನಿಗಳು 'ಕ್ರಾಂತಿ ಕಲ್ಯಾಣ'ದ ತಾತ ಎಂದೇ ಕರೆದಿದ್ದಾರೆ!

'ಕ್ರಾಂತಿ ಕಲ್ಯಾಣ' ಆರು ಸಂಪುಟಗಳ ದೊಡ್ಡ ಮಾಲೆ. ಈ ಮಾಲೆಯ ಮೊದಲ ಹೂ 'ಉದಯ ರವಿ'. ಮುಂದಿನವು-'ರಾಜ್ಯಪಾಲ' 'ಕಲ್ಯಾಣೇಶ್ವರ,' 'ನಾಗಬಂಧ' ಮುಗಿಯದ ಕನಸು'. ಕೊನೆಯದೇ 'ಕ್ರಾಂತಿ ಕಲ್ಯಾಣ'.

ಶತಶತಮಾನಗಳ ಧರ್ಮಾಂಧತೆಗೆ, ಸಾಮಾಜಿಕ 'ಸೂತಕ'ಕ್ಕೆ, ಸೋಮಾರಿತನದ ಅನಿಷ್ಟಕ್ಕೆ ಕ್ರಾಂತಿಯ ಕಿಚ್ಚು ಹಚ್ಚಿದ ಮಹಾದಾರ್ಶನಿಕ ಬಸವಣ್ಣನವರ ಬದುಕಿನ ಸುತ್ತ ಹೆಣೆದಿರುವ ಬೃಹತ್ ಚಿತ್ರಣ ಈ ಕಾದಂಬರಿ ಮಾಲೆ. ಪುಟ್ಟಸ್ವಾಮಯ್ಯನವರ ಸಾರಸ್ವತ ತಪಸ್ಸಿನ ಅನುಭಾವ ಧಾರೆಯಂತಿರುವ ಈ ಕಾದಂಬರಿಗೆ ೧೯೬೪-೬೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಬಂದಿದೆ. ಇದು ವಿಚಾರದ ಒರೆಗಲ್ಲಿಗೆ ನಿಲ್ಲುವ ಅಸಾಧರಣ ಕೃತಿ. ಇದರಿಂದ ಕೃತಿಕರ್ತರಿಗೆ ಅತ್ಯಂತ ತೃಪ್ತಿ; ಅಪೂರ್ವ ಕೀರ್ತಿ! ಆ ಕೀರ್ತಿ ಅವರ ಸಾಹಿತ್ಯಸಿದ್ಧಿಗೆ ಕಟ್ಟಿದ ಪಟ್ಟ; ಕನ್ನಡಿಗರಿಂದ ಅಭಿಮಾನದ ಅಭಿಷೇಕ!

ಪುಟ್ಟಸ್ವಾಮಯ್ಯನವರದು ಈಗ ಪೂರ್ಣ ವಿಶ್ರಾಂತ ಜೀವನ. ಆದರೂ ಸದಾ ಗ್ರಂಥಾಧ್ಯಯನ. 'ಪುಸ್ತಕಗಳೆಂದರೆ ಪಂಚಪ್ರಾಣ'.

'ಸ್ವಯಂದರ್ಶನ' ವೊಂದರಲ್ಲಿ ಅವರು ಹೀಗೆ ಬರೆಯುತ್ತಾರೆ :

"ನಿಮ್ಮ ಸಾಹಿತ್ಯ ನಿಮಗೆ ತೃಪ್ತಿ ತಂದಿದೆಯೆ ?"

"ಸಾಹಿತ್ಯ ದೊಡ್ಡ ಮಾತು. ಬರೆದಿದ್ದೆಲ್ಲ ಸಾಹಿತ್ಯವಲ್ಲ. ನಾನು ಕೇವಲ ಬರಹಗಾರ."

" ಇದು ನಿವೃತ್ತರಾಗಬೇಕಾದ ಕಾಲ. ಬರಹದ ಕೆಲಸದಿಂ ನಿವೃತ್ತರಾಗಲು ಯೋಚಿಸಿದ್ದೀರಾ? "

"ಬರೆಯುವದು ನನ್ನ ಚಟ. ವೃತ್ತಿ ಬಿಡಬಹುದು. ನೀವು ಬಿಟ್ಟರೂ ಚಟ ನಿಮ್ಮನ್ನು ಬಿಡುವುದಿಲ್ಲ. ಬರೆಯುವುದು ಸ್ವಲ್ಪವಾದರೂ ಬಿಡುವ ಇಚ್ಛೆಯಿಲ್ಲ."


ಅಹುದು; 'ಬರೆದರೇ ಸಮಾಧಾನ' ಈ ತಾತನಿಗೆ! (ಓದುವ ಅವಕಾಶ ಕನ್ನಡಿಗರಿಗೆ)

ಕನ್ನಡ ಸಾಹಿತ್ಯದ ಈ ಭೀಷ್ಮ ಬೆಂಗಳೂರಿನ ಒಬ್ಬ ರೇಷ್ಮೆ ವ್ಯಾಪಾರಿಯ ಮಗ (ರೇಷ್ಮೆಯಷ್ಟೇ ಸೂಕ್ಷ್ಮ ಪ್ರಜ್ಞೆ!) ತಂದೆಯ ಹೆಸರು ಬಸಪ್ಪ, ತಾಯಿ ಮಲ್ಲಮ್ಮ. ತಂದೆ ನಿಧನರಾದಾಗ ಪುಟ್ಟಸ್ವಾಮಯ್ಯನವರು ಹತ್ತು ವರ್ಷದ ಹುಡುಗ. ಶಾಲೆಯಲ್ಲಿ ಓದಲು ಸಾಧ್ಯವಾದದ್ದು ಒಂಭತ್ತನೆಯ ತರಗತಿಯವರೆಗೆ ಮಾತ್ರ.

ಶಾಲೆಗಿಂತ ಸ್ವಂತ ಕಲಿತುದೇ ಹೆಚ್ಚು. ಆಜನ್ಮ ಪ್ರತಿಭೆಯ ಸಹಾಯ. ಫ್ರೆಂಚ್-ಇಂಗ್ಲೀಷ್ ಭಾಷಾ ಕೃತಿಗಳ ಸ್ನೇಹ. ಹಿಂದಿ, ಬಂಗಾಲಿ, ತೆಲುಗು, ಸಂಸ್ಕೃತ ಭಾಷೆಗಳ ಅಭ್ಯಾಸ. ಪರಿಣಾಮವಾಗಿ ತುಂಬಿಕೊಂಡ ಜ್ಞಾನಕೋಶ! ಇಷ್ಟಾದರೂ ಪುಟ್ಟಸ್ವಾಮಯ್ಯನವರು ಬಹು ಸರಳ! ಮಾತು ವಿರಳ! ಬಟ್ಟೆ ಬರೆಯಲ್ಲಿ ಅಚ್ಚುಕಟ್ಟು. ಶಿಸ್ತಿನ ಜೀವನ. ಪರಿಚಿತರು ಕಂಡಾಗ ಆತ್ಮೀಯ ನಗು. ಸದ್ದು-ಗದ್ದಲದಿಂದ ಸಾಧ್ಯವಾದಷ್ಟು ದೂರ. ಆ ಸದ್ದುಗದ್ದಲವೇ ಹತ್ತಿರ ಬಂದರೆ ನಿರ್ಲಿಪ್ತತೆ!

'ಮಳೆ-ಚಳಿ-ಬೇಸಗೆ' ಗಳ ಎಂಭತ್ತೊಂದು ಹಂಗಾಮುಗಳನ್ನು ಕಂಡ ಮಾಗಿದ ಬದುಕು. ಸಾರ್ಥಕ ಸಾಧನೆಯ ಉತ್ತೀರ್ಣ ಜೀವನ. ಪರಂಪರೆಯ ಆದರ್ಶ ಮತ್ತು ವರ್ತಮಾನದ ಉತ್ಕರ್ಷಗಳ ಉದಾತ್ತ ಸೇತು.

ಪುಟ್ಟಸ್ವಾಮಯ್ಯನವರು ಕನ್ನಡದ ಆಸ್ತಿ. ಕನ್ನಡದ ಹಿರಿ - ಕಿರಿಯರೆಲ್ಲರಿಗೂ ಅವರಲ್ಲಿ ಪ್ರೀತಿ!



ಹಿಂದಿನ ಸಂಚಿಕೆಯುವರೆಗೆ

(ಧರ್ಮ ಪ್ರಸಾರ, ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆ ಯವರು ೧೯೭೩ ಮೇ ೧೪ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ಈ ಲೇಖನ ಮಾಲಿಕೆ ಯಲ್ಲಿ ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ.)

—ಜಗದ್ಗುರು ಮಾತಾಜಿ

ಧಾರಾವಾಹಿ—೧೧

ಅಂದು ಅಗಸ್ಟ 2,1976. ಮನಸ್ಸು ಅತ್ಯಂತ ಆನಂದ ಭರಿತವಾಗಿತ್ತು. ನೀರಭ್ರವಾದ ಆಕಾಶದಲ್ಲಿ, ಹಿತವಾದ ಹೊಂಬಿಸಿಲಿನಲ್ಲಿ ಹಕ್ಕಿಯು ರೆಕ್ಕೆ ಬಿಚ್ಚಿ ಹಗು ರಾದ ಮನದಿಂದ ಹಾರಾಡುವಂತೆ ಹೃದಯ ಸಂತಸದ ಆಗಸದಲ್ಲಿ ಹಕ್ಕಿಯಾಗಿ ಹಾರು ತ್ತಿತ್ತು, ಹಂಸೆಯಾಗಿ ಹರ್ಷದ ಸರಸಿಯಲ್ಲಿ ತೇಲುತ್ತಿತ್ತು. ಏಕೆ? ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಆಮಂತ್ರಣ ಬಂದಕಾರಣ ಅಂದು ಹೋಗಬೇಕಿತ್ತು. ಹಲವಾರು ಕಾರಣಗಳು ಸಮ್ಮಿಶ್ರಗೊಂಡಿದ್ದವು. ಒಂದನೆಯದು, ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ವಚನ ಸಾಹಿತ್ಯದಲ್ಲಿನ ಅನುಭಾವ ಮತ್ತು ತತ್ತ್ವಜ್ಞಾನದ ಪರಿಚಯ ಮಾಡಿಕೊಡಲು ಅವಕಾಶಸಿಕ್ಕುದು. ಎರಡನೆಯದು ಅಲ್ಲಿಯ ಸಂಸ್ಕೃತ ವಿದ್ವಾಂಸರಾದ ಡಾ॥ ರಿಚರ್ಡ್ ಗಾಂಬ್ರಿಚ್‌ರು ವಿಶೇಷವಾಗಿ ನನ್ನನ್ನು ಕಂಡು ಚರ್ಚಿಸ ಬಯಸಿದ್ದು ; ಮೂರನೆಯದು ಅವರೊಪ್ಪಿದರೆ ನನ್ನ ಪಿ ಹೆಚ್. ಡಿ. ಮುಂದುವರಿ ಸಲು ಅರ್ಜಿಸಲ್ಲಿಸಬೇಕಾದುದು. ನಾಲ್ಕನೆಯದು ವಿಶ್ವದಲ್ಲಿ ಅತ್ಯಂತ ಜನಪ್ರಿಯವು, ಗಂಭೀರ ಕೀರ್ತಿ ಪಡೆದುದು, ಜ್ಞಾನದೇಗುಲವೆಂದು ಖ್ಯಾತಿವೆತ್ತುದು ಆದ ಆಕ್ಸ ಫರ್ಡ್ ವಿಶ್ವವಿದ್ಯಾಲಯದ ದರ್ಶನ.

ಆಕ್ಸ್‌ಫರ್ಡಿನಲ್ಲಿ ಅವಕಾಶ ಒದಗಿದರೆ (ಉಳಿದೆಲ್ಲ ಅನುಕೂಲತೆಗಳೊದಗಿದರೆ) ನನ್ನ ಡಾಕ್ಟೊರೇಟ್ ಪ್ರಬಂಧ ಅಲ್ಲಿ ಸಲ್ಲಿಸುವ ಬಯಕೆ ಉತ್ಕಟವಾಗಿತ್ತು. ಅದನ್ನು ಅಲ್ಲಿಯ ಹಲವರು ಭಾರತೀಯರ ಮುಂದೆ ತಿಳಿಸಿದಾಗ ಏನೇನೋ ಕಾರಣ ಹೇಳಿ ನಿರುತ್ಸಾಹ ಉಂಟುಮಾಡಿದ್ದರು. ಒಂದು ದಿನ ಡಾ॥ ಸ್ಟೀವನ್ಸ ಫುಲ್‌ಡರ್ ಮುಂದೆ ಹೇಳಿದಾಗ "ವಂಡರ್‌ಫುಲ್ ಐಡಿಯಾ; ಖಂಡಿತಾ ಮಾಡಿ. ಅದರಿಂದ ಅನೇಕ ಲಾಭಗಳಿವೆ. ಒಂದನೆಯದು ನೀವು ಇಲ್ಲಿ ಹೆಚ್ಚುಕಾಲ ಇರುವಂಥಾಗುವುದೇ ಅಲ್ಲದೆ, ನಿಮ್ಮ ಭಾಷಣ ಕೇಳುವ ಸುಯೋಗ ನಮಗೊದಗುವುದು. ಆಕ್ಸ್‌ಫರ್ಡಿನಲ್ಲಿ

ನೀವಿದ್ದರೂ ವಾರಕ್ಕೊಮ್ಮೆ ವಾರಾಂತ್ಯದಲ್ಲಿ ಬಂದು ಲಂಡನ್‌ನಲ್ಲಿ ಭಾಷಣಗಳನ್ನು ಮಾಡಬಹುದು. ಎರಡನೆಯದಾಗಿ ನಿಮ್ಮ ಧರ್ಮ-ಸಾಹಿತ್ಯಗಳ ಬಗ್ಗೆ ಹೆಚ್ಚಿನ ಅಧ್ಯಯನವಾಗಿಲ್ಲ; ಪಾಶ್ಚಿಮಾತ್ಯರಿಗೆ ಅದರ ತಿಳುವಳಿಕೆ ಬಂದಿಲ್ಲ. ಉತ್ಕೃಷ್ಟ ವಾದ ಒಂದು ಕೃತಿಯನ್ನು ಆಕ್ಸ್‌ಫರ್ಡ್ ಮೂಲಕ ಕೊಟ್ಟರೆ ಅದು ಬಹು ದೊಡ್ಡ ಕೊಡುಗೆಯಾಗುವುದು."

"ನಿಜ, ಆದರೆ ಆಕ್ಸ್‌ಫರ್ಡಿನಲ್ಲಿ ಪ್ರವೇಶ ದೊರಕುವದು ಬಹಳ ಕಷ್ಟವಂತೆ; ಕೆಲವರು ಅಸಾಧ್ಯವೆಂದೇ ಹೇಳಿದರು...."

"ಯಾರು ಹೇಳಿದ್ದು; ನಾನು ಆಕ್ಸ್‌ಫರ್ಡಿನಲ್ಲಿ ಪಿಹೆಚ್.ಡಿ ಮಾಡಿದವನು. ಮುಂದಿನ ವರ್ಷದಿಂದ ಅಧ್ಯಾಪಕನಾಗಿ ವಿಶ್ವವಿದ್ಯಾಲಯಕ್ಕೆ ಸೇರಲು ಆಯ್ಕೆಯಾಗಿ ರುವವನು; ನನಗೆ ಗೊತ್ತಿಲ್ಲವೇ?"

ಅದನ್ನು ಹೇಳಿದ್ದವರು ಓರ್ವ ಭಾರತೀಯ ಸನ್ಯಾಸಿ. ಮಾನವನ ಸಹಜ ಸ್ವಭಾವವೇ ಅದು. ತನಗೆ ಗೊತ್ತಿಲ್ಲದಿರುವುದರ ಬಗ್ಗೆ ಸುಮ್ಮನಿರುವುದು ಬಿಟ್ಟು ಅಧಿಕೃತವಾಗಿ ತಿಳಿದಿರುವೆವೆಂಬಂತೆ ಹೇಳುವುದು.

ಡಾ|| ಸ್ಟೀವನ್ಸ್ ಫುಲ್‌ಡರ್ ಕ್ರಮವನ್ನು ತಿಳಿಸಿ, ಡಾ|| ರಿಚರ್ಡ್ ಗಾಂಬ್ರಿಚ್‌ರು ಒಳ್ಳೆಯ ವಿದ್ವಾಂಸರೆಂದು, ಭಾರತೀಯ ಧರ್ಮಗಳ ಆಳವಾದ ಅಧ್ಯಯನ ಮಾಡಿದವರೆಂದು, ಅವರ ನೇತೃತ್ವದಲ್ಲಿ ಪಿಹೆಚ್.ಡಿ ಮಾಡುವುದು ಒಳಿತೆಂದು ಸೂಚಿಸಿದರು. ಈ ಬಗ್ಗೆ ಡಾ|| ರಿಚರ್ಡ್‌ರಿಗೆ ಬರೆದಾಗ ಅವರು ಆನಂದಭರಿತರಾಗಿ ಮಾರುತ್ತರಿಸಿದ್ದೇ ಅಲ್ಲದೆ ಫೋನ್ ಮುಖಾಂತರ ಮಾತನಾಡಿ ಆಮಂತ್ರಿಸಿದರು. ಅವರ ಸರಳತೆ ಕಂಡು ಆಗಲೇ ಅಚ್ಚರಿ ಎನಿಸಿತು. ಆಕ್ಸ್‌ಫರ್ಡಿನಂಥ ವಿಖ್ಯಾತ ವಿಶ್ವವಿದ್ಯಾಲಯದಲ್ಲಿ ಉಚ್ಚ ಸ್ಥಾನದಲ್ಲಿರುವ ಪ್ರಾಚಾರ್ಯರೋರ್ವರು ದೂರವಾಣಿ ಮುಖಾಂತರ ತಾವಾಗಿ ಮಾತನಾಡುವುದೆಂದರೇನು!

ಹೀಗೆ ಸಮ್ಮಿಶ್ರಭಾವದಿಂದ ಸಂತಸ ಭರಿತನಾಗಿದ್ದ ನಾನು ಹೊರಟೆ. ನಾನು ಇದ್ದ ಟನ್‌ಮೌತ್ ರಸ್ತೆಗೆ ಸನಿಹದ ವಿಲ್ಲಸ್‌ಡನ್ ಗ್ರೀನ್ ಭೂಗರ್ಭರೇಲ್ವೆ ಮೂಲಕ ಪ್ಯಾಡಿಂಗ್‌ಟನ್ ಬೃಹತ್ ಜಂಕ್ಷನ್‌ಗೆ ಹೋಗಿ ಅಲ್ಲಿಂದ ಸರ್‌ಫೇಸ್ ರೇಲ್ವೆ ಹಿಡಿಯ ಬೇಕಿತ್ತು. ಆಕ್ಸ್‌ಫರ್ಡಿಗೆ ಗಾಡಿ ಸಿದ್ಧವಾಗಿ ನಿಂತಿತ್ತು. ಮೊಟ್ಟ ಮೊದಲಬಾರಿಗೆ ಲಂಡನ್ ನಗರದ ಗದ್ದಲದ ವಲಯ ಬಿಟ್ಟು ಹೊರಗೆ ಹೋಗಲವಕಾಶ ಸಿಕ್ಕಿತ್ತು. ಇಸೆಕ್ಸ್, ಸಸೆಕ್ಸ್ ಮುಂತಾದ ಭಾಗಗಳಿಗೆ ಹೋಗಿದ್ದರೂ ಅವು ಬೃಹತ್ ಲಂಡನ್ನಿಗೆ ಅಂಟಿಕೊಂಡೇ ಇದ್ದುದರಿಂದ ನೈಸರ್ಗಿಕ ಚೆಲುವನ್ನು ಕಳೆದುಕೊಂಡಿದ್ದವು. ನೂರಾರು

ಎಕರೆ ಉಳುಮೆ ಮಾಡಿದ ಸಮಮಟ್ಟದ ಭೂಮಿ. ಎಲ್ಲಿ ನೋಡಿದರೂ ಹಚ್ಚ ಹಸಿರು. ಆಗಾಗ ಇದಿರಾಗುವ ಸಣ್ಣ ಪುಟ್ಟ ಹಸಿರು ಹೊದ್ದಿಸಿದ ಗುಡ್ಡಗಳು. ರೇಲ್ವೆಗಾಡಿಯೂ ಸಹ ಅಷ್ಟೇ ಗಂಭೀರತೆ, ಶ್ರೀಮಂತಿಕೆಯಿಂದ ಕೂಡಿತ್ತು. ಮೆತ್ತನೆಯ ಸೋಫಾ. ಆತಂಕವಿಲ್ಲದೆ ಕುಳಿತುಕೊಳ್ಳಬಹುದಾದ ಜಾಗ. ಜನ ಮಾತನಾಡಿಕೊಂಡರೂ ಇನ್ನೊಬ್ಬರಿಗೆ ತೊಂದರೆಯಾಗದಂತೆ ಪಿಸುಗುಟ್ಟುವ ಸೌಜನ್ಯ. ರೇಲ್ವೆಯ ಪ್ರತಿಯೊಂದು ಬೋಗಿಗೂ ಸಂಬಂಧ. ಒಳಗಿಂದೊಳಗೇ ಓಡಾಡಬಹುದಾಗಿತ್ತು. ಒಂದರಲ್ಲಿ ತಿಂಡಿತೀರ್ಥಗಳ ವ್ಯವಸ್ಥೆ.

ಅಷ್ಟರಲ್ಲಿ ಟಿಕೆಟ್ ತಪಾಸಿಸುವ ತನಿಖಾಧಿಕಾರಿ ಬಂದ. ನನ್ನೆದುರು ಕೂತ ಓರ್ವಳು: "ಕ್ಷಮಿಸಿ ಸರ್, ಪ್ಲಾಟ್‌ಫಾರ್ಮನ ಮೇಲೆ ಗಾಡಿ ಸಿದ್ಧವಾಗಿ ನಿಂತಿತ್ತು. ಟಿಕೆಟ್ ಪಡೆಯದೆ ಬಂದೆ...." ಹಣ ಪಡೆದು ರಸೀತಿ ಕೊಟ್ಟ. ನನಗಾಗಲೇ ಗಾಬರಿಯಾಗ ತೊಡಗಿತ್ತು "ಆ ಬಡಪಾಯಿ ಎಷ್ಟು ದಂಡ ತೆರಬೇಕಾಗುವುದೋ" ಎಂದು. ಏನಿಲ್ಲ, ಅಷ್ಟೇ ಪಡೆದುಕೊಂಡ. "ನಾವು ಮನುಷ್ಯರನ್ನು ನಂಬುತ್ತೇವೆ" ಇದು ಅವರು ನೀಡುವ ಉತ್ತರ. ನಮ್ಮಲ್ಲಿ ಮನುಷ್ಯರನ್ನು ಯೋಗ್ಯಾಯೋಗ್ಯತೆ ಅಳೆಯದೆ ದಂಡ ಕಟ್ಟುವ ವಿಧಾನ. ಒಮ್ಮೆ, ಈಗ ಹತ್ತು ವರ್ಷದ ಹಿಂದಿನ ಮಾತು, ದ್ವಿತೀಯ ದರ್ಜೆಯಲ್ಲಿ ಕುಳಿತು ಪಯಣಿಸುವಾಗ ಓರ್ವ ಸಾಮಾನು ಹೊತ್ತು ಗಾಬರಿಗೊಂಡು ಬಂದ. ನಿಲ್ದಾಣದಲ್ಲಿ ಅಲ್ಪಕಾಲಮಾತ್ರ ನಿಲ್ಲುವ ಗಾಡಿ ಹೊರಟಾಗ ಅವನು ತನ್ನ ಸಾಮಾನು ದ್ವಿತೀಯ ದರ್ಜೆಯಲ್ಲಿ ತುರುಕಿ ಒಳಗೆ ಸೇರಿದ. ಬಂದನಷ್ಟರಲ್ಲಿ ಯಮಧರ್ಮಾಕಾರದ ಟಿ.ಸಿ. "ಮೂರನೇ ದರ್ಜೆ ಟಿಕೆಟ್; ಇಲ್ಲೇಕೆ ಹತ್ತಿದೆ" ಗದರಿಸಿದ. "ಸರ್, ಗಾಡಿ ಹೊರಡುವ ಆತುರ. ನನಗೆ ಗೊತ್ತು. ಮುಂದಿನ ಸ್ಟೇಷನ್‌ನಲ್ಲಿ ಬದಲಿಸುವೆ....ಕ್ಷಮಿಸಿ...." ಎಷ್ಟು ಗೋಗರೆದರೂ ಬಿಡದೆ ದಂಡ ಹಾಕಿದ ಟಿ.ಸಿ. ಅಷ್ಟು ಹಣವಿಲ್ಲದೆ ಆ ವ್ಯಕ್ತಿ ದುಃಖ, ಅಪಮಾನ, ನಾಚಿಕೆಗಳಿಂದ ಹಿಡಿ ಮುದ್ದೆಯಾಗಿದ್ದ. ಉದ್ದೇಶಪೂರ್ವಕವಾಗಿ ಮಾಡುವ ತಪ್ಪು ಅಪರಾಧವಾದರೆ ಅಜ್ಞಾನದಿಂದ ಅಥವಾ ಅನಿವಾರ್ಯವಾಗಿ ವರ್ತನೆ ಮಾಡುವುದು ಹೇಗೆ ದಂಡನಾರ್ಹವಾದೀತು? ಆ ದೇಶದ ನಿಲ್ದಾಣಗಳಲ್ಲಿ ಒಂದು ವಿಭಾಗವಿರುತ್ತದೆ "Excess Fare" ಎಂದು. ಜನರು ಮರೆತು ಕಡಿಮೆ ಟಿಕೆಟ್ ಪಡೆದಿದ್ದರೆ, ಅಥವಾ ತಮ್ಮ ಪ್ರಯಾಣ ಕಾರಣಾಂತರದಿಂದ ಮುಂದುವರಿಸಿದರೆ, ಇಳಿದಾಗ ಆ ವಿಭಾಗಕ್ಕೆ ಹೋಗಿ ಹಣ ಸಲ್ಲಿಸುವರು. "ಇಂಥದರಲ್ಲಿ ಕಳವು ಮಾಡಿ ರಾಷ್ಟ್ರ ದ್ರೋಹ ಮಾಡುವ ನೀಚರಲ್ಲ" ಎಂದು ಜನರಾಡಿದರೆ: "ನಾವು ಮನುಷ್ಯರನ್ನು ನಂಬುತ್ತೇವೆ" ಎಂದು ಅಧಿಕಾರಿಗಳು ಅನ್ನುತ್ತಾರೆ. ಇಂಥಾ ಜನತಾ ಪ್ರಜ್ಞೆ, ಅಧಿಕಾರಾರೂಢರಲ್ಲಿರುವ ಸೌಜನ್ಯ-ಎರಡೂ ಆ ನಾಡಿನ ಮಹತ್ತರ ಗುಣಗಳು.

ಪ್ರಕೃತಿ ಸೌಂದರ್ಯ, ಪರಿಸರ ವಿಭಿನ್ನತೆ, ಜನರ ನಡೆ ನುಡಿ ಎಲ್ಲವನ್ನು ಗಮನಿಸುತ್ತ ನನ್ನ ಪ್ರಯಾಣಸಾಗಿತು. ಆಕ್ಸ್‌ಫರ್ಡ್ ನಿಲ್ದಾಣದಲ್ಲಿಳಿದು ವಿಶ್ವವಿದ್ಯಾಲಯದೆಡೆಗೆ ಸಾಗಲು ಟ್ಯಾಕ್ಸಿ ಹಿಡಿದೆ. ವಿಳಾಸ ಪಡೆದು ಟ್ಯಾಕ್ಸಿಯವನು ಕರೆದೊಯ್ದ. ಕೆಲವೇ ನಿಮಿಷಗಳಲ್ಲಿ ಗುರಿ ಸೇರಿದಾಗ ತುಂಬಾ ಪರಿತಾಪವಾಯಿತು. ಏಕೆಂದರೆ ನಾನು ತಲ್ಪಲಿದ್ದ ನಿಲ್ದಾಣ ಅಷ್ಟೊಂದು ಸನಿಹದಲ್ಲಿತ್ತು. ಕನಿಷ್ಠದರ ನೀಡಿ ಇಳಿದೆ. ಒಡನೆಯೇ ಸಂತೋಷವಾಯಿತು ಒಂದು ವಿಷಯದ ಬಗ್ಗೆ. "ನಾವು ಆ ನಾಡಿಗೆ ಅಪರಿಚಿತರು" ಎಂದು ತಿಳಿದೂ ವಾಹನ ಚಾಲಕರು ಮೋಸ ಮಾಡರು. ಮತ್ತು ಸನಿಹದ ತಾಣ ಎಂದು ಬರಲು ನಿರಾಕರಿಸರು. ಟ್ಯಾಕ್ಷಿ ಕ್ಯೂನಲ್ಲಿ ನಿಂತಿರುವವು. ಜನರೂ ಕ್ಯೂನಲ್ಲಿ ನಿಲ್ಲುವರು. ಗೊಣಗದೆ, ಎರಡಾಡದೆ ಅವರ ಪಾಲಿಗೊದಗಿದ ಜಾಗಗಳಿಗೆ ವಾಹನ ಓಡಿಸುವರು. ನಮ್ಮಲ್ಲಿ ಸಾಮಾನ್ಯವಾಗಿ ಈ ಎರಡೂ ವೈಶಿಷ್ಟ್ಯ ಪೂರ್ಣ. ನನಗಿನ್ನೂ ಹಸಿರಾಗಿ ನೆನಪಿದೆ; ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬಂದ ಓರ್ವನನ್ನು ರೇಲ್ವೆ ನಿಲ್ದಾಣದಿಂದ ತೋಟದಪ್ಪ ಛತ್ರಕ್ಕೆ ಕರೆದೊಯ್ಯಲು ರಿಕ್ಷಾದವನು 5 ರೂಪಾಯಿಗೆ ಮೀಟರ್ ಓಡುವಷ್ಟು ಸುತ್ತಿಸಿದ್ದು. ಒಮ್ಮೆ ಓರ್ವರು ಆಗ್ರಾಕ್ಕೆ ಹೋಗಿ ತಾಜಮಹಾಲದ ಮಾಡಲ್ ಒಂದು ಕೊಂಡರು. ಓರ್ವ ವಿದೇಶೀ ಮಹಿಳೆಯೂ ಸಹ. ಆಗ್ರಾದಿಂದ ಇತ್ತ ಪ್ರಯಾಣಿಸುವಾಗ ಆಕೆ ಕೇಳಿದಳು "ಎಲ್ಲಿ ಕೊಂಡಿರಿ, ಎಷ್ಟು ಕೊಟ್ಟಿರಿ?" "ಆಗ್ರಾದಲ್ಲಿ, ೧೫ ರೂಪಾಯಿಗೆ." ಚಕಿತಳಾದ ಆಕೆ ನುಡಿದಳು, "Dirty people" ನನಗೆ ಮೋಸ ಮಾಡಿದರು. ನನ್ನಿಂದ 30 ಪಡೆದರು." ಆ ದೇಶಗಳ ಸ್ವಭಾವದಂತೆ ಚೌಕಾಶಿ ಮಾಡದೆ ಕೊಂಡರೆ ಟೋಪಿ ಹಾಕಿಸಿಕೊಂಡಂತೆಯೇ! ಅದೇ ರೀತಿ ನಮ್ಮ ಜಾಡ್ಯವಾದ ಚೌಕಾಶಿಯನ್ನು ಆ ದೇಶಗಳಲ್ಲಿ ಮಾಡಿದರೆ ಕ್ಷುಲ್ಲಕ ಜನ ನಾವೆಂಬ ಬಿರುದು ಕಟ್ಟಿಟ್ಟದ್ದು. ತಿರಸ್ಕಾರದ ದೃಷ್ಟಿ, ಇವರ ಮೇಲೆ ಬಿದ್ದಂತೆಯೇ! 'ಅರ್ಧಕಾಣಿಯಗೆಲ್ಲ, ಒಂದು ಕಾಣಿಯ ಸೋಲ' ಎಂಬ ಜಾಣ ಜನ ಅವರು. ಇದು ಒಂದು ಜನಾಂಗ ಪ್ರೌಢ ಮತ್ತು ಗಂಭೀರ ಮಟ್ಟದಲ್ಲಿ ಬೆಳೆದುದರ ದ್ಯೋತಕ.

ಕೆಲವೊಮ್ಮೆ ಇಂಥ ಕಟ್ಟುನಿಟ್ಟು ತುಂಬಾ ವಿಲಕ್ಷಣವೆನಿಸದಿರದು. ಭಾರತದ ಡಾಕ್ಟರೊಬ್ಬ ಇಂಗ್ಲೆಂಡಿಗೆ ಹೋಗಿ, ಅಲ್ಲಿಯ ಸ್ತ್ರೀಯನ್ನು ಮದುವೆಯಾಗಿ, ಮಕ್ಕಳನ್ನು ಪಡೆದು ಅಲ್ಲೇ ನೆಲೆಸಿದ್ದರು. ಉತ್ತರ ಪ್ರದೇಶದ ಡಾ|| ಶಿವಕುಮಾರ್ ಬಹುಕಾಲದ ಬಳಿಕ ಆ ನಾಡಿಗೆ ಹೋದರು. ಆ ದೇಶಕ್ಕೆ ಹೋಗುತ್ತಿದ್ದಂತೆಯೇ ತಮ್ಮ ವೈದ್ಯ ಮಿತ್ರರನ್ನು ಕಾಣಲು ಎರಡುನೂರು ಮೈಲಿ ಲಂಡನ್‌ದಿಂದ ಪಯಣಿಸಿದರು. ಆಗ ಮಧ್ಯಾಹ್ನ 2 ಗಂಟೆ. ಆತಿಥೇಯ ಗೃಹಿಣಿ ಹೇಳಿದಳಂತೆ, "ಇನ್ನೊಂದು ಗಂಟೆಯಲ್ಲಿ ನಮ್ಮ ಟೀ ಟೈಮ್. ದಯಮಾಡಿ ಕಾಯಿರಿ. ನಿಮಗೆ ಟೀ ಕೊಡುತ್ತೇವೆ....." ಇವರಿನ್ನೂ ಭಾರತೀಯ "ಅತಿಥಿ ಸತ್ಕಾರ" ಸಂಸ್ಕಾರದಲ್ಲೇ ಸೇರಿ

ಬಿಟ್ಟಿದ್ದವರು. "ಇವಳ ಟೀ ಗಾಗಿ ನಾನು ಬಂದೆನೇನೋ" ಎಂದು ಬೇಸರ ಪಟ್ಟರೂ ತಡೆದುಕೊಂಡು "ಥ್ಯಾಂಕ್ಸ್" ಎಂದರು. ಆಕೆ ಅಂದಳು : "ಇಂದು ರಾತ್ರಿಗೆ ಉಳಿಯುವಿರಾ ? ನಿಮಗೆ ಎಷ್ಟು ಚಪಾತಿ ಬೇಕು. ಎರಡೋ ಮೂರೋ ? ಕಮ್ಮಿಯಾದರೆ ನಿಮಗೆ ಬೇಸರ. ಜಾಸ್ತಿಯಾದರೆ ನಮಗೆ ವೇಸ್ಟ್...." ಬಹಳ ಸಿಟ್ಟು ತರಿಸಿತಂತೆ ಈ ಮಾತು. " ನನಗೇನೂ ಬೇಡ, ಕೇವಲ ನೋಡಲು ಬಂದಿದ್ದೆ " ಎಂದು ಹೊರಟೇ ಬಿಟ್ಟರಂತೆ. ಇಂಥಾ ಮಾತು ನಮ್ಮವರಿಗೆ ಬಹು ಕೃತಕ. ಬೇಡವಾದ ಅತಿಥಿಗಳಿದ್ದರೂ ಬಾಯುಪಚಾರ ಮಾಡಿ ಊಟಕ್ಕೆ ನೀಡಿ ಸೈ ಅನ್ನಿಸಿಕೊಳ್ಳಲೆಚ್ಚಿಸುವುದು ನಮ್ಮ ಜನರ ಹಿರಿಮೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಎಂದರೆ ಏನೋ ಕನಸು ಕಟ್ಟಿದ್ದೆ. ಬೃಹತ್ತಾದ ಗಗನಚುಂಬಿ ಕಟ್ಟಡಗಳಿಂದ ಕೂಡಿದ ವಲಯ, ಗೆರೆ ಕೊರೆದಂತಹ ನೇರ ರಸ್ತೆ, ಇನ್ನೂ ಏನೇನೋ! ಸಾಮಾನ್ಯವಾಗಿ ಅಲ್ಲಿ ಕಟ್ಟುವ ಭವನಗಳು ದೊಡ್ಡವೇ ಆದರೂ ನಾನು ನಿರೀಕ್ಷಿಸಿದ್ದ, ನಮ್ಮ ವಿಧಾನ ಸೌಧ ಅಥವಾ ಕರ್ನಾಟಕ ವಿಶ್ವವಿದ್ಯಾಲಯದಂತಹ ಭವನಗಳಿರಲಿಲ್ಲ. ಓರಿಯಂಟಲ್ ಸಂಸ್ಥೆಯು ಸುತ್ತಮುತ್ತೆಲ್ಲ ಕಿರಿದಾದ, ಅಂಕು ಡೊಂಕಾದ ರಸ್ತೆಗಳು. ಧಾರವಾಡ ನಗರದ ಸಪ್ತಾಪುರ ಬಡಾವಣೆಯ ನೆನಪು ತರುವ ರಸ್ತೆಗಳು, ಮರಗಳ ಸಾಲು. ಆಶ್ಚರ್ಯ ಸಮನಿಸಿತು.

ಪ್ಯುಸೆ ಲೇನ್‌ನಲ್ಲಿರುವ ಓರಿಯಂಟಲ್ ಸಂಸ್ಥೆಯ ಬಾಗಿಲಿಗೆ ಬಂದೆ. ತೂಕವಾದ ಪಾರದರ್ಶಕ ಗಾಜಿನ ಬಾಗಿಲು ದೂಡುತ್ತಿದ್ದಂತೆಯೇ ಸದ್ದಿಲ್ಲದೆ ತೆರೆಯಿತು. ರಿಸೆಪ್ಷನಿಸ್ಟ ಕಂಡು ಮುಗುಳ್ನಕ್ಕು "ತಾವು ಗಾಂಬ್ರಿಚ್‌ರನ್ನು ಕಾಣಬೇಕಲ್ಲವೆ? ಹೇಳಿದ್ದಾರೆ. ಸುದ್ಧಿ ಮುಟ್ಟಿಸುವೆ...." ಇಂಟರ್‌ಕಮ್ ಟೆಲಿಫೋನ್ ಮೂಲಕ ಮಾತನಾಡಿ, "ಅವರು ಸಿದ್ಧವಿದ್ದಾರೆ. ಹೀಗೆ ಹೋಗಿ...." ಪ್ರತಿಯೊಂದೂ ಅಚ್ಚುಕಟ್ಟು. ಮೇಲಂತಸ್ತಿಗೆ ಹೋಗುವ ಮಾರ್ಗದರ್ಶಕ ಚಿತ್ರವನ್ನು ಕೊಟ್ಟಳು. ನಿಶ್ಶಬ್ಧ, ನೀರವತೆ. ಒಂದು ಧೂಳೀಕಣ ಕಾಣದ ಸ್ವಚ್ಛತೆ. ಆ ದೇಶದಲ್ಲಿ, ಅಲ್ಲಿಯ ಕಾಲೇಜುಗಳಲ್ಲಿ ಜನರಿರುವರೋ ಇಲ್ಲವೋ ಎಂಬ ಸಂದೇಹ ಹುಟ್ಟಿಸುವ ಗಭೀರ ಮೌನ. ನಮ್ಮಲ್ಲೋ ಎಲ್ಲೆಲ್ಲೂ ಪಿತಿಪಿತಿ ಎಂಬಷ್ಟು ಜನ. ಟ್ರೇನ್, ಬಸ್ಸು, ರಸ್ತೆ, ಹೋಟೆಲು, ಕಾಲೇಜು–ಎಲ್ಲೆಡೆ ಆಸ್ಫೋಟಿಸುವಷ್ಟು ಜನದಟ್ಟಣೆ. ಅದರಲ್ಲೂ ನಮ್ಮ ವಿದ್ಯಾರ್ಥಿ ವೃಂದ ಅಲ್ಲಲ್ಲೇ ಗುಂಪುಗೂಡಿಕೊಂಡು ನಿಂತು, ಹೋಗಿ ಬರುವ ಹೆಂಗೆಳೆಯರನ್ನು ಚುಡಾಯಿಸುತ್ತ ಇದ್ದರೆ, ಬೋರ್ಡ್ ಇಲ್ಲದೆಯೂ ಅದು "ಕಾಲೇಜು" ಎಂದು ಗುರುತಿಸಬಹುದು. ಅಲ್ಲೊಂದು ವಿಚಿತ್ರ; ಸಾಮಾನ್ಯವಾಗಿ ಸ್ವಾಭಾವಿಕವಾದರೂ ತರುಣ–ತರುಣಿಯರು ಜೋಡಿಜೋಡಿಯಾಗಿ ಸಾಗುವ ದೃಶ್ಯ ಸ್ವಾಭಾವಿಕವಾದರೂ ಚುಡಾಯಿಸುವ, ಹೆಣ್ಣು ಮಕ್ಕಳನ್ನು ಕೆಣಕುವ, ಬೆನ್ನು ಹತ್ತಿ ತಿರುಗುವ ಹವ್ಯಾಸ ಅಲ್ಲಿಲ್ಲ.

ಮಾರ್ಗಸೂಚಿಯ ಸಹಾಯದಿಂದ ಹೋಗಿ ಕೋಣೆಯ ಬಳಿ ಬರುತ್ತಿದ್ದಂತೆಯೇ ಕರವೆತ್ತಿ ಕೈಮುಗಿದ ಸಂಸ್ಕೃತ ಪ್ರಾಧ್ಯಾಪಕ ಡಾ|| ಗಾಂಬ್ರಿಚ್ "ವಿದ್ಯಾ ದದಾತಿ ವಿನಯಂ" ಎಂಬ ಉಕ್ತಿಗೆ ಜೀವಂತ ಸಾಕ್ಷಿಯಾಗಿ ನಿಂತಿದ್ದರು. ಆಗ ಸರಿಯಾಗಿ ೧೧-೩೦. ಒಂದು ನಿಮಿಷ ಸಹ ವ್ಯತ್ಯಾಸವಿಲ್ಲದೆ ಬಂದಿದ್ದೀರಿ, ಸಂತೋಷ...." ಹಾರ್ದಿಕವಾಗಿ ಕರೆದೊಯ್ದರು. ಭಾರತೀಯ ತತ್ತ್ವಶಾಸ್ತ್ರ ಮತ್ತು ಸಂಸ್ಕೃತದಲ್ಲಿ ಆಳವಾದ ಪಾಂಡಿತ್ಯವವರದು.

"ನನಗೆ ವಚನ ಸಾಹಿತ್ಯ ತುಂಬ ಹಿಡಿಸಿದೆ. ವಿಶ್ವಸಾಹಿತ್ಯಕ್ಕೆ ಅದು ವೈಶಿಷ್ಟ್ಯಪೂರ್ಣ ಕೊಡುಗೆ."

"ನೀವು ಅದರ ಬಗ್ಗೆ ತಿಳಿದಿರುವಿರಾ?" ಅಚ್ಚರಿಯಿಂದ ಕೇಳಿದೆ.

"ಓಹೋ, ಎ. ಕೆ. ರಾಮಾನುಜಂರವರ Speaking of Shiva ಓದಿರುವೆ. ಹೃದಯ ಸ್ಪರ್ಶಿ, ಅನುಭವ ಪ್ರಧಾನ ಸಾಹಿತ್ಯ ವಚನ ಸಾಹಿತ್ಯ. ಆ ಕೃತಿ ಓದಿದಾಗ ನನ್ನ ಕುತೂಹಲ ತುಂಬ ಕೆರಳಿತು. ಇನ್ನೂ ಹೆಚ್ಚಿನ ಸಾಹಿತ್ಯ ಹೊರಬಂದೀತೇನೋ ಎಂದು ಕಾಯುತ್ತಿರುವೆ...." ಆ ಜನರ ಬೌದ್ಧಿಕ ಪ್ರಾಮಾಣಿಕತೆ, ವಿಶಾಲ ದೃಷ್ಟಿ, ಸಾಹಿತ್ಯಾಕಾಂಕ್ಷೆ ಕುರಿತು ಮೆಚ್ಚುಗೆಯಾಗದಿರಲಿಲ್ಲ. ಸಾಮಾನ್ಯವಾಗಿ ನಾವು ಎಲ್ಲ ಸಾಹಿತ್ಯವನ್ನು ಮತದ ಚೌಕಟ್ಟಿಗೆ ಸಿಕ್ಕಿಸಿ ತಿರಸ್ಕರಿಸುವುದು ಸ್ವಭಾವ ಸಿದ್ಧವಾಗಿ ಬಂದಿದೆ. ಹೀಗಾಗಿ ಬುದ್ಧ, ಬಸವಣ್ಣನಂತಹವರು ಕೊಡುವ ಅಮೃತಮಯ ಸಂದೇಶ ಸಹ ವಿಷವಾಗಿ ತೋರುವುದು ಕೆಲವರ ದೃಷ್ಟಿಗೆ.

"ನನಗೆ ಈ ದಿಶೆಯಲ್ಲಿ ಹೆಚ್ಚಿನ ಅಧ್ಯಯನ ಮಾಡುವ ಬಯಕೆ...." ನಾನಂದೆ.

"ಬಹಳ ಸಂತೋಷ...."

ಹನ್ನೆರಡು ಗಂಟೆಗೆ ಅವರ ಕೈಕೆಳಗೆ ಸಂಶೋಧನೆ ಮಾಡುವ ವಿದ್ಯಾರ್ಥಿಗಳು ಮತ್ತು ಅದೇ ವಿಭಾಗದ ಸಹೋದ್ಯೋಗಿಗಳು ಸಮಾವೇಶವಾದರು. "ವಚನ ಸಾಹಿತ್ಯದಲ್ಲಿ ತತ್ತ್ವ ಮತ್ತು ಅನುಭಾವ" ಎಂಬ ವಿಷಯವಾಗಿ ಒಂದು ಗಂಟೆಯವರೆಗೆ ಭಾಷಣ ಮಾಡಿದೆ. ಒಂದೂವರೆಯ ತನಕ ಚರ್ಚೆ ನಡೆಯಿತು. ಕೇಳುಗರು,

"ಡಾ|| ರಿಚರ್ಡ್ ಇವರಿಗೆ, ಇಲ್ಲಿಯೇ ಪಿಹೆಚ್.ಡಿ. ಮಾಡಲು ವಿನಂತಿಸಬಯಸುತ್ತೇವೆ. ನಮಗೊಂದು ವಿಶೇಷ ಅಧ್ಯಯನಕ್ಕೆ ಅವಕಾಶವಾಗುತ್ತದೆ. ನಮ್ಮ ಸಾಹಿತ್ಯ ಮತ್ತು ತತ್ತ್ವಜ್ಞಾನ ಪ್ರಪಂಚಕ್ಕೆ ನೂತನ ದ್ರವ್ಯ ಸಿಕ್ಕಂತಾಗುತ್ತದೆ...." ಎಂದರು.

"ನಿಮ್ಮ ಸಹೃದಯತೆಗೆ ಚಿರಋಣಿ...." ನಾನು ಕೃತಜ್ಞತೆ ಸಲ್ಲಿಸಿದೆ.

ಡಾ|| ರಿಚರ್ಡ್‌ರು ಉಲ್ಫ್‌ಸನ್ ಕಾಲೇಜನ್ನು ತೋರಿಸಲು ಕರೆದೊಯ್ದರು. ಇದು ಚೆರ್‌ವೆಲ್ ನದಿಯ ದಂಡೆಗಿದೆ ಮತ್ತು ಬೃಹದಾಕಾರದಲ್ಲಿದೆ. ಈ ಕಾಲೇಜಿಗೊಂದು ಸುಂದರ ಮೆಸ್ಸಿದೆ. ಅದರ ಬಿಸಿಲು ಮಹಡಿಯೂ ಅಷ್ಟೇ ಭವ್ಯ. ಬಿಸಿಲು ಮಹಡಿಯಲ್ಲಿ ಅಂದವಾಗಿ ಜೋಡಿಸಿರುವ ಕುರ್ಚಿ - ಬೆಂಚುಗಳ ಮೇಲೆ ಕುಳಿತರೆ

ಇದಿರಲ್ಲೇ ಹಸಿರು ವನ, ಮಧ್ಯದಲ್ಲಿ ಸರೋವರವಾಗಿ ನಿರ್ಮಿತವಾಗಿರುವ ನದಿ. ಬಗೆಬಗೆಯ ಗುಲಾಬಿಗಳಿಂದ ನಗುವ ವನ. ಪರಿಸರವನ್ನು ಬಳಸಿರುವ ನೀರವತೆ, ಭವ್ಯತೆಗಳು ಉಪನಿಷತ್ ಕರ್ತೃಗಳು ವಾಸಿಸುವ ಋಷಿಧಾಮಗಳನ್ನು, ಗುರುಕುಲಗಳನ್ನು ನೆನಪಿಗೆ ತರುವುವು. ಇಲ್ಲಿ, ಓಡಾಡುವಾಗಿನ ಬೂಟಿನ ಕಿರ್‌ಕಿರ್ ಶಬ್ದವಾಗಲೀ, ಕಾಲಿನ ಧಪ್‌ಧಪ್ ಎಸೆತವಾಗಲೀ, ನಗು ಕೇಕೆ ಹರಟೆಗಳು ನಿಷಿದ್ಧ.

ಆಕ್ಸ್‌ಫರ್ಡ್ ರಸ್ತೆಗಳು ಹಿಂದಿನ ಲಕ್ಷಣಗಳನ್ನೇ ಉಳಿಸಿಕೊಂಡಂತೆ, ವಿಶ್ವವಿದ್ಯಾಲಯವೂ ಹಿಂದಿನ ಭವ್ಯತೆ ಉಳಿಸಿಕೊಂಡಿದೆ. ನಾನು ಕೇಳಿದೆ, "ಇದೇನು ಲಂಡನ್‌ನಗರ ನೇರ ಮತ್ತು ವಿಶಾಲ ರಸ್ತೆಗಳಿಂದ ಶೋಭಿಸುತ್ತಿದೆ, ವಿಶ್ವವಿಖ್ಯಾತ ಆಕ್ಸ್‌ಫರ್ಡ್ ಹೀಗಿದೆ?

"ಉದ್ದೇಶ ಪೂರ್ವಕವಾಗಿ ಉಳಿಸಿಕೊಳ್ಳಲಾಗಿದೆ ಹಳೆತನವನ್ನು. ಹಿಂದಿನ ಇಂಗ್ಲೆಂಡ್ ಹೇಗಿತ್ತು ಎಂಬುದನ್ನು ತೋರಿಸಲು ಇದು ಸಾಕ್ಷಿ...." ವಿಶ್ವವಿದ್ಯಾಲಯದ ಪದ್ಧತಿಯೂ ಸಂಪೂರ್ಣ ಭಿನ್ನ. ವಿಕೇಂದ್ರೀಕರಣಗೊಂಡ ಕಾಲೇಜುಗಳ ಗುಂಪು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ. ಇದಕ್ಕೆ ಪ್ರವೇಶಿಸಬಯಸುವವನು ತನ್ನ ಹೆಸರನ್ನು ವಿಶ್ವವಿದ್ಯಾಲಯದಲ್ಲಿ ಹಚ್ಚಿದರೂ ಅಭ್ಯಸಿಸುವುದು ಕಾಲೇಜಿನಲ್ಲೇ. ಆದ್ದರಿಂದ ತನಗಿಷ್ಟವಾದ ಕಾಲೇಜಿನ ಹೆಸರನ್ನು ಕಾಣಿಸಬೇಕು. ಪಿಹೆಚ್.ಡಿ. ಮಾಡುವವರು ತಮಗೆ ಬೇಕಾದ ಮಾರ್ಗದರ್ಶಕರು ಪ್ರಾಧ್ಯಾಪಕರಾಗಿರುವ ಕಾಲೇಜಿನಲ್ಲಿ ಹೆಸರು ಸೇರಿಸಬೇಕು; ಮತ್ತು ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯಲ್ಲೂ. ಅನುಕೂಲತೆಗಳು ಬಹಳ. ಸಾಮೂಹಿಕ ವಿದ್ಯಾರ್ಥಿನಿಲಯದಲ್ಲಿರಬಹುದು ಅಥವಾ ಒಬ್ಬೊಬ್ಬರಿಗೇ ಕೋಣೆ ಬೇಕೆಂದರೆ ಅದಕ್ಕೂ ಅವಕಾಶ. ಮದುವೆಯಾದ ವಿದ್ಯಾರ್ಥಿಗಳಿಗೆ ಡಬ್ಬಲ್ ರೂಮ್, ಮಕ್ಕಳಿದ್ದವರಿಗೆ ಕುಟುಂಬ ಘಟಕ. ವ್ಯವಸ್ಥೆ ಕಾಲೇಜಿನವರದೇ! ಈ ವಿಶ್ವವಿದ್ಯಾಲಯದಲ್ಲಿ ಓದುವವರು ಹೊರಗಡೆ ಸ್ವತಂತ್ರರಾಗಿ ಮನೆ ಮಾಡುವಂತಿಲ್ಲ. ಕಾಲೇಜು ಹಾಸ್ಟೆಲಲ್ಲೇ ಇರಬೇಕು. ಹಿಂದಿನ ನಮ್ಮ ಗುರುಕುಲಗಳಲ್ಲಿ ಗುರುವಿನ ಸನಿಹದಲ್ಲಿ ಶಿಷ್ಯನು ಕುಳಿತು ಶಾಸ್ತ್ರಾಧ್ಯಯನ ಮಾಡುವಂತೆ ಇಲ್ಲಿಯ ಪದ್ಧತಿ. ಮಿತ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಕೊಡಲಾಗುತ್ತದೆ. ವೈಯಕ್ತಿಕ ಗಮನಕೊಡಲು ಅಧ್ಯಾಪಕನಿಗೆ ಅವಕಾಶ. ಒಬ್ಬ ವ್ಯಕ್ತಿ ವಿಶ್ವವಿದ್ಯಾಲಯದ ಸಂಸ್ಕರಣಾಗಾರದಲ್ಲಿ ಸಂಸ್ಕರಣಗೊಂಡು ಹೊರಬರುವಾಗ ಅಲ್ಲಿಯ ಮುದ್ರೆ ಹೊತ್ತು ಬರುವನು. ಆಗ ಅವನ ಸಾಮರ್ಥ್ಯ, ಜ್ಞಾನದ ಮಟ್ಟ ಕಡಿಮೆ ಇದ್ದರೆ ಆ ಪದವಿಗೆ ಮತ್ತು ವಿದ್ಯಾಲಯಕ್ಕೆ ಕಳಂಕ ಬರುವುದು ಎಂಬರಿವು ಸದಾ ಜಾಗೃತ. ಅನೇಕ ಬಾರಿ ನಮ್ಮ ವಿದ್ಯಾಲಯಗಳಲ್ಲಿ ಘಟಿಸುವಂತೆ ಯಾರೋ ಪ್ರಬಂಧ ಬರೆಯುವುದು, ಯಾರಿಗೋ ಡಾಕ್ಟರೇಟ್ ಸಿಗುವುದು—ಇಂಥವು ನಡೆಯವಲ್ಲಿ. ಇನ್ನು ಕೆಲಸಲ ಹೇಗೋ ಡಿಗ್ರಿ ಸಂಪಾದಿಸಿ ಆ ಪ್ರಬಂಧವನ್ನು ಗ್ರಂಥಾ

ಲಯದೊಳಗೆ ಸೇರಿಸಿದರೆ ಆಯಿತು, ಅದನ್ನು ಪ್ರಕಟಿಸುವಂತೆಯೇ ಇರುವುದಿಲ್ಲ. ಪುಣ್ಯಕ್ಕೆ ಇಂಥ ಶೈಕ್ಷಣಿಕ ಪತನ ಆಂಗ್ಲನಾಡಿನಲ್ಲಿ ಮುಖ್ಯವಾಗಿ ಆಕ್ಸ್‌ಫರ್ಡಿನಲ್ಲಿ ಆಗಿಲ್ಲ. ಇದು ಅವರಿಗೆ ಹೆಮ್ಮೆ – ಅಭಿಮಾನಗಳ ಸಂಗತಿ.

ಡಾ|| ರಿಚರ್ಡರು ನಾನು ಪಿ ಹೆಚ್.ಡಿ. ಓದಲು ಏನೂ ಅಭ್ಯಂತರವಿಲ್ಲವೆಂದು ತಾವೇ ಮಾರ್ಗದರ್ಶಕರಾಗಲು ಸಂತೋಷದಿಂದ ಸಿದ್ಧವಾಗಿದ್ದಾರೆಂದು ಭರವಸೆ ನೀಡಿದರು. ಅರ್ಜಿಸಲ್ಲಿಸಲು ಬೇಕಾದ ವಿವರಗಳನ್ನು, ಅರ್ಜಿಪತ್ರ, ಪ್ರಾಸ್ಪೆಕ್ಟಸ್‌ಗಳನ್ನು ಕೊಟ್ಟು "ಆದಷ್ಟು ಬೇಗ ನಿಮ್ಮ ಅಭ್ಯಾಸ ಪ್ರಾರಂಭವಾಗುವುದನ್ನು ನಿರೀಕ್ಷಿಸುತ್ತೇವೆ" ಎಂದರು. ನಾನು ಸಂತೋಷದಿಂದ ಅಲ್ಲಿಂದ ಹೊರಟಾಗ ಸಂಜೆ ಐದು. ಐದೂವರೆಗೆ ಬಂದ ಗಾಡಿ ಹಿಡಿದು ಲಂಡನ್ ಕಡೆ ಹೊರಟೆ ಪಿ ಹೆಚ್.ಡಿ. ಮಾಡುವ ಕನಸು ಕಾಣುತ್ತ.

(ಸಶೇಷ)

ಸತಿಪತಿ ಉಭಯವೃಷ್ಟಿಯಾಗಿ ಕೂಡಬಲ್ಲಡೆ
ಅದೇ ಮಾಟ, ಕೂಡಲ ಸಂಗಮ ದೇವರ ಕೂಡುವ ಕೂಟ.

ವಧು - ವರಾನ್ವೇಷಣ ವಿಭಾಗ

ಮಾನ್ಯ ಬಂಧುಗಳೇ,

ಈ ಕಾಲದಲ್ಲಿ 'ಮದುವೆ'ಯೊಂದು ಬೃಹದಾಕಾರದ ಸಮಸ್ಯೆ. ಇದರ ತೀವ್ರತೆ ಕಡಿಮೆ ಮಾಡಲು ಕಲ್ಯಾಣ ಕಿರಣ ತಮಗೆ ನೆರವಾಗಬಯಸಿದೆ. ತ್ವರಿತವಾಗಿ ಬೆಳೆಯುವ ಜನಸಂಖ್ಯೆ, ಬೃಹದಾಕಾರದಲ್ಲಿ ಬೆಳೆಯುತ್ತಿರುವ ಪಟ್ಟಣಗಳು, ಚದುರುತ್ತಿರುವ ಜನಾಂಗ–ಈ ಎಲ್ಲವುಗಳ ಮಧ್ಯೆ ಅಭಿರುಚಿ, ಮನೆತನ, ಸೂಕ್ತ ಶಿಕ್ಷಣ, ಸ್ವಜಾತಿ ಇತ್ಯಾದಿಗಳನ್ನು ಹುಡುಕುತ್ತ ಸೂಕ್ತ ಸಂಗಾತಿಯನ್ನು ಪತ್ತೆಹಚ್ಚುವುದು ಕಷ್ಟ. ಆದಕ್ಕಾಗಿ ಈ ವಿಭಾಗವನ್ನು ತೆರೆಯಲಾಗುತ್ತಿದೆ.

ತಾವು ಮಾಡಬೇಕಾದುದಿಷ್ಟು :

1. ವರಬೇಕೋ ಕನ್ಯಾಬೇಕೋ ?
2. ನಿಮ್ಮ ವರ/ಕನ್ಯೆಯ ಅರ್ಹತೆ ಏನು? ನೀವು ನಿರೀಕ್ಷಿಸುವ ಗುಣಮಟ್ಟವೇನು?
3. ವರ/ಕನ್ಯೆಯ ವಯಸ್ಸು, ಶಿಕ್ಷಣ.
4. ಹುಟ್ಟಿದ ಜಾತಿ, ಧರ್ಮ, ನಿಮಗೆ ಬೇಕಾಗಿರುವ ಜಾತಿ, ಧರ್ಮದ ವ್ಯಕ್ತಿ (ಅಂತರ್ಜಾತೀಯ ವಿವಾಹದ ಅಪೇಕ್ಷೆ ಇದ್ದರೆ ಅದನ್ನೂ ನೇರವಾಗಿ ಬರೆಯಿರಿ
5. ಸಾಧ್ಯವಿದ್ದರೆ ತಂದೆಯ ವೃತ್ತಿ ವಿವರ.

6. ಎತ್ತರ ದೇಹದಾರ್ಢ್ಯತೆ, ಬಣ್ಣ, ರೂಪಗಳ ವಿವರ
7. ಇನ್ನೇನಾದರೂ ವಿಶೇಷವಾಗಿ ತಿಳಿಸುವುದಿದ್ದರೆ

ಈ ವಿಷಯಗಳನ್ನು ಇನ್‌ಲ್ಯಾಂಡ್ ಅಥವಾ ಕವರ್‌ನಲ್ಲಿಟ್ಟು ವಿಳಾಸ ಬರೆದು ಕಳಿಸಿ. ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು. ಪ್ರಕಟಣಾ ವೆಚ್ಚ ರೂ ೧೦ (ಹತ್ತು) ಒಂದು ಪ್ರಕಟಣೆಗೆ, (ಸತತ ಪ್ರಕಟಣೆಗೆ ರಿಯಾಯಿತಿ ಇದೆ) ಇವರು ತಮ್ಮ ವಿಳಾಸ ಮತ್ತು ಪೂರ್ತಿ ವಿವರ ಮುದ್ರಿಸಬೇಕು. ಅಪೇಕ್ಷೆಯುಳ್ಳವರು ನೇರವಾಗಿ ನಿಮ್ಮೊಡನೆ ವ್ಯವಹರಿಸುವರು. ಹೆಸರು, ವಿಳಾಸ ಕಾಣಿಸಲು ಇಚ್ಛಿಸದವರು, c/o ಕಲ್ಯಾಣ ಕಿರಣ ವಿಳಾಸ ಕೊಡಲು ಬಯಸುವರು ೨೦ರೂಗಳನ್ನು ಕಳಿಸಬೇಕು. ಕಾರ್ಯಾಲಯದವರೇ ವ್ಯವಹರಿಸಿ ವಿವರಗಳನ್ನು ತಿಳಿಸುವರು.

ವಿಶೇಷ ಸೂಚನೆಗಳು.

1. ಎಲ್ಲ ಜಾತಿ, ಮತ, ಪಂಥ, ಧರ್ಮಗಳವರು ಈ ರೀತಿ ಪ್ರಕಟಣೆ ಕೊಟ್ಟು ಸದುಪಯೋಗ ಪಡೆಯಬಹುದು.
2. ತಮ್ಮ ವರ/ಕನ್ಯೆಯ ಭಾವ ಚಿತ್ರ ಕೊಡಬಯಸುವವರು ಬ್ಲಾಕ್ ಮೇಕಿಂಗ್ ಮತ್ತು ಅದರ ಪ್ರಕಟಣಾ ವೆಚ್ಚ ಕೊಡಬಹುದು.
3. ನಿಗದಿಯಾದ ಶುಲ್ಕವನ್ನು ಮನಿಯಾರ್ಡರ್, ಡ್ರಾಫ್ಟ್, ಪೋಸ್ಟಲ್ ಆರ್ಡರ್, ಚೆಕ್ (ಚೆಕ್ಕು ಕೊಡುವವರು ೫೦ ಪೈಸೆ ಜಾಸ್ತಿ ಕಳಿಸಬೇಕು) ಮೂಲಕ ಕಳಿಸಬೇಕು. ನಿಗದಿಯಾದ ಶುಲ್ಕ ಸಲ್ಲಿಸದಿದ್ದರೆ ಪ್ರಕಟಿಸಲಾಗುವುದಿಲ್ಲ.
4. ವಿವರಗಳನ್ನು ಸರಿಯಾಗಿ ಒದಗಿಸಬೇಕು. ನಂತರ ಉಭಯತರಿಗೂ ವಿಳಾಸ ನೀಡಿ ಸಂಪರ್ಕ ಕಲ್ಪಿಸಿದ ಮೇಲೆ ತಮ್ಮ ತಮ್ಮಲ್ಲೇ ವ್ಯವಹಾರ ಮಾಡಬೇಕು.
5. ವಿಳಾಸ ಸಹಿತ ಕೊಟ್ಟ ಪ್ರಕಟಣೆದಾರರೊಡನೆ ನೇರವಾಗಿ ತಾವೇ ವ್ಯವಹರಿಸಿ.
6. ಪ್ರಕಟಣೆ ನೋಡಿ c/o ಕಲ್ಯಾಣ ಕಿರಣಕ್ಕೆ ಬರೆದು ವಿವರ ಪಡೆಯಬಯಸುವವರು ೫ ರೂಪಾಯಿ ಶುಲ್ಕವನ್ನು ಕೊಡಬೇಕು.

ಕಾರ್ಯದರ್ಶಿ
ಷಡಕ್ಷರಸ್ವಾಮಿ

ವ್ಯವಹರಿಸುವ ವಿಳಾಸ

ದೂರವಾಣಿ
82335

ವಧು–ವರಾನ್ವೇಷಣ ವಿಭಾಗ
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ೨೪
ಎರಡನೆ ಬ್ಲಾಕು, ಕಾರ್ಡ್ ರಸ್ತೆ
ರಾಜಾಜಿನಗರ, ಬೆಂಗಳೂರು-೫೬೦೦೧೦

ಕಾರ್ಯಕ್ರಮಗಳ ವಿವರ

ಬಸವ ಮಂಟಪದಲ್ಲಿ

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ, ಕನ್ನಡ ನುಡಿ-ನಾಡುಗಳಿಗೆ ಅಸೀಮ ಸೇವೆ ಸಲ್ಲಿಸಿರುವ, ಕನ್ನಡ ನುಡಿಯ ಇಂಚರವನ್ನು ದಿಲ್ಲಿಗೊಯ್ದು ಮುಟ್ಟಿಸಿದ ಜನಪ್ರಿಯ ಸಂಘಟಕ ಶರಣ **ಜಿ. ನಾರಾಯಣರಿಗೆ** ಸತ್ಕಾರವನ್ನು ಮಾಡಲಾಯಿತು, ದಿ. 9-7-1978ರ ಭಾನುವಾರದಂದು ಸಂಜೆ ಆರೋಗ್ಯ ಮಂತ್ರಿಗಳಾದ ಮಾರ್ಗದ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಬಸವಣ್ಣನವರ ಭಾವಚಿತ್ರವನ್ನು ಆಶೀರ್ವದಿಸಿ ಗೌರವಿಸಲಾಯಿತು. ಕರ್ನಾಟಕ ರಾಜ್ಯದ ಆರೋಗ್ಯ ಮಂತ್ರಿಗಳು, ಜನಪ್ರಿಯ ಸಮಾಜ ಧುರೀಣರೂ, ಸತ್ವಗುಣ ಸಂಪನ್ನರೂ ಆದ ಶರಣ. ಮಾರ್ಗದ ಮಲ್ಲಪ್ಪನವರಿಂದ ಇನ್ನೂ ಹೆಚ್ಚು ಹೆಚ್ಚಿನ ಸೇವೆ ಸಮಾಜ-ರಾಷ್ಟ್ರಗಳಿಗೆಸಲ್ಲಲೆಂದು ಹಾರೈಸಿ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು ಆಶೀರ್ವದಿಸಿದರು. ಪೂಜ್ಯ ಸ್ವಾಮೀಜಿಯವರ ಸನ್ನಿಧಾನದಲ್ಲಿ ನಡೆದ ಸಭೆಗೆ ಜನಪದ ಸಾಹಿತಿಗಳಾದ ಶರಣ ಕೆ. ಆರ್. ಲಿಂಗಪ್ಪ ಮತ್ತು ಶರಣ ಗೊ. ರು. ಚ. ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು "ಕ್ರಾಂತಿ ಪುರುಷ" ಬಸವಣ್ಣ ಎಂಬ ವಿಷಯವನ್ನು ಕುರಿತು ಪ್ರವಚನ ನೀಡಿದರು. ಸಾಮೂಹಿಕ ಭಜನೆ, ಪ್ರಾರ್ಥನೆಗಳೊಡನೆ ಆರಂಭವಾದ ಸಮಾರಂಭ ಮಂಗಲದೊಡನೆ ಮುಕ್ತಾಯವಾಯಿತು.

ಬಿ. ಇ. ಎಲ್. ನಲ್ಲಿ ವಿಶ್ವಧರ್ಮ ಪ್ರವಚನ

ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ ಎಂಬ ಸುಪ್ರಸಿದ್ಧ ಕಾರ್ಖಾನೆಯ ನಾಗರಿಕರಿಗೋಸ್ಕರ ಅಲ್ಲಿಯ ಶ್ರೀ ಗಣಪತಿ ದೇವಾಲಯದ ಸಮುದಾಯ ಮಂದಿರ (Community Hall) ದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ದಿ. 10-7-1978 ರಿಂದ ಪ್ರವಚನವನ್ನು ಆರಂಭಿಸಿದ್ದಾರೆ. ಈ ಕಾರ್ಯಕ್ರಮವು ಪ್ರತಿ ದಿನ ಸಂಜೆ 6-30 ಯಿಂದ 8-30 ವರೆಗೆ ನಡೆಯುತ್ತಿದ್ದು, ಬುದ್ಧಿಜೀವಿಗಳೇ ಹೆಚ್ಚಾಗಿ ವಾಸಿಸುವ ಈ ಪ್ರದೇಶದಲ್ಲಿ ಅಸಂಖ್ಯಾತರನ್ನು ಆಕರ್ಷಿಸುತ್ತಿದೆ. ಪ್ರಾರಂಭದ ದಿನದಿಂದ ಶ್ರೀ ಗಣಪತಿ ಸೇವಾ ಮಂಡಲಿಯ ಅಧ್ಯಕ್ಷರಾದ ಕೆ. ಮಲ್ಲಪ್ಪನವರು ಪೂಜ್ಯ ಶ್ರೀಗಳನ್ನು ಸ್ವಾಗತಿಸಿದರು. ದಿನದಿನಕ್ಕೆ ಅಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನು ಶ್ರೀಗಳವಾಣಿ ಆಕರ್ಷಿಸಿ, ಧರ್ಮ-ದೇವರುಗಳ ಬಗ್ಗೆ ಆಸಕ್ತಿ ಹುಟ್ಟಿಸಿ, ಮಂತ್ರ ಮುಗ್ಧರನ್ನಾಗಿ ಮಾಡುತ್ತಿದೆ.

ಸರ್ವೋದಯ ಪಾದಯಾತ್ರಾ ಪ್ರಚಾರಕರ ಪ್ರವಚನ : ದಿ. 16-7-1978ರ ಭಾನುವಾರದಂದು ಸಂಜೆ 6-30ಗೆ ಪರಮ ಪೂಜ್ಯ ಜಗದ್ಗುರು ಮಾತೆ ಮಹಾದೇವಿ ಅವರ ದಿವ್ಯ ಅಧ್ಯಕ್ಷತೆಯಲ್ಲಿ ಸರ್ವೋದಯ ಪ್ರಚಾರಕರಾದ ಶ್ರೀ ಸಿದ್ಧರಾಮ [illegible]ಯವರಿಂದ ಪ್ರವಚನ ನಡೆಯಿತು. ಶ್ರೀ ಗುರುಪುತ್ರಪ್ಪನವರು ಇಂಚಗೇರಿ ಆಧ್ಯಾತ್ಮಿಕ ಪ್ರವಚನ ಮಾಡಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ನೀಡಿದರು. ಮಂಗಲದೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಸ್ಕೃತಿ ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ,
ಬೆಂಗಳೂರು-೫೬೦೦೧೦


ಕಲೆ :
ಬಿ. ಪಿ. ಕೃಷ್ಣಯ್ಯ

ಮುದ್ರಣ : ಶ್ರೀ ಸುಬ್ರಮಣ್ಯ ಪ್ರಿಂಟರ್ಸ್
ಬೆಂಗಳೂರು-೪೦

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು) ರೂಪಾಯಿ ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



Correspond to :

BASAVA MANTAPA

No. 24, Chord Road, II Block, Rajajinagar

Bangalore - 560010